ಸಂಪುಟ: 05 ಸಂಚಿಕೆ: 343 ಪುಟಗಳು: 08 ಬುಧವಾರ 25 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ನಮ್ಮ ನೈತಿಕ ಪ್ರಕೃತಿ ಎಷ್ಟು ಉನ್ನತಮಟ್ಟದ್ದಾಗಿರುತ್ತದೋ ನಮ್ಮ ಉನ್ನತಿಯೂ ಅಷ್ಟೇ ಎತ್ತರದ್ದಾಗಿರುತ್ತದೆ.

# ರಾಜಕೀಯ ಕಿತ್ತಾಟ ಯುವಶಕ್ತಿಗೆ ಗೋಳಾಟ

**ವಿವಿಧ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ಉದ್ಯೋಗ ಆಕಾಂಕ್ಷಿಗಳು ನಡೆಸಿದ ಪ್ರತಿಭಟನೆಯಲ್ಲಿ ಹೋರಾಟದ ನಾಯಕತ್ವವಹಿಸಿದ್ದ ಕಾಂತಕುಮಾರ ಅವರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು. ಪ್ರತಿಭಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಸ್ನೇಹಲ್ ಅವರು ಬಂದು ಮನವಿ ಸ್ವೀಕರಿಸಿ ತೆರಳಿದರು. ಬೆಳಗ್ಗೆಯಿಂದ ಹೋರಾಟದಲ್ಲಿ ಭಾಗವಹಿಸಿದ್ದ ವಿಪಕ್ಷ ಉಪನಾಯಕ ಅರವಿಂದ ಬೆಲ್ಲದ್ ತೆರಳುತ್ತಿದ್ದಂತೆ, ಹೋರಾಟದ ನಾಯಕತ್ವವಹಿಸಿದ್ದ ಕಾಂತಕುಮಾರ ಸೇರಿದಂತೆ ಇನ್ನಿತರರನ್ನು ಪೊಲೀಸರು ವಶಕ್ಕೆ ಪಡೆದುಕೊಂಡರು.**




**ಧಾರವಾಡದಲ್ಲಿ ಉದ್ಯೋಗಾಕಾಂಕ್ಷಿಗಳ ಹೋರಾಟ**

**ಕೆಲವರನ್ನು ವಶಕ್ಕೆ ಪಡೆದ ಪೊಲೀಸರು**

### ಸರ್ಕಾರ ದಿವಾಳಿ, ನೇಮಕಾತಿಯಾಗಿಲ್ಲ

ಧಾರವಾಡದಲ್ಲಿ ಸಾವಿರಾರು ವಿದ್ಯಾರ್ಥಿಗಳು ಉದ್ಯೋಗಾಕಾಂಕ್ಷಿಗಳು ಸರ್ಕಾರಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆಸಿರುವಾಗಲೇ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ವಿಪಕ್ಷ ನಾಯಕ ಆರ್. ಅಶೋಕ್, ರಾಜ್ಯದಲ್ಲಿ ಕಳೆದ ಎರಡೂವರೆ ವರ್ಷಗಳಲ್ಲಿ ಒಬ್ಬ ನಿರುದ್ಯೋಗಿಗೂ ಕಾಂಗ್ರೆಸ್ ಸರ್ಕಾರ ಉದ್ಯೋಗ ನೀಡಿಲ್ಲ ಎಂದು ಆರೋಪಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರದ ಕಚ್ಚಾಟದಲ್ಲಿ ಮುಳುಗಿದ್ದಾರೆ. ಈ ಕಚ್ಚಾಟದಲ್ಲಿ ಸರ್ಕಾರಿ ಹುದ್ದೆಗಳ ಭರ್ತಿಗಾಗಲೀ, ಅಭಿವೃದ್ಧಿಗಾಗಲೀ ಗಮನ ಹರಿಸಲು ಇವರಿಂದ ಆಗಿಲ್ಲ ಎಂದು ಹರಿಹಾಯ್ದರು.

| ಯಾವ ಇಲಾಖೆಯಲ್ಲಿ ಎಷ್ಟು ಹುದ್ದೆ ಖಾಲಿ | |
|---|---|
| ಶಾಲಾ ಶಿಕ್ಷಣ ಸಾಕ್ಷರತೆ | 79,694 |
| ಆರೋಗ್ಯ ವೈದ್ಯಕೀಯ ಶಿಕ್ಷಣ | 37,572 |
| ಒಳಾಡಳಿತ ಇಲಾಖೆ | 28,188 |
| ಉನ್ನತ ಶಿಕ್ಷಣ | 13,599 |
| ಪಶುಸಂಗೋಪನೆ | 11,020 |
| ಕಂದಾಯ ಇಲಾಖೆ | 10,867 |
| ಗ್ರಾಮೀಣಾಭಿವೃದ್ಧಿ | 10,504 |
| ಪರಿಶಿಷ್ಟ ಜಾತಿ ಕಲ್ಯಾಣ | 9,646 |
| ಹಿಂದುಳಿದ ವರ್ಗಗಳ ಕಲ್ಯಾಣ | 8,525 |
| ಆರ್ಥಿಕ ಇಲಾಖೆ | 7,668 |
| ಕಾನೂನು ಇಲಾಖೆ | 7,659 |
| ಕೃಷಿ ಇಲಾಖೆ | 6,876 |
| ಅರಣ್ಯ ಇಲಾಖೆ | 6,478 |

• ಉದಯವಾಹಿನಿ, ಧಾರವಾಡ

ಪೊಲೀಸರು ಅನುಮತಿ ನೀಡದಿದ್ದರೂ ಹೋರಾಟ ಮಾಡುವ ಮೂಲಕ ಆಕಾಂಕ್ಷಿಗಳು ಸರ್ಕಾರಕ್ಕೆ ಬಿಸಿ ಮುಟ್ಟಿಸಿದರು. ಇನ್ನೊಂದೆಡೆ ಹೋರಾಟಕ್ಕೆ ಕರೆ ನೀಡಿದ್ದ ಬಿಜೆಪಿಯವರು ಪ್ರತಿಭಟನೆ ಮಾಡಿದರು. ಯುವಶಕ್ತಿಯ ಹೋರಾಟದ ಮುಂದೆ ಬಿಜೆಪಿ ನಾಯಕರಿಗೆ ಮುಜುಗರ ಉಂಟು ಮಾಡಿತು.

ರಾಜ್ಯದಲ್ಲಿ 2,85,000 ಸರ್ಕಾರಿ ಹುದ್ದೆಗಳು ಖಾಲಿಯಿವೆ. ಅವುಗಳನ್ನು ಭರ್ತಿ ಮಾಡುವಂತೆ ಬಿಜೆಪಿ ಹೋರಾಟ ಹಮ್ಮಿಕೊಂಡಿತ್ತು. ಇದೇ ವೇಳೆ ಉದ್ಯೋಗಾಕಾಂಕ್ಷಿಗಳ ಹೋರಾಟ ವೇದಿಕೆಯೂ ಅನುಮತಿ ಕೋರಿ ಅರ್ಜಿ ಸಲ್ಲಿಸಿತ್ತು. ಆದರೆ ಉಪನಗರ ಠಾಣೆ ಪೊಲೀಸರು ಅನೇಕ ಕಾರಣಗಳನ್ನು ನೀಡಿ ಈ ಸಂಘಟನೆಗೆ ಅನುಮತಿ ನೀಡಲಿಲ್ಲ. ಅತ್ತ ಬಿಜೆಪಿಗೆ ಅನುಮತಿ ನೀಡಿದರು. ಇದನ್ನು ಪ್ರಶ್ನಿಸಿ ಸಂಘ ಹೈಕೋರ್ಟ್ ಮೊರೆ ಹೋಗಿದ್ದರೂ ನೇರವಾಗಿ ಪೊಲೀಸರೊಂದಿಗೆ ನೀವು ಮಾತನಾಡಿಕೊಳ್ಳಿ ಎಂದು ಹೇಳಿ ಮಾರ್ಚ್ 3ಕ್ಕೆ ಕೋರ್ಟ್ ಅರ್ಜಿ ವಿಚಾರಣೆಯನ್ನು ಮುಂದೂಡಿತ್ತು.

ಇದೇ ವೇಳೆ ನಡೆಯಲಿದ್ದ ಬಿಜೆಪಿ ಹೋರಾಟಕ್ಕೆ ಸಂಘಟನೆ ಬೆಂಬಲ ಕೊಡುವುದಾಗಿಯೂ ಹೇಳಿತ್ತು. ಆದರೆ ಅದಕ್ಕೂ ಮುನ್ನವೇ ಸಂಘಟನೆ ಅಧ್ಯಕ್ಷ ಕಾಂತಕುಮಾರ್ ನೇತೃತ್ವದಲ್ಲಿ ನಗರದ ಶ್ರೀನಗರ ವೃತ್ತದಿಂದ ಸಾವಿರಾರು ಸಂಖ್ಯೆಯಲ್ಲಿ ಯುವಕರು ಬೀದಿಗೆ ಇಳಿದು ಪ್ರತಿಭಟನೆಗೆ ಮುಂದಾಗಿದ್ದರು. ಬಿಜೆಪಿ ಕಾರ್ಯಕರ್ತರು ಹಾಗೂ ನಾಯಕರು ಬರೋದಕ್ಕೂ ಮುಂಚೆಯೇ ಸಾವಿರಾರು ವಿದ್ಯಾರ್ಥಿಗಳು ಹೋರಾಟಕ್ಕೆ ಇಳಿದು, ಪೊಲೀಸರಿಗೆ ಶಾಕ್ ನೀಡಿದ್ದರು. ಸುಮಾರು 8 ರಿಂದ 10 ಸಾವಿರದಷ್ಟು ಯುವಕ-ಯುವತಿಯರು ಬೀದಿಗೆ ಇಳಿದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಎಲ್ಲಾ ಸಚಿವರ ಭಾವಚಿತ್ರಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಿದ್ದರು.

**ಪ್ರತಿಭಟನಾಕಾರರು ವಶಕ್ಕೆ:** 'ಈ ದಿನ ವಿದ್ಯಾರ್ಥಿಗಳ ನೇಮಕಾತಿ ಬೇಗ ಆಗಬೇಕು ಎಂದು ಬಿಜೆಪಿ ಪಕ್ಷದ ವತಿಯಿಂದ ಪ್ರತಿಭಟನೆಗೆ ಕರೆಯನ್ನು ನೀಡಿದ್ದರು. ನಾವು ಸಾಕಷ್ಟು ಮಾಹಿತಿಯನ್ನು ಪಡೆದುಕೊಂಡು ನಂತರ ಪ್ರತಿಭಟನೆಗೆ ಅನುಮತಿಯನ್ನು ನೀಡಿದ್ದೆವು. ಪ್ರತಿಭಟನೆ ನಡೆಯುವ ವೇಳೆ ಕೆಲವರು ಪ್ರಚೋದನೆ ಮಾಡಿ ಜುಬಿಲಿ ಸರ್ಕಲ್‌ಗೆ ಹೋಗಬೇಕು ಎಂದು ಹೇಳಿದ್ದರಿಂದ ಅವರು ಅಲ್ಲಿಗೆ ಬಂದಿದ್ದರು. ಸುಮಾರು 2000 ದಿಂದ 2500ದಷ್ಟು ವಿದ್ಯಾರ್ಥಿಗಳುರವರೆಗೂ ಸರ್ಕಲ್ ಬಂದ್ ಮಾಡಿದ್ದನ್ನು ನಾವು ಗಮನಿಸಿದ್ದೇವೆ.

ಸಾರ್ವಜನಿಕರಿಗೆ ತೊಂದರೆಯಾಗಬಾರದು ಎಂದು ನಾವು ವಾಹನಗಳ ಸಂಚಾರ ಬದಲಾಯಿಸಿದ್ದೆವು. ಸ್ಥಳೀಯ ಶಾಸಕರು, ಅಗಸ ಆರ್ಗನೈಷನ್ ಅಧ್ಯಕ್ಷರು ಅವರೆಲ್ಲರೂ ಸೇರಿಕೊಂಡು ಮಾತನಾಡಿದ ಮೇಲೆ ಜಿಲ್ಲಾಧಿಕಾರಿಗಳು ಬಂದು ಅವರ ಬೇಡಿಕೆಯನ್ನು ಪಡೆದು ಸರ್ಕಾರದ ಗಮನಕ್ಕೆ ತರುತ್ತೇವೆ ಎಂದು ಹೇಳಿದರು. ಹೀಗಿದ್ದರೂ, ಅಗಸ ಆರ್ಗನೈಷನ್ ಅಧ್ಯಕ್ಷರು ಅಹೋರಾತ್ರಿ ಧರಣಿ ಮಾಡಬೇಕು, ಅನಿರ್ದಿಷ್ಟಾವಧಿ ಧರಣಿ ಮಾಡಬೇಕು ಹಾಗೂ ಸಿಎಂ ಬರುವವರೆಗೂ ನಾವು ಎದ್ದೇಳುವುದಿಲ್ಲ ಅಲ್ಲಿ ಭಾಗವಹಿಸಿದವರಿಗೆ ಪ್ರಚೋದನೆ ಮಾಡುತ್ತಿದ್ದಿದ್ದರ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಅವರನ್ನು ವಶಕ್ಕೆ ತೆಗೆದುಕೊಂಡೆವು. ವಿದ್ಯಾರ್ಥಿಗಳನ್ನು ಹಾಗೂ ಆಕಾಂಕ್ಷಿಗಳ ಮನವೊಲಿಸಿ ವಾಪಾಸ್ ಕಳುಹಿಸಿಕೊಟ್ಟೆವು. ಸಮಯ ಮೀರಿದ ನಂತರವೂ ಪ್ರತಿಭಟಿಸುವುದಾಗಿ ಪ್ರಚೋದಿಸಿದ ಎಂಟರಿಂದ ಹತ್ತು ಜನರನ್ನು ವಶಕ್ಕೆ ಪಡೆದಿದ್ದೇವೆ. ಕಾನೂನು ಕ್ರಮ ಕೈಗೊಂಡು ಅವರನ್ನು ಬಿಡುಗಡೆ ಮಾಡುತ್ತೇವೆ' ಎಂದು ಹು-ಧಾ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದ್ದಾರೆ.

**ಕುರ್ಚಿ ಕಿತ್ತಾಟದಲ್ಲಿ ಯುವಜನರತ್ತ ಗಮನ ಹರಿಸಲು ಈ ಸರ್ಕಾರಕ್ಕೆ ಟೈಮಿಲ್ಲ:** ಕುರ್ಚಿ ಕಿತ್ತಾಟದಲ್ಲಿ ಅಮೂಲ್ಯವಾದ 3 ವರ್ಷಗಳನ್ನು ಸರ್ಕಾರ ಪೋಲು ಮಾಡಿದೆ. ಯುವಜನರತ್ತ ಗಮನ ಹರಿಸಲು ಈ ಸರ್ಕಾರಕ್ಕೆ ಟೈಮಿಲ್ಲ ಎಂದು ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ ವಾಗ್ದಾಳಿ ಹರಿಹಾಯ್ದಿದ್ದಾರೆ. ಈ ಸಂಬಂಧ ಎಕ್ಸ್ ಪೋಸ್ಟ್ ಮಾಡಿರುವ ಅವರು, ಧಾರವಾಡದಲ್ಲಿ ಅಸಂಖ್ಯಾತ ಉದ್ಯೋಗಾಕಾಂಕ್ಷಿಗಳು ಬೀದಿಗೆ ಇಳಿದಿರುವುದನ್ನು ರಾಜ್ಯ ಸರ್ಕಾರ ಲಘುವಾಗಿ ಪರಿಗಣಿಸಬಾರದು. ಸರ್ಕಾರಿ ಹುದ್ದೆಗಳನ್ನು ಕಾಲ ಕಾಲಕ್ಕೆ ತುಂಬದೇ ನಿರ್ಲಕ್ಷಿಸಿದ ಪರಿಣಾಮವೇ ಯುವಜನರು ಪ್ರತಿಭಟನೆಯ ದಾರಿ ತುಳಿಯಲು ಕಾರಣ. ಯುವಜನರಿಗೆ ನನ್ನ ಮನವಿ ಇಷ್ಟೇ. ನಿಮ್ಮ ಪ್ರತಿಭಟನೆ ಶಾಂತಿಯುತವಾಗಿರಲಿ, ನಿಮ್ಮೊಂದಿಗೆ ನಾನಿದ್ದೇನೆ ಎಂದು ಅಭಯ ನೀಡಿದ್ದಾರೆ.

**ಬಿಜೆಪಿ ನಾಯಕರ ಬ್ಯಾನರನ್ನೇ ಹರಿದ ಅಭ್ಯರ್ಥಿಗಳು!**

ಇದೇ ವೇಳೆ ಉದ್ಯೋಗಾಕಾಂಕ್ಷಿಗಳ ಪರ ಪ್ರತಿಭಟನೆ ಮಾಡ್ತಿದ್ದ ಬಿಜೆಪಿ ನಾಯಕರ ಬ್ಯಾನರನ್ನೇ ಹರಿದು ಹಾಕಿದ ಪ್ರಸಂಗ ನಡೀತು.. ರಾಜಕೀಯ ಕಿತ್ತಾಟ, ಅಭ್ಯರ್ಥಿಗಳ ಗೋಳಾಟ ಅಂತ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದ್ರು.. ಅಭ್ಯರ್ಥಿಗಳ ಪ್ರತಿಭಟನೆಯನ್ನು ಬಿಜೆಪಿ ರಾಜಕೀಯಕ್ಕೆ ಬಳಸಿಕೊಳ್ತಿದೆ ಅಂತ ಡಿಸಿಎಂ ಡಿಕೆಶಿ ಕಿಡಿ ಕಾರಿದ್ದಾರೆ.

**ಸಾವಿರಾರು ಉದ್ಯೋಗಾಕಾಂಕ್ಷಿಗಳು ಭಾಗಿ!**

ಪ್ರತಿಭಟನೆಯಲ್ಲಿ ಸಾವಿರಾರು ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಬ್ಯಾರಿಕೇಡ್ ತಳ್ಳಿ ಮುನ್ನುಗ್ಗಿದರು. ಪೊಲೀಸರು ರಾಲಿಯನ್ನು ತಡೆದು, ಮಿಷನ್ ಕಾಂಪೌಂಡ್ ಕಡೆಗೆ ಹೋಗಬೇಕಿದ್ದ ರಾಲಿಯನ್ನು ನಿಲ್ಲಿಸಿದರು. ಪೊಲೀಸರು ಮತ್ತು ಪ್ರತಿಭಟನಾಕಾರರ ನಡುವೆ ನುಗ್ಗಾಟ ನಡೆಯಿತು. ಪ್ರತಿಭಟನಾಕಾರರು ಪೊಲೀಸರ ತಡೆಗೆ ವಿರೋಧಿಸಿ ಘೋಷಣೆ ಕೂಗಿದರು.



**ವಿನ್ಯಾಸಗಾರರು ಬೇಕಾಗಿದ್ದಾರೆ**

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ. ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ **9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical) udayavahininews@gmail.com

## ಸದನದಲ್ಲಿ ಅಬ್ಬರಿಸಿದ್ದ ಮುನಿರತ್ನ ಇದೀಗ ಕೂಲ್

• ಉದಯವಾಹಿನಿ, ಬೆಂಗಳೂರು

ಡಿಸಿಎಂ ಡಿಕೆ ಶಿವಕುಮಾರ್ ಹಾಗೂ ಆರ್ ಆರ್ ನಗರ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ನಾಯ್ಡು ನಡುವಿನ ಗುದ್ದಾಟಕ್ಕೆ ಸ್ವಲ್ಪ ಬ್ರೇಕ್ ಬಿದ್ದಿದೆ. ಇತ್ತೀಚೆಗೆ ಡಿಕೆಶಿ ವಿರುದ್ಧ ಗಣವೇಷಧಾರಿಯಾಗಿ ಮುನಿರತ್ನ ಗುಡುಗಿದ್ದರು. ವೇದಿಕೆಯಲ್ಲೇ ತಮ್ಮ ಅಸಮಾಧಾನ ಹೊರಹಾಕಿದ್ದರು. ಅಷ್ಟೇ ಅಲ್ಲದೆ ವಿಧಾನಸಭೆಯಲ್ಲೂ ತಮ್ಮ ನೋವು, ಆಕ್ರೋಶ ವ್ಯಕ್ತಪಡಿಸಿದ್ದರು. ಈ ಸಂದರ್ಭದಲ್ಲಿ ಡಿಕೆ ಶಿವಕುಮಾರ್ ಕೂಡಾ ವ್ಯಂಗ್ಯವಾಗಿ ಮುನಿರತ್ನ ಅವರಿಗೆ ಮಾತಿನಲ್ಲೇ ತಿವಿದ ಸಾಕಷ್ಟು ಪ್ರಸಂಗಗಳು ನಡೆದಿದ್ದವು. ಆದರೆ ಇದೀಗ ಮುನಿರತ್ನ ಸೈಲೆಂಟ್ ಆಗಿದ್ದಾರೆ. ಮಂಗಳವಾರ ಡಿಸಿಎಂ ಡಿಕೆ ಶಿವಕುಮಾರ್ ಅವರ ಸರ್ಕಾರಿ ನಿವಾಸಕ್ಕೆ ಆಗಮಿಸಿದ್ದರು. ಸರ್ಕಾರಿ ನಿವಾಸಕ್ಕೆ ಮುನಿರತ್ನ ಆಗಮಿಸುತ್ತಿದ್ದಂತೆ ಡಿಕೆ ಶಿವಕುಮಾರ್ ಅವರಿಗೆ ಎದುರಾದರು. ಈ ವೇಳೆ ಮುನಿರತ್ನ ಬೆನ್ನು ತಟ್ಟಿದ ಡಿಕೆ ಶಿವಕುಮಾರ್ ಬಳಿಕ ಮನೆಯೊಳಗೆ ಕಳುಹಿಸಿದರು. ನಿವಾಸಕ್ಕೆ ಬಂದಿದ್ದ ಮಾರ್ಗರೇಟ್ ಆಳ್ವಾ ಅವರನ್ನು ಬಿಳ್ಕೊಟ್ಟ ಬಳಿಕ ನಿವಾಸಕ್ಕೆ ಆಗಮಿಸಿದ ಡಿಕೆಶಿ ಅವರು ಶಾಸಕ ಮುನಿರತ್ನ ಜೊತೆಗೆ ಮಾತುಕತೆ ನಡೆಸಿದರು. ಭೇಟಿ ಹಾಗೂ ಮಾತುಕತೆ ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಮುನಿರತ್ನ, ವಿಶೇಷ ಅಧಿವೇಶನದಲ್ಲಿ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಕಾಮಗಾರಿ ವಿಚಾರಕ್ಕೆ ಸಂಬಂಧಿಸಿ ಸಮಸ್ಯೆ ಹೇಳಿಕೊಂಡಿದ್ದೆ. ಸೇತುವೆ, ಬೀದಿ ದೀಪ, ಶಾಲೆ, ಈಜುಕೊಳ ಸೇರಿದಂತೆ ಎಲ್ಲಾ ಕೆಲಸ ಕಾರ್ಯಗಳು ನಿಂತು ಹೋಗಿತ್ತು. ಹಾಗಾಗಿ ನನಗೆ ಭೇಟಿ ಮಾಡಲು ಸಮಯ ಕೊಡಿ ಅಂದಿದೆ. ಅದಕ್ಕೆ ಅವರು ಇವತ್ತು ಸಮಯ ಕೊಟ್ಟಿದರು ಎಂದರು.

## ಹಾಲು ಪ್ರೋತ್ಸಾಹ ಧನ 2 ಏರಿಕೆ ನಿರೀಕ್ಷೆ: ಬಜೆಟ್‌ನತ್ತ ಚಿತ್ತ

• ಉದಯವಾಹಿನಿ, ಬೆಂಗಳೂರು

ಹಾಲು ಉತ್ಪಾದಕರಿಗೆ ಕರ್ನಾಟಕ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಲೀಟರ್‌ಗೆ 5 ರಿಂದ 7ಕ್ಕೆ ಏರಿಸುವ ಕುರಿತು ಈ ಬಾರಿಯ ಬಜೆಟ್‌ನಲ್ಲಿ ಪ್ರಕಟಿಸುವ ನಿರೀಕ್ಷೆಯಿದೆ. ಬೆಳಗಾವಿಯಲ್ಲಿ ನಡೆದ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರೋತ್ಸಾಹಧನ ಏರಿಸುವುದಾಗಿ ಘೋಷಿಸಿದ್ದರೂ ಅದು ಜಾರಿಯಾಗಿಲ್ಲ. ಅಧಿಕೃತವಾಗಿ ಬಜೆಟ್ ಮೂಲಕವೇ ಪ್ರಕಟಿಸಿ ಜಾರಿಗೊಳಿಸುವ ಸಾಧ್ಯತೆಯಿದೆ. ಕರ್ನಾಟಕದಲ್ಲಿ ಹಾಲಿನ ಉತ್ಪಾದನೆ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದ್ದು, ಪ್ರತಿನಿತ್ಯ 1 ಕೋಟಿ ಲೀಟರ್ ಹಾಲನ್ನು ಕೆಎಂಎಫ್ ಸಂಗ್ರಹ ಮಾಡುತ್ತಿದೆ. ಪ್ರೋತ್ಸಾಹಧನ ಏರಿಕೆಯಿಂದ ಹಾಲಿನ ಉತ್ಪಾದನೆ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವ ಗುರಿಯನ್ನು ಮಹಾಮಂಡಳಿ ಇಟ್ಟುಕೊಂಡಿದೆ. ಹೆಚ್ಚಳ ಮಾಡಿತ್ತು.

ಈ ಮೊತ್ತವನ್ನು ನೇರವಾಗಿ ರೈತರ ಖಾತೆಗೆ ವರ್ಗ ಮಾಡುತ್ತಿದ್ದೇವೆ. ಮೇವಿನ ದರ, ಪಶು ಆಹಾರ ಸಹಿತ ಇತರ ಉತ್ಪನ್ನಗಳ ದರ ಏರಿಕೆ ಕಾರಣದಿಂದ ಪ್ರೋತ್ಸಾಹಧನ ಹೆಚ್ಚಿಸುವ ಬೇಡಿಕೆ ಇದೆ. ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಪ್ರೋತ್ಸಾಹಧನ 7ರೂ.ಗೆ ಹೆಚ್ಚಳ ಮಾಡುತ್ತೇವೆ ಎಂದು ಸಿದ್ದರಾಮಯ್ಯ ಹೇಳಿದ್ದರು.

# ಸಚಿವರು, ಶಾಸಕರನ್ನು ನಿಯಂತ್ರಿಸಬೇಕಿರುವುದು ಸಿಎಂ

• ಉದಯವಾಹಿನಿ, ಬೆಂಗಳೂರು

ಸಚಿವರು, ಶಾಸಕರನ್ನು ನಿಯಂತ್ರಿಸಬೇಕಿರುವುದು ಸಿಎಂ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿದರು. ಬೆಂಗಳೂರಿನಲ್ಲಿ ಮಂಗಳವಾರ ಮಾತನಾಡಿದ ಅವರು, ಕೆಪಿಸಿಸಿ ಅಧ್ಯಕ್ಷರಾಗಿದ್ದರೂ ಸಚಿವರ ಹೇಳಿಕೆಗಳ ಬಗ್ಗೆ ನೀವು ಮೌನವಾಗಿದ್ದೀರಿ ಎಂದು ಕೇಳಿದಾಗ, ''ಸಚಿವರುಗಳನ್ನು ನಿಯಂತ್ರಣ ಮಾಡಬೇಕಿರುವುದು ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು. ಶಾಸಕರನ್ನು ಅವರೇ ನಿಯಂತ್ರಿಸಬೇಕು.

ಪಕ್ಷದ ವಿಚಾರವಾಗಿ ದೆಹಲಿಗೆ ಮಾಹಿತಿ ನೀಡುವ ವಿಚಾರ ನಾನು ಮಾಡುತ್ತಿದ್ದೇನೆ'' ಎಂದು ತಿಳಿಸಿದರು.

''ಮಹದೇವಪ್ಪ ಅವರು ಕೂಡ ನಮ್ಮ ಹೈಕಮಾಂಡ್ ಆಗಿರುವುದರಿಂದ ರಾಜ್ಯದಲ್ಲಿ ಸಿಎಂ ಬದಲಾವಣೆ ಮಾಡುತ್ತಾರೆ ಎಂಬ ವಿಚಾರ, ಮಾಹಿತಿ ಅವರಿಗೆ ತಿಳಿದಿರಬೇಕು. ಹೀಗಾಗಿ ಅವರು ದಲಿತ ಸಿಎಂ ವಿಚಾರ ಪ್ರಸ್ತಾಪ ಮಾಡಿದ್ದಾರೆ'' ಎಂದು ಇದೇ ಸಂದರ್ಭದಲ್ಲಿ ತಿರುಗೇಟು ನೀಡಿದರು.

ರಾಜ್ಯ ರಾಜಕಾರಣದಲ್ಲಿ ಬದಲಾವಣೆ, ಅಧಿಕಾರ ಹಸ್ತಾಂತರ, ದಲಿತ ಸಿಎಂ ಬಗ್ಗೆ ಆಗುತ್ತಿರುವ ಚರ್ಚೆ ಕುರಿತು ಕೇಳಿದಾಗ, ''ಮಹದೇವಪ್ಪ ಅವರ ಹೇಳಿಕೆ ನೋಡಿದೆ. ಅದರ ಹೊರತಾಗಿ ಬೇರೆ ಯಾವುದೇ ಚರ್ಚೆ ಇಲ್ಲ. ಅವರಿಗೆ ಸಿಎಂ ಬದಲಾವಣೆ ಮಾಹಿತಿ ಇರಬಹುದು, ಆದರೆ ಆ ವಿಚಾರವಾಗಿ ನನಗೆ ಯಾವುದೇ ಮಾಹಿತಿ ಇಲ್ಲ'' ಎಂದರು.



ಇಲಾಖೆ ವಿಚಾರವಾಗಿ ದೆಹಲಿಗೆ ಹೋಗಬೇಕಿದೆ ಹೈಕಮಾಂಡ್ ನಿಮ್ಮನ್ನು ಹಾಗೂ ಸಿಎಂ ಅವರನ್ನು ಕರೆದಿದ್ದಾರಾ ಎಂದು ಕೇಳಿದಾಗ, ''ನನಗೆ ಯಾವುದೇ ಕರೆ ಬಂದಿಲ್ಲ. ನಾನು ನಮ್ಮ ಇಲಾಖೆಗೆ ಸಂಬಂಧಿಸಿದ ಕೆಲಸಗಳ ಮೇಲೆ ದೆಹಲಿಗೆ ಹೋಗಬೇಕಾಗಿದೆ.

**ಭಿನ್ನಮತ ಶಮನ ಹೊಣೆ ಸಿದ್ದು ಹೆಗಲಿಗೆ**

ನಗರಾಭಿವೃದ್ಧಿ ಇಲಾಖೆ ಯೋಜನೆಗೆ ಸಂಬಂಧಿಸಿದಂತೆ 1 ಲಕ್ಷ ಕೋಟಿ ರೂ. ನೀಡಲಾಗುತ್ತಿದ್ದು, ದೊಡ್ಡ ನಗರಗಳಿಗೆ ನೀಡುವುದಿಲ್ಲ ಎನ್ನುತ್ತಿದ್ದಾರೆ. ಈ ಬಗ್ಗೆ ನಮ್ಮ ನಗರಾಭಿವೃದ್ಧಿ ಸಚಿವರ ಬಳಿ ಚರ್ಚೆ ಮಾಡಿ, 2 ಹಾಗೂ 3ನೇ ಹಂತದ ನಗರಗಳ ಅಭಿವೃದ್ಧಿಗೆ ಪ್ರಸ್ತಾವನೆ ಸಿದ್ಧಪಡಿಸಲು ಹೇಳುತ್ತೇನೆ'' ಎಂದು ತಿಳಿಸಿದರು.

### ನಾನು, ಸತೀಶ್ ಜಾರಕಿಹೊಳಿ ವಾರಕ್ಕೊಮ್ಮೆ ಚರ್ಚೆ ಮಾಡುತ್ತೇವೆ

**ಜಾರಕಿಹೊಳಿ ಅವರು ನಿಮ್ಮ ಜತೆ ಚರ್ಚೆ ಮಾಡಿದ್ದಾರಾ ಎಂದು ಕೇಳಿದಾಗ, ''ಜಾರಕಿಹೊಳಿ ಅವರು ನಮ್ಮ ಹಿರಿಯ ನಾಯಕರು, ನನ್ನ ಜತೆ ಕಾರ್ಯಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ನಾವು ವಾರಕ್ಕೊಮ್ಮೆ ಮಾತನಾಡುತ್ತಿರುತ್ತೇವೆ. ನಾವು ಸಮಾನ ಮನಸ್ಕರು. ಅವರಿಗೂ ಪಕ್ಷದ ಬಗ್ಗೆ ಅಪಾರವಾದ ಚಿಂತನೆ ಇದೆ. ನಮ್ಮ ಸರ್ಕಾರವನ್ನು ಮತ್ತೆ ಅಧಿಕಾರಕ್ಕೆ ತರಲು ನಾವೆಲ್ಲ ಯೋಜನೆ ತಯಾರು ಮಾಡುತ್ತಿದ್ದೇವೆ'' ಎಂದು ತಿಳಿಸಿದರು.**

**ಹೊಸ ಪೀಳಿಗೆ, ಹೊಸ ಆಲೋಚನೆ ಬರಬೇಕು, ನಾವು ಎಷ್ಟು ದಿನ ಗೂಟ ಹೊಡೆದುಕೊಂಡಿರಲು ಸಾಧ್ಯ:** ನೂತನ ಶಾಸಕರು ಕನಿಷ್ಠ 5 ಮಂತ್ರಿ ಸ್ಥಾನವನ್ನು ಹೊಸಬರಿಗೆ ನೀಡಬೇಕು ಎಂದು ಹೈಕಮಾಂಡ್‌ಗೆ ಬರೆದಿರುವ ಪತ್ರದ ಬಗ್ಗೆ ಕೇಳಿದಾಗ, ಈ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೇನೆ. ನನಗೆ ಅವರ ಪತ್ರ ತಲುಪಿಲ್ಲ. ಎಲ್ಲರಿಗೂ ಮಂತ್ರಿಯಾಗುವ ಆಸೆ ಇರುತ್ತದೆ. ಮೋದಿ ಅವರು ಶಾಸಕರಾಗದೇ ಸಿಎಂ ಆಗಲಿಲ್ಲವೇ. ಅವರು ಕೇಳುವುದರಲ್ಲಿ ತಪ್ಪೇನಿಲ್ಲ. ಮೊದಲ ಬಾರಿಗೆ ಶಾಸಕರಾದಾಗ ಮಂತ್ರಿಯಾದವರಲ್ಲಿ ನಾನೂ ಒಬ್ಬ ಎಂದರು.

ಹೊಸ ಪೀಳಿಗೆ ಬೆಳೆಯಬೇಕು. ನಾವು ಎಷ್ಟು ದಿನ ಗೂಟ ಹೊಡೆದುಕೊಂಡು ಕೂರಲು ಸಾಧ್ಯ. ನಾನು ಸಚಿವನಾಗಿ 36 ವರ್ಷವಾಗಿದೆ.

ಹೊಸ ಪೀಳಿಗೆ, ಹೊಸ ಆಲೋಚನೆಗಳು ಬರಬೇಕು. ಹೊಸಬರು ಸಂಪುಟಕ್ಕೆ ಬರಬೇಕು ಎಂದು ಬೆಂಬಲಿಸುವವರಲ್ಲಿ ನಾನೂ ಇದ್ದೇನೆ. ಹೊಸಬರನ್ನು ನಾವು ತಯಾರು ಮಾಡಬೇಕಲ್ಲ. ಈ ಬಗ್ಗೆ ಪಕ್ಷ ತೀರ್ಮಾನ ಮಾಡುತ್ತದೆ ಎಂದು ಹೇಳಿದರು.

# ಇನ್ಮುಂದೆ ಮನೆಯಲ್ಲಿ ಕುಳಿತೇ ಅರ್ಜಿ, ಏಳನೇ ದಿನಕ್ಕೆ ಖಾತೆ ಬದಲಾವಣೆ

**• ಆಸ್ತಿ ಮಾಲೀಕತ್ವವನ್ನು ಮತ್ತಷ್ಟು ಸುಭದ್ರಗೊಳಿಸಲು ಜನರು ತಮ್ಮ ಪಹಣಿಯ ಜೊತೆಗೆ ಆಧಾರ್ ಜೋಡಣೆಗೊಳಿಸಬೇಕು**

• ಉದಯವಾಹಿನಿ, ಬೆಂಗಳೂರು

ಸ್ವಯಂ ಚಾಲಿತ ಮ್ಯುಟೇಷನ್ಗೆ ಚಾಲನೆ ನೀಡುವ ಮೂಲಕ ಜನಪರ ಮತ್ತು ಸರಳ ಆಡಳಿತವನ್ನು ಸಾರ್ವಜನಿಕರ ಮನೆಬಾಗಿಲಿಗೇ ತಲುಪಿಸಬೇಕು ಎಂಬ ಸರ್ಕಾರದ ಉದ್ದೇಶ ಈಡೇರಿದೆ ಎಂದು ಸಚಿವ ಕೃಷ್ಣ ಭೈರೇಗೌಡ ಅವರು ಅಭಿಪ್ರಾಯಪಟ್ಟರು. ಮಂಗಳವಾರ ವಿಕಾಸಸೌಧದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸ್ವಯಂ ಚಾಲಿತ ಮ್ಯುಟೇಶನ್ಗೆ ಚಾಲನೆ ನೀಡಿ ಮಾತನಾಡಿದರು.

ಕಂದಾಯ ಇಲಾಖೆಯನ್ನು ಜನಪರಗೊಳಿಸಬೇಕು, ಆಡಳಿತದಲ್ಲಿ ಸುಧಾರಣೆ ಮತ್ತು ಸರಳೀಕರಣಗೊಳಿಸಬೇಕು ಎಂಬ ನಿಟ್ಟಿನಲ್ಲಿ ಕಳೆದ ಎರಡೂವರೆ ವರ್ಷದಿಂದ ಹೆಜ್ಜೆ ಹೆಜ್ಜೆಗೂ ಹಲವಾರು ಬದಲಾವಣೆಗಳನ್ನು ತರಲಾಗುತ್ತಿದೆ.

ಆ ಬದಲಾವಣಾ ಪರ್ವದ ಮತ್ತೊಂದು ಮಹತ್ವದ ಹೆಜ್ಜೆಯೇ ಸ್ವಯಂ ಚಾಲಿತ ಮ್ಯುಟೇಶನ್ ಗೆ ಚಾಲನೆ. ಈ ಸೇವೆಯನ್ನು ಒಂದು ತಿಂಗಳಿನಿಂದ ಮಂಡ್ಯದಲ್ಲಿ ಅನುಷ್ಠಾನಗೊಳಿಸಿ ಸಾಧಕ ಪರಿಶೀಲಿಸಿ ಇಂದಿನಿಂದ ಶೇ.98 ರಷ್ಟು ಎಲ್ಲಾ ಖಾತೆ ಬದಲಾವಣೆಗಳೂ ಸ್ವಯಂ ಚಾಲಿತಗೊಳ್ಳಲು ಮುನ್ನುಡಿ ಇಟ್ಟಿದ್ದೇವೆ ಎಂದು ಸಂತಸ ವ್ಯಕ್ತಪಡಿಸಿದರು. ಖಾತೆ ಬದಲಾವಣೆ ಕಂದಾಯ ಇಲಾಖೆಯ ಮೂಲ ಜವಾಬ್ದಾರಿಗಳಲ್ಲೊಂದು. ಈ ಹಿಂದೆ ಶಾನುಬೋಗರು ಮಾಡುತ್ತಿದ್ದ ಕೆಲಸವನ್ನು ಈಗ ಭೂಮಿ ತಂತ್ರಾಂಶದ ಮೂಲಕ ಮಾಡಲಾಗುತ್ತಿದೆ. ಆದರೆ, ಇದಕ್ಕಾಗಿ ಜನ ಸಾಮಾನ್ಯರು ದಿನನಿತ್ಯ ಸರ್ಕಾರಿ ಕಚೇರಿಗಳಿಗೆ ಅಲೆಯುವುದು ಸಾಮಾನ್ಯವಾಗಿತ್ತು. ಕೆಲ ಅಧಿಕಾರಿಗಳ ಸ್ವೇಚ್ಛಾಚಾರದಿಂದ, ಅವ್ಯವಸ್ಥೆ ಮತ್ತು ಮಧ್ಯವರ್ತಿಗಳ ಕಿರುಕುಳದಿಂದ ಸಾರ್ವಜನಿಕರು ಶೋಷಣೆಗೆ ಒಳಗಾಗುತ್ತಿದ್ದರು. ಇದರಿಂದ ಸರ್ಕಾರಕ್ಕೂ ಕೆಟ್ಟ ಹೆಸರು ಉಂಟಾಗುತ್ತಿತ್ತು.



**ಜನರ ಮನೆ ಬಾಗಿಲಿಗೆ ಆಡಳಿತ ಭಾಗ್ಯ**

ಪ್ರಸ್ತುತ ಸ್ವಯಂ ಚಾಲಿತ ಮ್ಯುಟೇಷನ್ಗೆ ಚಾಲನೆ ನೀಡಲಾಗಿದ್ದು, ಈ ಎಲ್ಲಾ ಸಮಸ್ಯೆಗಳಿಗೂ ಶಾಶ್ವತ ಪರಿಹಾರ ನೀಡಿದಂತಾಗಿದೆ. ಇನ್ನೂ ಜನ ಸಾಮಾನ್ಯರು ಖಾತೆ ಬದಲಾವಣೆಗಾಗಿ ಸರ್ಕಾರಿ ಕಚೇರಿಗೆ ಅಲೆಯುವಂತಿಲ್ಲ. ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಆನ್ಲೈನ್ನಲ್ಲೇ ತಮ್ಮ ಖಾತೆ ಬದಲಾವಣೆ ಕೆಲಸಗಳನ್ನು ನಿರ್ವಹಿಸಬಹುದು ಎಂದು ವಿವರಿಸಿದರು.

''ಖಾತೆ ಬದಲಾವಣೆಗೆ ಸಂಬಂಧಿಸಿದಂತೆ ಯಾವ್ಯಾವ ಸೇವೆಗಳಿಗೆ ನೋಟೀಸ್ ನೀಡುವಂತಹ ಅಗತ್ಯ ಇರುವುದಿಲ್ಲವೋ ಅವುಗಳನ್ನು 2024 ರ ಏಪ್ರಿಲ್ ತಿಂಗಳಿನಿಂದಲೇ ಸ್ವಯಂ ಚಾಲಿತವಾಗಿ ವರ್ಗಾವಣೆ ಯಾಗುವಂತೆ ಮಾಡಲಾಗಿತ್ತು.

ಹಕ್ಕು-ಬಾಧ್ಯತೆ ದಾಖಲಾತಿ, ಋಣ ತೆಗೆಯುವುದು, ಭೂ ಪರಿವರ್ತನೆ, ಪೋಡಿ, ಭೂಸ್ವಾಧೀನ, ನ್ಯಾಯಾಲಯ ಆದೇಶ, ನ್ಯಾಯಾಲಯ ತಡೆಯಾಜ್ಞೆ, ಸರ್ಕಾರದ ಆದೇಶ, ಸಾಗುವಳಿ ಚೀಟಿ ನಮೂದು, ಪಹಣಿ ವರ್ಗಾವಣೆ ಸೇವೆಗಳನ್ನು ಈಗಾಗಲೇ ಸ್ವಯಂ ಚಾಲಿತಗೊಳಿಸಲಾಗಿತ್ತು.

ಇಂತಹ ಪ್ರಕರಣಗಳು ತಿಂಗಳಿಗೆ ಸರಾಸರಿ 2.47 ಲಕ್ಷ ಖಾತೆ ಬದಲಾವಣೆಗಾಗಿ ಬರುತ್ತವೆ. ಈ ಪೈಕಿ 1.75 ಲಕ್ಷ ಖಾತೆ ಬದಲಾವಣೆಯನ್ನು ಈಗಾಗಲೇ ಸ್ವಯಂ ಚಾಲಿತವಾಗಿ ನೆರವೇರಿಸಲಾಗಿದೆ. ಅಂದರೆ ಶೇ.65 ರಿಂದ ಶೇ.71 ರಷ್ಟು ಖಾತೆ ಬದಲಾವಣೆಯನ್ನು ಸ್ವಯಂ ಚಾಲಿತಗೊಳಿಸಲಾಗಿದೆ'' ಎಂದು ಅವರು ಇದೀಗ ಮಾಹಿತಿ ನೀಡಿದರು.

ಮುಂದುವರೆದು, ''2024 ಏಪ್ರಿಲ್ 01 ರಿಂದ 2026 ಫೆಬ್ರವರಿ 20ರ ವರೆಗಿನ ಅವಧಿಯಲ್ಲಿ 35,11,987 ಖಾತೆ ಬದಲಾವಣೆಯನ್ನು ಸ್ವಯಂ ಚಾಲಿತವಾಗಿ ಮಾಡಿದ್ದೇವೆ. ಖಾತೆ ಬದಲಾವಣೆಗೆ ಮೊದಲೆಲ್ಲಾ ಕಂದಾಯ ನಿರೀಕ್ಷಕರು (ಆರ್‌ಐ) ಕಚೇರಿಗೆ ಬಂದು ಬೆರಳಚ್ಚು ಕೊಡುವವರೆಗೆ ಈ ಕೆಲಸಗಳು ಆಗುತ್ತಿರಲಿಲ್ಲ. ಆದರೆ, ಈಗ ಅಧಿಕಾರಿಗಳ ಡಿಜಿಟಲ್ ಸಹಿಯ ಮೂಲಕ ಎಲ್ಲಾ ಕೆಲಸವೂ ಆನ್‌ಲೈನ್‌ನ್ನಲ್ಲೇ ಆಗುತ್ತಿದೆ. ಖಾತೆ ಬದಲಾವಣೆ ಮತ್ತು ತಕರಾರು ಸಲ್ಲಿಸಲು ಅಧಿಕಾರಿಗಳು ಕಚೇರಿಗೆ ಬರುವ ಅಗತ್ಯವೂ ಇಲ್ಲದ ಕಾರಣ ಅವರ ಸಮಯವೂ ಉಳಿಯುತ್ತಿದೆ'' ಎಂದು ಅವರು ಅಭಿಪ್ರಾಯಪಟ್ಟರು.



''2024 ಏಪ್ರಿಲ್ 01 ರಿಂದ 2026 ಫೆಬ್ರವರಿ 20ರ ವರೆಗಿನ ಅವಧಿಯಲ್ಲಿ 35,11,987 ಖಾತೆ ಬದಲಾವಣೆಯನ್ನು ಸ್ವಯಂ ಚಾಲಿತವಾಗಿ ಮಾಡಿದ್ದರೆ, ಕೇವಲ 5207 ಪ್ರಕರಣಗಳಲ್ಲಿ ಮಾತ್ರ ತಕರಾರು ದಾಖಲಾಗಿವೆ.

ಅಂದರೆ ನಾವು ಒಟ್ಟು ಮ್ಯುಟೇಶನ್ ಶೇ.98 ರಷ್ಟು ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆ ಮಾಡಿದಂತಾಗಿದೆ. ಯಾವುದೇ ತಕರಾರು ದಾಖಲಿಸಿದ ಪ್ರಕರಣಗಳನ್ನೂ 60 ದಿನಗಳಲ್ಲಿ ಇತ್ಯರ್ಥಗೊಳಿಸಿ ಆದೇಶ ಹೊರಡಿಸುತ್ತಿದ್ದೇವೆ'' ಎಂದು ವಿವರಿಸಿದರು.

### ಖಾತೆ ಬದಲಾವಣೆ ಹೇಗೆ

**''ಆನ್‌ಲೈನ್ ಮೂಲಕ ಖಾತೆ ಬದಲಾವಣೆಗೆ ಮನವಿ ಸಲ್ಲಿಸಿದರೆ 7 ದಿನ ನೊಟೀಸ್ ಅವಧಿ ಇರುತ್ತದೆ. ಈ ಅವಧಿಯಲ್ಲಿ ಯಾರು ಬೇಕಾದರೂ ಭೂಮಿ ತಂತ್ರಾಂಶದ ಮೂಲಕ ತಕರಾರು ಸಲ್ಲಿಸಬಹುದು. ಯಾರೂ ತಕರಾರು ಸಲ್ಲಿಸದಿದ್ದರೆ ಎಂಟನೇ ದಿನ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆಯಾಗುತ್ತದೆ. ನೋಂದಣಿಯೇತರವಾಗಿ ಖಾತೆ ಬದಲಾವಣೆಗೆ ಮನವಿ ಬಂದಂತಹ ಪ್ರಕರಣಗಳಿಗೆ 15 ದಿನ ನೊಟೀಸ್ ಅವಧಿ ಇದ್ದು, ತಕರಾರು ಸಲ್ಲಿಸಬಹುದಾಗಿದೆ. ತಕರಾರು ಇಲ್ಲದಿದ್ದರೆ 16ನೇ ದಿನ ಸ್ವಯಂ ಚಾಲಿತವಾಗಿ ಖಾತೆ ಬದಲಾವಣೆಯಾಗಲಿದೆ'' ಎಂದು ತಿಳಿಸಿದರು.**

**ಈ ದಿನದ ದರ** ಪೆಟ್ರೋಲ್: 102.98 ₹/L ಡೀಸೆಲ್ : 91.42 ₹/L ಬಂಗಾರ: ₹16,178/Gram24ct ₹14,830/Gram22ct ಬೆಳ್ಳಿ: ₹285.00/Gram

# ಸರ್ಕಾರಿ ಆಸ್ಪತ್ರೆ ಬಚಾವ್ರೋ ಸಮಾವೇಶ ಯಾವಾಗ..?

• ಉದಯವಾಹಿನಿ, ಬೆಂಗಳೂರು

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಸಿಗದೆ ಚೀಟಿ ಬರೆದುಕೊಡುವ ದುಃಸ್ಥಿತಿ ಬಂದು ಬಹಳ ದಿನಗಳಾಗಿರುವುದರಿಂದ ಸರ್ಕಾರಿ ಆಸ್ಪತ್ರೆ ಬಚಾವ್ರೋ ಸಮಾವೇಶ ಯಾವಾಗ ಮಾಡುತ್ತೀರಿ? ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರವನ್ನು ವ್ಯಂಗ್ಯಭರಿತವಾಗಿ ಪ್ರಶ್ನಿಸಿದ್ದಾರೆ. ಈ ಸಂಬಂಧ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಬಿಲ್ ಬಾಕಿ ಉಳಿಸಿಕೊಂಡಿರುವುದಕ್ಕೆ ಸ್ಕ್ಯಾನಿಂಗ್ ಸೇವೆ ಸ್ಥಗಿತಗೊಂಡಿದ್ದೂ ಆಯ್ತು. ಈಗ ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರರೋಗಿ ಕೇಂದ್ರಗಳನ್ನು ಮುಚ್ಚುವ ಪರಿಸ್ಥಿತಿ ತಂದಿಟ್ಟಿದ್ದೀರಿ ಎಂದು ವಾಗ್ದಾಳಿ ನಡೆಸಿದ್ದಾರೆ.

ನಿಮ್ಮ ನಾಲಾಯಕ್ ಕಾಂಗ್ರೆಸ್ ಸರ್ಕಾರದ ದುರಾಡಳಿತ, ದಿವಾಳಿತನದಿಂದ ದಿನನಿತ್ಯ ಪರದಾಡುತ್ತಿರುವ ಕನ್ನಡಿಗರು ಸರ್ಕಾರಕ್ಕೆ ಹಿಡಿ ಶಾಪ ಹಾಕುತ್ತಿದ್ದಾರೆ. ಇನ್ನೆಷ್ಟು ದಿನ ಸ್ವಾಮಿ ಈ ಭಂಡ ಬಾಳು ರಾಜೀನಾಮೆ ಕೊಟ್ಟು ಕರ್ನಾಟಕವನ್ನು ಉಳಿಸಿ ಎಂದು ಒತ್ತಾಯಿಸಿದ್ದಾರೆ. ಮತ್ತೊಂದು ಪೋಸ್ಟ್‌ನಲ್ಲಿ ಜಿಬಿಎ ಪಾಲಿಕೆ ವ್ಯಾಪ್ತಿಯ ಕಾರ್ಪೋರೇಷನ್ ಶಾಲಾ-ಕಾಲೇಜುಗಳ ಅಥಿತಿ ಉಪನ್ಯಾಸಕರಿಗೆ 3 ತಿಂಗಳಿಂದ ಗೌರವಧನ ಕೊಟ್ಟಿಲ್ಲ. ಕಳೆದ ವರ್ಷ ಪಾಲಿಕೆಯ ಸಶಾನ ಸಿಬ್ಬಂದಿಗೆ 8 ತಿಂಗಳಿಂದ ಸಂಬಳ ಕೊಟ್ಟಿರಲಿಲ್ಲ. ಅಲ್ಲದೆ, ಪಾಲಿಕೆಯ ಕಿರಿಯ ಆರೋಗ್ಯಾಧಿಕರಿಗಳಿಗೆ 8 ತಿಂಗಳಿಂದ ಸಂಬಳ ಕೊಟ್ಟಿರಲಿಲ್ಲ ಎಂದು ಸರ್ಕಾರದ ಗಮನ ಸೆಳೆದಿದ್ದಾರೆ.ಮಾತೆತ್ತಿದರೆ ಟನಲ್ ರೋಡು, ಸ್ಕೈ ಡೆಕ್ಕು, ಬ್ರ್ಯಾಂಡ್‌ಬೆಂಗಳೂರು ಅಂತ ದೊಡ್ಡ ದೊಡ್ಡ ಮಾತು ಆಡಿ ಬೊಗಳೆ ಬಿಡೋದಿಲ್ಲ ಸ್ವಾಮಿ, ಮೊದಲು ಪಾಲಿಕೆ ನೌಕರರಿಗೆ ಸರಿಯಾಗಿ ಸಂಬಳ ಕೊಡಿ ಎಂದು ಆಗ್ರಹಿಸಿದ್ದಾರೆ. ನಿಮ್ಮ ಘನಂದಾರಿ ಆಡಳಿತದಲ್ಲಿ ದಿನಬೆಳಗಾದರೆ ದಿನಪತ್ರಿಕೆಗಳಲ್ಲಿ, ಟಿವಿಗಳಲ್ಲಿ ಬೆಂಗಳೂರಿನ ಎಡವಟ್ಟುಗಳ ಬಗ್ಗೆ ಒಂದಲ್ಲ ಒಂದು ನಕಾರಾತಕ ಸುದ್ದಿ ಬಂದು ಬೆಂಗಳೂರಿನ ಹೆಸರು ಹಾಳಾಗುತ್ತಿದೆ. ಒಳ್ಳೆಯ ಆಡಳಿತ ಕೊಡೋದಕ್ಕೆ ನಿಮ ಕೈಲಾದರೆ ಮುಂದುವರೆಯಿರಿ, ಇಲ್ಲವಾದರೆ ಯಾರಾದರೂ ಸಮರ್ಥರಿಗೆ ದಾರಿ ಮಾಡಿಕೊಡಿ ಎಂದು ಅಶೋಕ್ ಸರ್ಕಾರಕ್ಕೆ ಚಾಟಿ ಬೀಸಿದ್ದಾರೆ.



**ಬಜೆಟ್ ಮಂಡನೆಗೂ ಮುನ್ನ ಜನರ ಪ್ರಶ್ನೆಗಳಿಗೆ ಉತ್ತರಿಸಿ :** ಬಜೆಟ್ ಮಂಡನೆಗೂ ಮುನ್ನ ಕರ್ನಾಟಕದ ಮತದಾರರನ್ನು ಕಾಡುತ್ತಿರುವ ಈ ಪ್ರಶ್ನೆಗಳಿಗೆ ಉತ್ತರಿಸಿ, ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಿ ಎಂದು ವಿಧಾನಸಭೆಯ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸರ್ಕಾರಕ್ಕೆ ಸವಾಲು ಹಾಕಿದ್ದಾರೆ. ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ಗ್ಯಾರೆಂಟಿ ಹಠಾವೋ ಆಂದೋಲನ ಶುರು ಸಿದ್ದರಾಮಯ್ಯನವರೇ ಕಳೆದ ಮೂರು ವರ್ಷಗಳಲ್ಲಿ ವಿಪಕ್ಷಗಳು, ಮಾಧ್ಯಮದವರು ರಾಜ್ಯದ ಆರ್ಥಿಕ ಸ್ಥಿತಿಗತಿ ಬಗ್ಗೆ ಪ್ರಶ್ನೆ ಮಾಡಿದಾಗಲೆಲ್ಲಾ ತಿಪ್ಪೆ ಸರಿಸುವ ಮಾತಾಡಿ, ಸುಳ್ಳು ಹೇಳುತ್ತಲೇ ಬಂದಿದ್ದೀರಿ ಎಂದು ವ್ಯಂಗ್ಯವಾಡಿದ್ದಾರೆ. ಈಗ ಮಾರ್ಚ್ 6ರಂದು ತಾವು ಮಂಡಿಸುವ ಬಜೆಟ್ ನಲ್ಲಿ ಗ್ಯಾರಂಟಿ ಹಠಾವೋ ಆಂದೋಲನ ಶುರುವಾಗುವ ಮುನ್ಸೂಚನೆಗಳು ಸಿಗುತ್ತಿವೆ. ಗ್ಯಾರೆಂಟಿ ಯೋಜನೆಗಳ ಬಗ್ಗೆ ರಾಜ್ಯದ ಜನರ ಮನದಲ್ಲಿ ಹಲವಾರು ಪ್ರಶ್ನೆಗಳಿವೆ. ಈಗಲಾದರೂ ರಾಜ್ಯದ ಜನತೆಗೆ ಸತ್ಯಾಂಶ ತಿಳಿಸಿ ಸ್ವಾಮಿ ಎಂದು ಒತ್ತಾಯಿಸಿದ್ದಾರೆ.

ಅಸಲಿಗೆ ಗ್ಯಾರೆಂಟಿ ಯೋಜನೆಗಳ ಬಗ್ಗೆ ಐಡಿಯಾ ಕೊಟ್ಟಿದ್ದು ಯಾರು ತಾವೋ, ಕೆಪಿಸಿಸಿ ಅಧ್ಯಕ್ಷರೋ, ಅಥವಾ ಕಾಂಗ್ರೆಸ್ ಪಕ್ಷದ ಚುನಾವಣಾ ತಂತ್ರಜ್ಞರೋ ಎಂದು ಪ್ರಶ್ನೆ ಮಾಡಿದ್ದಾರೆ. ಚುನಾವಣೆ ಸಂದರ್ಭದಲ್ಲಿ 5 ಗ್ಯಾರೆಂಟಿ ಯೋಜನೆಗಳನ್ನು ಘೋಷಿಸುವ ಮುನ್ನ ಇದಕ್ಕೆ ತಗುಲುವ ವೆಚ್ಚದ ಬಗ್ಗೆ ಅಂದಾಜು ಮಾಡಲಾಗಿತ್ತಾ ಎಂದು ಪ್ರಶ್ನಿಸಿದ್ದಾರೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಸಾಧ್ಯಾಧ್ಯಾತೆಗಳ ಬಗ್ಗೆ ಯಾರಾದರೂ ಆರ್ಥಿಕ ತಜ್ಞರ ಸಲಹೆ, ಅಭಿಪ್ರಾಯ ಪಡೆಯಲಾಗುತ್ತಾ, ಕೇವಲ ಚುನಾವಣೆ ಗೆಲ್ಲುವ ಹಪಹಪಿಯಿಂದ ಯಾವುದೇ ಮುಂದಾಲೋಚನೆ ಇಲ್ಲದೆ ಬೇಕಾಬಿಟ್ಟಿ ಘೋಷಣೆ ಮಾಡಿದ್ದಾ ಎಂದು ಕೇಳಿದ್ದಾರೆ.

ಪಂಚ ಗ್ಯಾರೆಂಟಿ ಯೋಜನೆಗಳ ಘೋಷಣೆ ಬಗ್ಗೆ ಹೈಕಮಾಂಡ್‌ಸೇರಿದಂತೆ ಕಾಂಗ್ರೆಸ್ ಪಕ್ಷದಲ್ಲಿ ಸರ್ವಾನುಮತ ಇತ್ತಾ, ಭಿನ್ನಾಭಿಪ್ರಾಯಗಳು ಇದ್ದವಾ ಎಂದು ಮತ್ತೊಂದು ಪ್ರಶ್ನೆ ಹಾಕಿದ್ದಾರೆ. ಬಜೆಟ್ ಮಂಡನೆಗೂ ಮುನ್ನ ಕರ್ನಾಟಕದ ಮತದಾರರನ್ನು ಕಾಡುತ್ತಿರುವ ಈ ಪ್ರಶ್ನೆಗಳಿಗೆ ಉತ್ತರಿಸಿ, ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಒಂದು ಶ್ವೇತಪತ್ರ ಹೊರಡಿಸಿ ಎಂದು ಅಶೋಕ್ ಸವಾಲು ಹಾಕಿದ್ದಾರೆ.

# ಸಚಿವ ಸ್ಥಾನಕ್ಕೆ ಪಟ್ಟು ಹಿಡಿದ ಹೊಸ ಶಾಸಕರು

## ಕಾಂಗ್ರೆಸ್ ಹೈಕಮಾಂಡ್‌ಗೆ ಪತ್ರ ಬರೆದ ಪೊನ್ನಣ್ಣ, ಶಿವಗಂಗಾ ಸೇರಿ 31 ಮಂದಿ ಯಾರು?

• ಉದಯವಾಹಿನಿ, ಬೆಂಗಳೂರು

ನಾಯಕತ್ವದ ಕುರಿತ ಚರ್ಚೆ ನಡುವೆ 'ಗೂಗ್ಲಿ' ಎಸೆದಿರುವ ಮೊದಲ ಬಾರಿಗೆ ಶಾಸನಸಭೆ ಪ್ರವೇಶಿಸಿರುವ ಕಾಂಗ್ರೆಸ್‌ನ ಶಾಸಕರು, ತಮಗೆ ಸಚಿವ ಸ್ಥಾನ ನೀಡುವಂತೆ ನೇರವಾಗಿ ಹೈಕಮಾಂಡ್ ಮೊರೆ ಹೋಗಿದ್ದಾರೆ. ಮೊದಲ ಬಾರಿ ಶಾಸಕರಾದವರು ಕೆಲ ರಾಜ್ಯಗಳಲ್ಲಿ ಮುಖ್ಯಮಂತ್ರಿಯೇ ಆಗಿದ್ದಾರಂತೆ. ಹಾಗಾಗಿ ಕರ್ನಾಟಕದಲ್ಲಿ ಇಂಥ ಹೊಸ ಮುಖಗಳಿಗೆ ಅವಕಾಶ ನೀಡಲು ಅಡ್ಡಿಯೇನು ಎಂದು ಪಟ್ಟು ಹಾಕಿದ್ದಾರೆ. ಅಧಿಕಾರ ಹಂಚಿಕೆ ಸೂತ್ರ, ನಾಯಕತ್ವ ಬದಲಾವಣೆ ಸುತ್ತ ನಡೆಯುತ್ತಿರುವ ಚರ್ಚೆಯ ಜತೆ ಜತೆಗೇ ಸಂಪುಟ ಸರ್ಜರಿಯ ಬಗ್ಗೆಯೂ ಆಗಾಗ ಪ್ರಸ್ತಾಪವಾಗುತ್ತಿದೆ. ಇದರ ಜಾಡು ಹಿಡಿದಿದ್ದ ಕಾಂಗ್ರೆಸ್ ಶಾಸಕರು ಬೆಳಗಾವಿ ಅಧಿವೇಶನಕ್ಕೆ ಮೊದಲೇ ಸಂಪುಟದ ಸ್ಥಾನಮಾನಕ್ಕಾಗಿ ಪ್ರಯತ್ನ ಆರಂಭಿಸಿದ್ದರು. ಇವರಲ್ಲಿ ಕಿರಿಯ ಶಾಸಕರೂ ಇದ್ದಾರೆ.

ನಾಯಕತ್ವದ ಸಂಬಂಧದ ಚರ್ಚೆಯ ಕಾವನ್ನು ತಗ್ಗಿಸಲು ಇಂಥದೊಂದು ಪತ್ರವನ್ನು ಮುಂಚೂಣಿಗೆ ತಂದು ಬಿಡಲಾಯಿತಾ? ಬಜೆಟ್ ಅಧಿವೇಶನದ ಬಳಿಕ ಕ್ಷಿಪ್ರ ಬೆಳವಣಿಗೆಗಳು ನಡೆಯುವ ಊಹಾಪೋಹದ ಮಧ್ಯೆ ಚರ್ಚೆಯನ್ನು ಬೇರೆಯ ದಿಕ್ಕಿಗೆ ತಿರುಗಿಸಲು ಈ ಪತ್ರವನ್ನು ಸೋರಿಕೆ ಮಾಡಲಾಯಿತಾ ಎಂಬಿತ್ಯಾದಿ ಮಾತುಗಳೂ ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ. ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರೂ ಈ ಪತ್ರಕ್ಕೆ ಸಹಿ ಹಾಕಿರುವುದು ಗಮನಾರ್ಹ. ಹೊಸಬರಿಗೆ ಮಂತ್ರಿ ಸ್ಥಾನ ನೀಡಿದರೆ 2028ಕ್ಕೆ ಪಕ್ಷ ಮರಳಿ ಅಧಿಕಾರಕ್ಕೆ ಬರಲು ಅನುಕೂಲ ಎಂದೂ ಈ ಶಾಸಕರು ಸಮರ್ಥಿಸಿಕೊಂಡಿದ್ದಾರೆ. ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಈ ಬಾರಿ 38 ಮಂದಿ ಮೊದಲ ಬಾರಿ ಆಯ್ಕೆಯಾದವರಿದ್ದಾರೆ. ಇವರಲ್ಲಿ 31 ಶಾಸಕರು ಸಹಿ ಮಾಡಿರುವ ಪತ್ರ ಇದ್ದಕ್ಕಿದ್ದಂತೆ ಬಹಿರಂಗೊಂಡಿದೆ. ಪಕ್ಷದ ವರಿಷ್ಠ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಉದ್ದೇಶಿಸಿ ಈ ಪತ್ರ ಬರೆಯಲಾಗಿದೆ. ವಿಚಿತ್ರವೆಂದರೆ, ಈ ಪತ್ರದಲ್ಲಿ ದಿನಾಂಕವನ್ನೇ ನಮೂದಿಸಿಲ್ಲ. ಆದರೆ, 31 ಶಾಸಕರು ಸಹಿ ಮಾಡಿದ್ದಾರೆ. ಇದರ ನಡುವೆ ರಾಮನಗರದ ಶಾಸಕ ಇಕ್ಬಾಲ್ ಹುಸೇನ್ ಪತ್ರ ಬರೆದಿರುವುದು ನಿಜ ಎಂದು ಒಪ್ಪಿಕೊಂಡಿದ್ದಾರೆ. ಬಳ್ಳಾರಿಯ ನಾರಾ ಭರತ್ ರೆಡ್ಡಿ ಕೂಡ ಹೊಸಬರಿಗೆ ಅವಕಾಶ ನೀಡುವಂತೆ ಕೇಳಿಕೊಳ್ಳಲಾಗಿದೆ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ.



**ಕನಿಷ್ಠ ಐವರಿಗೆ ಸ್ಥಾನ ನೀಡಿ:** ಪ್ರಥಮ ಬಾರಿಗೆ ಶಾಸಕರಾದವರು ಮುಖ್ಯಮಂತ್ರಿಯಾದ ಉದಾಹರಣೆ ಬೇರೆ ಬೇರೆ ರಾಜ್ಯಗಳಲ್ಲಿದೆ. ಹಾಗೆಯೇ ಮೊದಲ ಬಾರಿಗೆ ಶಾಸನಸಭೆಗೆ ಬಂದವರು ಸಚಿವರೂ ಆಗಿದ್ದಾರೆ. ರಾಜ್ಯದಲ್ಲಿ 2023ರಲ್ಲಿ ಕಾಂಗ್ರೆಸ್ ಸರಕಾರ ರಚಿಸುವಾಗ ಮೊದಲ ಬಾರಿಗೆ ಆಯ್ಕೆಯಾದವರಿಗೆ ಅವಕಾಶ ನೀಡಿಲ್ಲ. ಈ ಬಾರಿ ಮೊದಲ ಬಾರಿ ಆಯ್ಕೆಯಾದವರಲ್ಲಿ ಕನಿಷ್ಠ ಐವರಿಗೆ ಸಚಿವ ಸ್ಥಾನ ನೀಡಬೇಕು, ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

**ಬಣಗಳ ಗೊಡವೆ ಇಲ್ಲ:** ಹೈಕಮಾಂಡ್‌ಗೆ ಪತ್ರ ಬರೆದವರಲ್ಲಿ ಸಿಎಂ ಸಿದ್ದರಾಮಯ್ಯ ಅವರೊಂದಿಗೆ ಗುರುತಿಸಿಕೊಂಡವರು, ಡಿಸಿಎಂ ಡಿ.ಕೆ.ಶಿವಕುಮಾರ್ ಪರ ಬ್ಯಾಟಿಂಗ್ ಮಾಡುವವರು, ಇದ್ಯಾವುದರ ಗೊಡವೆಯಿಲ್ಲದೆ ತಮ್ಮ ಪಾಡಿಗೆ ತಾವಿರುವವರೂ ಇದ್ದಾರೆ. ಹಾಗಾಗಿ ಇದು ಬಣ ರಾಜಕಾರಣ ಮೀರಿದ ವಿದ್ಯಮಾನ. ಹಿರಿಯರು, ಅನುಭವಿಗಳ ಪ್ರಭಾವದ ಮುಂದೆ ತಮಗೆ ಅವಕಾಶ ತಪ್ಪಬಾರದು ಎಂದು ಈ ಕಿರಿಯರು ಮುಂಜಾಗ್ರತೆ ವಹಿಸಿದಂತಿದೆ. ಇವರೆಲ್ಲರೂ ತಾವು ಕಾಂಗ್ರೆಸ್‌ನ ಕಟ್ಟಾಳುಗಳು. ಪಕ್ಷದ ಸಿದ್ಧಾಂತದ ಪರಿಪಾಲಕರು ಎಂದು ಹೇಳಿಕೊಂಡಿದ್ದಾರೆ.

### ಸಂಪುಟ ಸರ್ಜರಿ ಸಂಚಲನ

**ಕರ್ನಾಟಕ ಸಿಎಂ ಸ್ಥಾನ ಬದಲಾವಣೆ ಚರ್ಚೆ ನಡುವೆ ಸಂಪುಟ ಸರ್ಜರಿ ಸಂಚಲನ ಮೂಡಿಸಿದೆ. 31 ಹೊಸ ಶಾಸಕರು ನಮಗೂ ಅವಕಾಶ ನೀಡಿ ಎಂದು ಹೈಕಮಾಂಡ್‌ಗೆ ಪತ್ರ ಬರೆದಿದ್ದಾರೆ. 2028 ರ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರಲು ಹೊಸಬರ ಶಕ್ತಿ ಬೇಕು ಎಂದು ಹೈಕಮಾಂಡ್ ಗಮನಕ್ಕೆ ತಂದಿದ್ದಾರೆ. ಹೈಕಮಾಂಡ್ ಮೊರೆ ಹೋದ ಶಾಸಕರ ಪಟ್ಟಿ ಇಲ್ಲಿದೆ.**

### ಸಹಿ ಮಾಡಿದ ಶಾಸಕರು ಯಾರೆಲ್ಲಾ?

- ಎ.ಎಸ್.ಪೊನ್ನಣ್ಣ
- ಇಕ್ಬಾಲ್ ಹುಸೇನ್
- ಶಿವಗಂಗಾ ಬಸವರಾಜ್
- ಮಂಥರ್ ಗೌಡ
- ನಯನಾ ಮೋಟಮ್ಮ
- ದರ್ಶನ್ ಧ್ರುವನಾರಾಯಣ್
- ಗಣಿಗ ರವಿ
- ಡಿ.ರವಿಶಂಕರ್
- ಕೆ.ಎಸ್.ಆನಂದ್
- ಅಶೋಕ್ ರೈ
- ನಾರಾ ಭರತ್ ರೆಡ್ಡಿ
- ದೇವೇಂದ್ರಪ್ಪ
- ಪ್ರಕಾಶ್ ಕೋಳಿವಾಡ
- ಬಿ.ಬಿ.ಚಿಮ್ಮನಕಟ್ಟಿ
- ಬಾಬಾಸಾಹೇಬ್ ಪಾಟೀಲ್
- ವಿಶ್ವಾಸ್ ವೈದ್ಯ
- ಮಹೇಂದ್ರ ತಮ್ಮಣ್ಣವರ್
- ಉದಯ್ ಗೌಡ
- ಚನ್ನಾರೆಡ್ಡಿ ಪಾಟೀಲ್
- ವೇಣುಗೋಪಾಲ್ ನಾಯ್ಕ
- ಎಚ್.ವಿ.ವೆಂಕಟೇಶ್
- ಎ.ಸಿ.ಶ್ರೀನಿವಾಸ್

# ಕುಡಿವ ನೀರಿನ ಸಮಸ್ಯೆಗೆ ಪರಿಹಾರ

• ಉದಯವಾಹಿನಿ, ಆನೇಕಲ್


ಪುರಸಭೆ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ 91.93 ಕೋಟಿ ವೆಚ್ಚದ ವಿವಿಧ ಕಾಮಗಾರಿಗಳಿಗೆ ಶಾಸಕ ಬಿ.ಶಿವಣ್ಣ ಸೋಮವಾರ ಭೂಮಿಪೂಜೆ ನೆರವೇರಿಸಿದರು. ಅಮೃತ್ ಯೋಜನೆಯಡಿ ಪುರಸಭೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗಿರುವ ಈ ಯೋಜನೆಯಡಿ ಹೊಸ ಮಾಧ್ಯಮಿಕ ಶಾಲಾ ಮೈದಾನ, ಆಶ್ರಯ ಬಡಾವಣೆ ಮತ್ತು ಸಂತೆ ಮೈದಾನದಲ್ಲಿ ತಲಾ 15 ಲಕ್ಷ ಲೀಟರ್ ಸಾಮರ್ಥ್ಯದ ಓವರ್ ಹೆಡ್ ಟ್ಯಾಂಕ್, ಚಿಕ್ಕಕೆರೆ ಆಟದ ಮೈದಾನದಲ್ಲಿ 15 ಲಕ್ಷ ಲೀಟರ್ ಸಾಮರ್ಥ್ಯದ ಜಲಸಂಗ್ರಹಗಾರ, ಚಿಕ್ಕಕೆರೆ ಪಂಪ್ ಹೌಸ್‌ನಲ್ಲಿ 2 ಲಕ್ಷ ಲೀಟರ್ ಸಾಮರ್ಥ್ಯದ ಸಂಗ್ರಹಣಾ ಘಟಕ, ಪಟ್ಟಣದಲ್ಲಿ 75 ಕಿ.ಮೀ. ಉದ್ದದ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಯಿತು.


ಉದಯವಾಹಿನಿ ಚಿತ್ರ

ಶಾಸಕ ಬಿ.ಶಿವಣ್ಣ ಮಾತನಾಡಿ, ತಾಲ್ಲೂಕಿಗೆ ಯಾವುದೇ ಶಾಶ್ವತ ಜಲಮೂಲಗಳಿಲ್ಲ. ಬಹುತೇಕ ವಾರ್ಡ್‌ಗಳು ಅಂತರ್ಜಲ ಅವಲಂಬಿಸಿವೆ. 75 ಕಿ.ಮೀ. ಪೈಪ್ ಲೈನ್ ಕಾಮಗಾರಿಯಿಂದ ಶೇ 95ರಷ್ಟು ವಾರ್ಡ್‌ಗಳಿಗೆ ನೀರು ಪೂರೈಸಲು ಅನುಕೂಲವಾಗಲಿದೆ. 2-3 ದಿನಗಳಿಗೊಮ್ಮೆ ನೀರು ಪೂರೈಸಬಹುದಾಗಿದೆ. ಆಶ್ರಯ ಬಡಾವಣೆಯಲ್ಲಿ ನಿರ್ಮಾಣವಾಗುವ 15 ಲಕ್ಷ ಲೀಟರ್ ಸಾಮರ್ಥ್ಯದ ಟ್ಯಾಂಕ್‌ನಿಂದ ಅಲ್ಲಿನ ನಿವಾಸಿಗಳ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದರು. ಪುರಸಭಾ ಮಾಜಿ ಅಧ್ಯಕ್ಷ ಎನ್.ಎಸ್.ಪದ್ಮನಾಭ ಮಾತನಾಡಿ, 2022ರಲ್ಲಿ ಸಂಸದರಾಗಿದ್ದ ಡಿ.ಕೆ.ಸುರೇಶ್, ಶಾಸಕ ಬಿ.ಶಿವಣ್ಣ ಅವರ ಪ್ರಯತ್ನದಿಂದ ಯೋಜನೆ ಮಂಜೂರಾಗಿತ್ತು. ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದ್ದ ಯೋಜನೆ ಈಗ ವೇಗ ಪಡೆದುಕೊಂಡಿದೆ. ಮುಂದಿನ ಒಂದು ವರ್ಷದೊಳಗೆ ನೀರಿನ ಸಮಸ್ಯೆ ಸಂಪೂರ್ಣ ಪರಿಹಾರವಾಗಲಿದೆ ಎಂದರು.

# ದಾಸ ಗಾನ ವೈಭವ

• ಉದಯವಾಹಿನಿ, ಬೆಂಗಳೂರು



ಶ್ರೀ ಗುರು ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಫೆಬ್ರವರಿ 24, ಮಂಗಳವಾರ ಸಂಜೆ 7-00ಕ್ಕೆ ಶ್ರೀ ರಾಘವೇಂದ್ರ ಸ್ವಾಮಿಗಳ ವರ್ಧಂತಿ ಮಹೋತ್ಸವದ ಅಂಗವಾಗಿ ದಾಸ ಗಾನ ವೈಭವ. ಗಾಯನ ಕು. ಅವನಿ ಭಟ್, ಕೀಬೋರ್ಡ್ ಶ್ರೀ ರಾಜೇಂದ್ರ ಬೆಂಡೆ, ತಬಲಾ ಶ್ರೀ ಸರ್ವೋತ್ತಮ. ಸ್ಥಳ ಶ್ರೀರಾಘವೇಂದ್ರ ಸ್ವಾಮಿಗಳ ಮಠ, 10ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆ, ಪ್ರಕಾಶನಗರ, ಬೆಂಗಳೂರು-560021.

# ಶೇ. 5ರಷ್ಟು ರಾಜಕೀಯ ಮೀಸಲಾತಿಗೆ ಆಗ್ರಹ ರಾಜ್ಯ ಅಂಗವಿಕಲರ ಒಕ್ಕೂಟದಿಂದ ಪ್ರತಿಭಟನೆ

• ಉದಯವಾಹಿನಿ, ಬೆಂಗಳೂರು

ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡ 5ರಷ್ಟು ರಾಜಕೀಯ ಮೀಸಲಾತಿ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರಾಜ್ಯ ಅಂಗವಿಕಲರ ಒಕ್ಕೂಟದ ವತಿಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು. ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು , ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ನಗರ ಪುನರ್ವಸತಿ ಕಾರ್ಯಕರ್ತರ ಯುಆಡಬ್ಲ್ಯು ಗೌರವ ಧನವನ್ನು 18 ಸಾವಿರದಿಂದ 25 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು. ಒಕ್ಕೂಟದ ರಾಜ್ಯ ಅಧ್ಯಕ್ಷ ಶಿವಗೇನಿ ಅತನೂರ್ ಮಾತನಾಡಿ, 2026-27ನೇ ಸಾಲಿನ ಬಜೆಟ್‌ನಲ್ಲಿ ಅಂಗವಿಕಲರಿಗೆ ವಿಶೇಷ ಅನುದಾನ ನೀಡಬೇಕು.ಶಕ್ತಿ ಯೋಜನೆಯಡಿ ಪುರುಷರಿಗೂ ಉಚಿತ ಬಸ್ ಪ್ರಯಾಣ ಸೌಲಭ್ಯ ನೀಡಬೇಕು. ಈಗಿನ ಬೆಲೆ ಏರಿಕೆಗೆ ಅನುಗುಣವಾಗಿ ಮಾಶಾಸನವನ್ನು 6 ಸಾವಿರಕ್ಕೆ ಹೆಚ್ಚಿಸಬೇಕು. ಅಂಗವಿಕಲರ ಮಕ್ಕಳಿಗೆ ಸರ್ಕಾರಿ ಹಾಗೂ ಖಾಸಗಿ ಶಾಲೆಗಳಲ್ಲಿ ಉಚಿತ ಶಿಕ್ಷಣ ಸಿಗುವಂತಾಗಬೇಕು ಎಂದು ಆಗ್ರಹಿಸಿದರು.

ಉದಯವಾಹಿನಿ ಚಿತ್ರ


• ಉದಯವಾಹಿನಿ, ಬೆಂಗಳೂರು

ಶ್ರೀರಾಘವೇಂದ್ರ ಸ್ವಾಮಿಗಳ ವರ್ಧಂತಿ ಪ್ರಯುಕ್ತ ಚಾಮರಾಜಪೇಟೆ ರಾಘವೇಂದ್ರ ಕಾಲೋನಿಯಲ್ಲಿರುವ ಶ್ರೀಪಾದರಾಜ ಮಠದಲ್ಲಿ ವೈಭವಯುತವಾಗಿ ಆಚರಿಸಲಾಯಿತು, ಈ ಸಂದರ್ಭದಲ್ಲಿ ರಾಯರಿಗೆ ವಿಶೇಷ ಫಲಪಂಚಾಮೃತ ಅಭಿಷೇಕ ಮಾಡಿ ತುಳಸಿಸಹಿತ ಸುಗಂಧ ಪುಷ್ಪಗಳಿಂದ ಅಲಂಕರಿಸಿ ಪೂಜಿಸಲಾಯಿತು, ಸಾವಿರಾರು ಭಕ್ತರು ಆಗಮಿಸಿ ರಾಯರ ದರ್ಶನ ಪಡೆದು ತೀರ್ಥ ಪ್ರಸಾದ ಸ್ವೀಕರಿಸಿದರು.

# ಧಾರ್ಮಿಕ ಭಾವನೆಗಳ ಚೇಷ್ಟೆ ಸಲ್ಲ: ರಣವೀರ್ ಸಿಂಗ್‌ಗೆ ಕರ್ನಾಟಕ ಹೈಕೋರ್ಟ್ ತರಾಟೆ

• ಉದಯವಾಹಿನಿ, ಬೆಂಗಳೂರು

ಕಾಂತಾರ ಚಾಪ್ಟರ್-1 ಚಿತ್ರದ ದೈವಪಾತ್ರಗಳನ್ನು ಅಣಕಿಸಿದ ಆರೋಪ ಎದುರಿಸುತ್ತಿರುವ ಬಾಲಿವುಡ್ ನಟ ರಣವೀರ್ ಸಿಂಗ್ ತನಿಖೆಗೆ ಸಹಕರಿಸಬೇಕು ಮತ್ತು ತನಿಖೆಗೆ ಸಹಕರಿಸಿದರೆ ಅವರ ವಿರುದ್ಧ ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು ಎಂದು ಕರ್ನಾಟಕ ಹೈಕೋರ್ಟ್ ಪ್ರಾಸಿಕ್ಯೂಷನ್ ಗೆ ಆದೇಶಿಸಿದೆ. ನನ್ನ ವಿರುದ್ಧ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ರಣವೀರ್ ಸಿಂಗ್ (41) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು. ರಣವೀರ್ ಸಿಂಗ್ ದೊಡ್ಡ ನಟ ಇರಬಹುದು. ಆದರೆ, ಮತ್ತೊಬ್ಬರ ಧಾರ್ಮಿಕ ಭಾವನೆಗಳನ್ನು ಚೇಷ್ಟೆ ಮಾಡುವ ಮೂಲಕ ಅಣಕಿಸಿ ಸವಾರಿ ಮಾಡುವುದು ಸಲ್ಲ ಎಂದು ನ್ಯಾಯಮೂರ್ತಿ ನಾಗಪ್ರಸನ್ನ ಅವರು ರಣವೀರ್ ನಡೆಯನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಷನ್ ಗೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

# ಶ್ರೀ ರಾಘವೇಂದ್ರ ಸ್ವಾಮಿಗಳ 431ನೇ ವರ್ಧಂತಿ ಉತ್ಸವಕ್ಕೆ ಸಹಸ್ರಾರು ಭಕ್ತರ ಆಗಮನ

• ಉದಯವಾಹಿನಿ, ಬೆಂಗಳೂರು

ಜಯನಗರ 5ನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳವರ 431ನೇ ಜನ್ಮದಿನೋತ್ಸವ ಪ್ರಯುಕ್ತ ಶ್ರೀ ರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಅಷ್ಟೋತ್ತರ ಪಾರಾಯಣದೊಂದಿಗೆ ಫಲಪಂಚಾಮೃತ ಅಭಿಷೇಕ ನೆರವೇರಿತು. ಇದೇ ಸಂದರ್ಭದಲ್ಲಿ ಪರಮಪೂಜ್ಯ ಶ್ರೀ ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಅಪೇಕ್ಷೆಯ ಮೇರೆಗೆ ಪರಮಪೂಜ್ಯ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ಗುರುರಾಯರ ಸನ್ನಿಧಿಗೆ ಆಗಮಿಸಿ ಸಂಸ್ಥಾನ ಪೂಜೆಯನ್ನು ನೆರವೇರಿಸಿ, ಲೋಕ ಕಲ್ಯಾಣಕ್ಕಾಗಿ ಶ್ರೀ ಗುರುರಾಘವೇಂದ್ರ ಸ್ವಾಮಿಗಳ ಬೃಂದಾವನಕ್ಕೆ ಲಕ್ಷ ಪುಷ್ಪಾ ಅರ್ಚನೆಯನ್ನು ತಮ್ಮ ಅಮೃತ ಹಸ್ತದಿಂದ ನೆರವೇರಿಸಿದರು. ಪರಮಪೂಜ್ಯ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಗಳಿಗೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರ ಆಚಾರ್ಯರು ಶ್ರೀಗಳನ್ನು ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಂಡು ಪುಷ್ಪವೃಷ್ಟಿಯೊಂದಿಗೆ ಫಲ ಸಮರ್ಪಣೆಯನ್ನು ಸಮರ್ಪಿಸಿದರು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು.

ರಾಘವೇಂದ್ರ ಸ್ವಾಮಿಗಳ ಹುಟ್ಟುಹಬ್ಬದ ಪ್ರಯುಕ್ತ ವಿಶೇಷವಾಗಿ ವಿದ್ಯುತ್ ದ್ವೀಪ, ಪುಷ್ಪಗಳಿಂದ ಅಲಂಕಾರ ಹಾಗೂ ವಿಶೇಷ ಉತ್ಸವ ಮತ್ತು ರಾಯರ ಸನ್ನಿಧಿಗೆ ಆಗಮಿಸಿದ ಸಹಸ್ರಾರು ಭಕ್ತರಿಗೆ ಅನ್ನಸಂತರ್ಪಣೆ ಕಾರ್ಯಕ್ರಮವು ನೆರವೇರಿತು. ಈ ಉತ್ಸವದಲ್ಲಿ ಭಕ್ತರು, ಸೇವಾ ಕರ್ತೃಗಳು, ಗಣ್ಯ ವ್ಯಕ್ತಿಗಳು, ಚಿತ್ರನಟ- ನಟಿಯರು, ಕಲಾವಿದರು ಸನ್ನಿಧಿಗೆ ಆಗಮಿಸಿ ಫಲ ಮಂತ್ರಾಕ್ಷತೆಯೊಂದಿಗೆ ಗುರುರಾಯರ ದರ್ಶನ ಪಡೆದು ಪ್ರಸಾದವನ್ನು ಸ್ವೀಕರಿಸಿ, ಶ್ರೀಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.


ಉದಯವಾಹಿನಿ ಚಿತ್ರ

ಈ ಸಂದರ್ಭದಲ್ಲಿ ಶ್ರೀಮಠದ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರ ಆಚಾರ್ಯರು, ಮಠದ ಧರ್ಮಾಧಿಕಾರಿಗಳಾದ ಶ್ರೀ ಕೃಷ್ಣ ಗುಂಡಾಚಾರ್ಯರು, ಪುರೋಹಿತರಾದ ಶ್ರೀ ನಂದಕಿಶೋರ್ ಆಚಾರ್ಯರು ಅರ್ಚಕರಾದ ರಾಮಚಂದ್ರಚಾರ್ಯ, ಕೃಷ್ಣಾಚಾರ್ಯ, ಶ್ರೀಮಠದ ಸಿಬ್ಬಂದಿಗಳು, ಸ್ವಯಂಸೇವಕರು, ಭಕ್ತರು ಭಾಗವಹಿಸಿ ಶ್ರೀ ಗುರುರಾಯರಿಗೆ ಸೇವೆಯನ್ನು ಸಲ್ಲಿಸಿದರು,

# ನಂದಗುಡಿ ಟೌನ್ ಶಿಪ್‌ಗೆ ಭೂಮಿ ಕೊಡಲಾರೆವು

• ಉದಯವಾಹಿನಿ, ಹೊಸಕೋಟೆ

**ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ**

ರೈತರು ತಮ್ಮ ಭೂಮಿ ಉಳಿಸಿಕೊಳ್ಳಲು ಪಕ್ಷಾತೀತವಾಗಿ ಒಗ್ಗೂಡಿ ಹೋರಾಟಕ್ಕೆ ಸನ್ನದ್ಧರಾಗಬೇಕು. ರೈತರ ಒಪ್ಪಿಗೆ ಇಲ್ಲದೆ ಅಧಿಕಾರಿಗಳು ಸರ್ವೆ ಕಾರ್ಯ ಕೈಗೊಂಡರೆ ನಮ್ಮಿಂದ ಏನೂ ಮಾಡಲು ಸಾಧ್ಯವಿಲ್ಲ ಎಂಬ ಮನೋಭಾವಕ್ಕೆ ಅವಕಾಶ ಕೊಡಬಾರದು ಎಂದು ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಅಧ್ಯಕ್ಷ ಕೆಂಚೇಗೌಡ ಹೇಳಿದರು.

ತಾಲ್ಲೂಕಿನ ನಂದಗುಡಿ ಭೂಸ್ವಾಧೀನ ವಿರೋಧಿ ಹೋರಾಟ ಸಮಿತಿ ಕಚೇರಿಯಲ್ಲಿ ಏರ್ಪಡಿಸಿದ್ದ ರೈತ ಮುಖಂಡರ ಸಭೆಯಲ್ಲಿ ಮಾತನಾಡಿದರು. ಚೀಮಸಂದ್ರ ಗ್ರಾಮದಲ್ಲಿ ಸರ್ವೆ ಕಾರ್ಯ ನಡೆಸಲು ಬಂದ ಅಧಿಕಾರಿಗಳನ್ನು ರೈತರು ತಡೆದ ಘಟನೆ ಹಿನ್ನೆಲೆಯಲ್ಲಿ ಈ ಸಭೆ ನಡೆಸಿ ಮುಂದಿನ ದಿನಗಳಲ್ಲಿ ರೈತರನ್ನು ಮತ್ತಷ್ಟು ಜಾಗೃತಗೊಳಿಸುವ ಕುರಿತು ಚರ್ಚಿಸಲಾಯಿತು. ರೈತರ ಒಪ್ಪಿಗೆ ಪಡೆಯದೆ ಸರ್ಕಾರಿ ಅಧಿಕಾರಿಗಳು ನಂದಗುಡಿ ಟೌನ್‌ಶಿಪ್ ವ್ಯಾಪ್ತಿಯ ಚೀಮಸಂದ್ರ ಗ್ರಾಮದಲ್ಲಿ ಸರ್ವೆ ಕಾರ್ಯ ಆರಂಭಿಸಲು ಮುಂದಾಗಿದ್ದರು.

ಈ ಹಿಂದೆ ಮೂರು ತಿಂಗಳು ಹಿಂದೆ ಗೆದ್ದಲಹಳ್ಳಿಪುರ, ಇಟ್ಟಸಂದ್ರ ಮತ್ತು ರಾಮಗೋವಿಂದಪುರ ಗ್ರಾಮಗಳಲ್ಲಿ ಕೃಷಿ ಭೂಮಿ ಸರ್ವೆ ನಡೆಸಲು ಯತ್ನಿಸಿದಾಗ ರೈತರು ಲ್ಯಾಪ್‌ಟಾಪ್ ಸೇರಿದಂತೆ ಇತರೆ ಸಲಕರಣೆಗಳನ್ನು ವಶಪಡಿಸಿಕೊಂಡು ಪ್ರತಿಭಟನೆ ನಡೆಸಿದ್ದರು. ಆಗ ತಹಶೀಲ್ದಾರ್ ಯಾವುದೇ ಸರ್ವೆ ನಡೆಸುವುದಿಲ್ಲ ಎಂದು ರೈತರಿಗೆ ಭರವಸೆ ನೀಡಿದ್ದರು. ಆದರೆ, ಮತ್ತೆ ರೈತರಿಗೆ ಮಾಹಿತಿ ನೀಡದೆಯೇ ಸರ್ವೆ ಕಾರ್ಯಕ್ಕೆ ಮುಂದಾಗಿರುವುದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ರೈತರ ಬೆಂಬಲದಿಂದ ಅಧಿಕಾರಕ್ಕೆ ಬಂದ ರಾಜ್ಯ ಸರ್ಕಾರವೇ ಕೃಷಿ ಅವಲಂಬಿತ ರೈತರನ್ನು ಒಕ್ಕಲೆಬ್ಬಿಸುವ ನೀಚ ಕೃತ್ಯಕ್ಕೆ ಮುಂದಾಗಿದೆ ಎಂದು ಕೆಂಚೇಗೌಡ ಆಕ್ರೋಶ ವ್ಯಕ್ತಪಡಿಸಿದರು. ರೈತ ಮುಖಂಡ ಎಂ.ಬಿ.ವೆಂಕಟೇಶ್ ಮಾತನಾಡಿ, ತಾಲ್ಲೂಕಿನ ನಂದಗುಡಿ ಮತ್ತು ಸೂಲಿಬೆಲೆ ಹೋಬಳಿ ವ್ಯಾಪ್ತಿಯ 36 ಗ್ರಾಮಗಳಲ್ಲಿ ಒಟ್ಟು 18,500 ಎಕರೆ ಪ್ರದೇಶ ವಿವಾದಿತವಾಗಿದೆ. ಯಾವುದೇ ಸರ್ಕಾರ ಅಧಿಕಾರದಲ್ಲಿದ್ದರೂ ಈ ಭಾಗದಲ್ಲಿ ಸರ್ವೆ ಕಾರ್ಯ ನಡೆಸಲು ಬಿಡುವುದಿಲ್ಲ. ಪ್ರಾಣ ಕೊಟ್ಟಾದರೂ ಸ್ವಂತ ಭೂಮಿ ಉಳಿಸಿಕೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಈ ವೇಳೆ ಆಸ್ತಿ ಸಮೀಕ್ಷೆ ಗುತ್ತಿಗೆದಾರ ಪ್ರಶಾಂತ್ ಮಾತನಾಡಿ, ದೇಶ ವ್ಯಾಪಿಯಾಗಿ ಕೇಂದ್ರ ಸರ್ಕಾರದ 'ಸ್ವಾಮಿತ್ವ' ಯೋಜನೆಯಡಿ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಆಸ್ತಿ ಸಮೀಕ್ಷೆ ನಡೆಸಲಾಗುತ್ತಿದೆ. ಈ ಭಾಗದಲ್ಲಿ ಸರ್ವೆ ಕಾರ್ಯ ಕೈಗೊಳ್ಳಲು ತಾವು ಟೆಂಡರ್ ಪಡೆಯಲಾಗಿದೆ. ಈ ಸರ್ವೆಗೂ ನಂದಗುಡಿ ಟೌನ್‌ಶಿಪ್ ಯೋಜನೆಗೂ ಯಾವುದೇ ಸಂಬಂಧವಿಲ್ಲ. ನಂದಗುಡಿ ಟೌನ್‌ಶಿಪ್ ವ್ಯಾಪ್ತಿಯಲ್ಲಿ ಸರ್ವೆ ನಡೆಸುವುದಿಲ್ಲ ಎಂದು ಲಿಖಿತ ಭರವಸೆ ನೀಡುವುದಾಗಿ ತಿಳಿಸಿದರು. ಅಧಿಕಾರಿಗಳು ರೈತರಿಗೆ ಸಮಾಧಾನಪಡಿಸಿ, ನಂದಗುಡಿ ಟೌನ್‌ಶಿಪ್ ವ್ಯಾಪ್ತಿಯಲ್ಲಿ ಯಾವುದೇ ಸರ್ವೆ ನಡೆಸುವುದಿಲ್ಲ ಎಂದು ಲಿಖಿತ ಭರವಸೆ ನೀಡಿದ ಬಳಿಕ, ರೈತರು ವಶಪಡಿಸಿಕೊಂಡಿದ್ದ ಲ್ಯಾಪ್ಟಾಪ್, ಇತರ ಸಲಕರಣೆಗಳನ್ನು ಹಿಂದಿರುಗಿಸಿದರು.


ಉದಯವಾಹಿನಿ ಚಿತ್ರ

# ಛಲವಾದಿ ನಾರಾಯಣಸ್ವಾಮಿ ವಿರುದ್ದ ಐಟಿಬಿಟಿ ಖಾತೆಯ ಸಚಿವರ ಆಕ್ರೋಶ

## ಬಿಜೆಪಿಯ ವಂಶಪಾರಂಪರ್ಯ ಫಲಾನುಭವಿಗಳ ಪಟ್ಟಿ ಬಿಡುಗಡೆ ಮಾಡಿದ ಪ್ರಿಯಾಂಕ್ ಖರ್ಗೆ

• ಉದಯವಾಹಿನಿ, ಬೆಂಗಳೂರು

ದಲಿತ ಸಮುದಾಯ, SCSP-TSP ಯೋಜನೆಗೆ ಸಂಬಂಧಿಸಿದಂತೆ, ವಿಧಾನ ಪರಿಷತ್ತಿನ ವಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ರಾಜ್ಯ ಐಟಿಬಿಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯ ಸಚಿವ ಪ್ರಿಯಾಂಕ್ ಖರ್ಗೆ ನಡುವೆ ಸಾಮಾಜಿಕ ಜಾಲತಾಣದಲ್ಲಿ (ಎಕ್ಸ್) ಆರೋಪ ಪ್ರತ್ಯಾರೋಪದ ಸಮರವೇ ನಡೆಯುತ್ತಿದೆ. ನಿಮ್ಮ ಕುಟುಂಬಕ್ಕಾಗಿ ದಶಕಗಳ ಕಾಲ ಸೇವೆ ಮಾಡಿದ ನಿಷ್ಠಾವಂತರು ಇಂದಿಗೂ ಹೋಬಳಿ, ಗ್ರಾಮ ಮಟ್ಟದಲ್ಲಿ ಉಳಿದಿದ್ದಾರೆ ಎಂದು ಛಲವಾದಿ ನಾರಾಯಣಸ್ವಾಮಿ ತಮ್ಮ ಟ್ವೀಟ್‌ನಲ್ಲಿ ಪ್ರಸ್ತಾವಿಸಿದ್ದಾರೆ.

ಇದಕ್ಕೆ ಕೌಂಟರ್ ಕೊಟ್ಟಿರುವ ಕಾಂಗ್ರೆಸ್ ನಾಯಕ ಪ್ರಿಯಾಂಕ್ ಖರ್ಗೆ, ಬಿಜೆಪಿಯ ವಂಶ ಪಾರಂಪರ್ಯ ಫಲಾನುಭವಿ ರಾಜಕಾರಣಿಗಳು ಎಂದು ಕಮಲದ ಪಡೆಯ ನಾಯಕರ ಹೆಸರನ್ನು ಉಲ್ಲೇಖಿಸಿದ್ದಾರೆ. ನನ್ನನ್ನು ಕೆಣಕಿದರೆ ಕುಟುಕದೆ ಬಿಡುವುದಿಲ್ಲ ಎನ್ನುವ ಛಲವಾದಿ ಎಚ್ಚರಿಕೆಗೆ, ರಾಜೀನಾಮೆ ಮಾತ್ರ ಕೊಡಿ ಸಾಕು, ರಾಜಕೀಯ ನಿವೃತ್ತಿ ಘೋಷಿಸಬೇಕಿಲ್ಲ. ನನ್ನ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿದರೆ ಸಾಕು ರಾಜಕೀಯ ನಿವೃತ್ತಿಯು ನಿಮಗೆ ಅನಿವಾರ್ಯವಾಗುತ್ತದೆ ಎಂದು ಪ್ರಿಯಾಂಕ್ ಖರ್ಗೆ ಲೇವಡಿ ಮಾಡಿದ್ದಾರೆ.

**ಪ್ರಿಯಾಂಕ್ ಖರ್ಗೆ ಗೂಗಲ್ ಬೇಬಿ ಎಂದು ಲೇವಡಿ:** ಸಚಿವರನ್ನು ಛಲವಾದಿ ನಾರಾಯಣಸ್ವಾಮಿ ಗೂಗಲ್ ಬೇಬಿ ಎಂದು ಲೇವಡಿ ಮಾಡಿದ್ದಾರೆ. ಕಾಂಗ್ರೆಸ್ಸಿನಲ್ಲಿ ಛಲವಾದಿ ನಾರಾಯಣಸ್ವಾಮಿ ಆಗಿದ್ದವರು, ಬಿಜೆಪಿಗೆ ಹೋದ ಮೇಲೆ, ಅವಕಾಶವಾದಿ ನಾರಾಯಣಸ್ವಾಮಿ ಆಗಿದ್ದಾರೆ ಎಂದು ಪ್ರಿಯಾಂಕ್ ಖರ್ಗೆ ಕಾಲೆಳೆದಿದ್ದಾರೆ.

**ಛಲವಾದಿ ನಾರಾಯಣಸ್ವಾಮಿಗೆ ಯಾಂಕ್ ಖರ್ಗೆ ತಿರುಗೇಟು:** ನಿಮ್ಮನ್ನು ಜೀರೋದಿಂದ ಹೀರೋ ಮಾಡಿದ್ದು ಕಾಂಗ್ರೆಸ್ ಪಕ್ಷ, ಹೀರೋ ಆದ ಮೇಲೆಯೇ ಬಿಜೆಪಿ ನಿಮ್ಮನ್ನು ಕರೆದುಕೊಂಡಿದ್ದೇ ಹೊರತು ಬಿಜೆಪಿ ನಿಮ್ಮನ್ನು ಜೀರೋದಿಂದ ಬೆಳೆಸಿಲ್ಲ. ನಾನು ಎಲೆಕ್ಟೆಡ್‌ರಾಜಕಾರಣಿ, ನೀವು ಸದ್ಯಕ್ಕೆ ಸೆಲೆಕ್ಟೆಡ್ ರಾಜಕಾರಣಿ, ಹೆಬ್ಬಾಳ ಕ್ಷೇತ್ರದಲ್ಲಿ ಜನರಿಂದ ತಿರಸ್ಕೃತರಾಗಿದ್ದ ತಾವು ಒಮ್ಮೆಯಾದರೂ ಎಲೆಕ್ಟೆಡ್ ರಾಜಕಾರಣಿಯಾಗಿ, ನಂತರ ನನ್ನ ಬಗ್ಗೆ ಮಾತನಾಡುವಿರಂತೆ ಎಂದು ಪ್ರಿಯಾಂಕ್ ಖರ್ಗೆ, ಛಲವಾದಿ ನಾರಾಯಣ ಸ್ವಾಮಿಗೆ ತಿರುಗೇಟು ನೀಡಿದ್ದಾರೆ. ಛಲವಾದಿ ನಾರಾಯಣಸ್ವಾಮಿಯವರು ದಲಿತತ್ವವನ್ನು ತಮಗೆ ಅನುಕಂಪದ ಕಾರ್ಡ್ ಆಗಿ ಬಳಸಿಕೊಳ್ಳುತ್ತಿದ್ದಾರೆ.



### ಪ್ರಿಯಾಂಕ್ ಖರ್ಗೆ ಉಲ್ಲೇಖಿಸಿರುವ ಬಿಜೆಪಿಯ ವಂಶಪಾರಂಪರ್ಯ ರಾಜಕಾರಣಿಗಳ ಪಟ್ಟಿ ಹೀಗಿದೆ

- ರಾಷ್ಟ್ರೀಯ ಅಧ್ಯಕ್ಷರಾದ ನಿತಿನ್ ನಬಿನ್
- ರಾಜ್ಯಾಧ್ಯಕ್ಷರಾದ ಬಿವೈ ವಿಜಯೇಂದ್ರ
- ಶಾಸಕ ಅರವಿಂದ್ ಬೆಲ್ಲದ್
- ಸಂಸದರಾದ ಬಿವೈ ರಾಘವೇಂದ್ರ
- ಸಂಸದರಾದ ತೇಜಸ್ವಿ ಸೂರ್ಯ
- ಸಂಸದರು ಮತ್ತು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ
- ಮಾಜಿ ಶಾಸಕ ಕುಮಾರ್ ಬಂಗಾರಪ್ಪ
- ಶಾಸಕರಾದ ಎಸ್.ರಘು
- ಬಿಜೆಪಿ ನಾಯಕ ನಿಖಿಲ್ ಕಟ್ಟಿ
- ಬಿಜೆಪಿ ನಾಯಕ ಪ್ರದೀಪ ಶೆಟ್ಟರ್
- ಬಿಜೆಪಿ ನಾಯಕ ಅವಿನಾಶ್ ಜಾಧವ್
- ಬಿಜೆಪಿ ನಾಯಕ ಸಪ್ತಗಿರಿ ಗೌಡ

### ರಾಜಕೀಯದ ಹಸುಗೂಸು

ವಿಧಾನ ಪರಿಷತ್ತಿನಲ್ಲಿ ಪ್ರತಿಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಮತ್ತು ಐಟಿಬಿಟಿ ಖಾತೆಯ ಸಚಿವ ಪ್ರಿಯಾಂಕ್ ಖರ್ಗೆಯವರ ನಡುವೆ ಟ್ವೀಟ್ ಸಮರ ಜೋರಾಗಿ ನಡೆಯುತ್ತಿದೆ. ಪ್ರಿಯಾಂಕ್ ಖರ್ಗೆಯವರನ್ನು ರಾಜಕೀಯದ ಹಸುಗೂಸು ಎಂದು ಕರೆದಿರುವ ಛಲವಾದಿಗೆ, ನಾನು ಜನರಿಂದ ಆಯ್ಕೆಯಾಗಿದ್ದೇನೆಯೇ ಹೊರತು ಚಡ್ಡಿ ಹೊತ್ತು ಹುದ್ದೆ ಪಡೆಯಲಿಲ್ಲ ಎಂದು ಖರ್ಗೆ ತಿರುಗೇಟು ನೀಡಿದ್ದಾರೆ.


ಆದರೆ, ನಾವು ಹಾಗಲ್ಲ, ಅದನ್ನು ನಾವು ಸ್ವಾಭಿಮಾನವಾಗಿ ಮತ್ತು ಒಂದು ಹೋರಾಟವನ್ನಾಗಿ ಕಾಣುತ್ತೇವೆ. ಇದನ್ನೇ ನಮಗೆ ಬಾಬಾ ಸಾಹೇಬರು ಹೇಳಿಕೊಟ್ಟಿದ್ದು ಎಂದು ರಾಜ್ಯ ಸಚಿವ ಪ್ರಿಯಾಂಕ್ ಖರ್ಗೆ, ವಿಪಕ್ಷದ ನಾಯಕರ ವಿರುದ್ದ ಕಿಡಿಕಾರಿದ್ದಾರೆ.



ಉದಯ ವಾಹಿನಿ
ಪ್ರಾದೇಶಿಕ
ಬುಧವಾರ 25 ಫೆಬ್ರವರಿ 2026


ಮೈಸೂರು ವೀಳ್ಯದೆಲೆ, ನಂಜನಗೂಡು ರಸಬಾಳೆ ರಫ್ತಿಗೆ ಪ್ರಧಾನಿ ಮೋದಿ ಶ್ಲಾಘನೆ

# ಜಿಐ ಆಧಾರಿತ ಕೃಷಿಯಲ್ಲಿ ಹೂಡಿಕೆ ಮಾಡಲು ಅವಕಾಶ



• ಉದಯವಾಹಿನಿ, ಮೈಸೂರು

ಪ್ರಧಾನಮಂತ್ರಿ ಅವರ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ನರೇಂದ್ರ ಮೋದಿ ಅವರು ನಮ್ಮ ಮೈಸೂರಿನ ಉತ್ಪನ್ನಗಳ ಕುರಿತು ಪ್ರಸ್ತಾಪಿಸಿರುವುದು ಹೆಮ್ಮೆಯ ಸಂಗತಿ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ. ನಂಜನಗೂಡು ರಸಬಾಳೆ, ಮೈಸೂರು ವೀಳ್ಯದಲೆ, ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ನಿಂಬೆಹಣ್ಣು ವಿದೇಶಕ್ಕೆ ರಫ್ತಾಗುತ್ತಿರುವ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ 'ಮನ್ ಕಿ ಬಾತ್' ಬಾನುಲಿ ಕಾರ್ಯಕ್ರಮದಲ್ಲಿ ಪ್ರಸ್ತಾಪಿಸಿ, ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಕೃಷಿ ಉತ್ಪನ್ನಗಳು ವಿಮಾನದ ಮೂಲಕ ಮಾಲ್ಡೀವ್ಸ್ ತಲುಪುತ್ತಿವೆ. ಇವು ರುಚಿ, ಗುಣಮಟ್ಟಕ್ಕೆ ಹೆಸರಾಗಿದ್ದು, ಜಿಐ ಟ್ಯಾಗ್ ಪಡೆದಿವೆ. ಇಂದಿನ ರೈತರು ಗುಣಮಟ್ಟಕ್ಕೆ ಹಾಗೂ ಇಳುವರಿ ಹೆಚ್ಚಳಕ್ಕೆ ಆದ್ಯತೆ ಕೊಟ್ಟು ವಿದೇಶಿ ಮಾರುಕಟ್ಟೆಯಲ್ಲೂ ಛಾಪು ಮೂಡಿಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಡಿಜಿಟಲ್ ವಂಚನೆ ತಡೆಯಲು ಒಟಿಪಿ, ಆಧಾರ್, ಬ್ಯಾಂಕ್ ಖಾತೆ ವಿವರಗಳನ್ನು ಯಾರೊಂದಿಗೂ ಹಂಚಿಕೊಳ್ಳಬೇಡಿ.

ಆಗಾಗ ಪಾಸ್‌ವರ್ಡ್ ಬದಲಿಸಿ ಎಂದು ಮೋದಿ ಸಲಹೆ ನೀಡಿದರು. ಅಲ್ಲದೇ ರಾಷ್ಟ್ರಪತಿ ಭವನದಲ್ಲಿರುವ ಬ್ರಿಟಿಷ್ ವಾಸ್ತುಶಿಲ್ಪಿ ಎಡ್ವಿನ್‌ಲುಟೆನ್ಸ್ ಅವರ ಪ್ರತಿಮೆಯನ್ನು ಬದಲಿಸಿ, ಆ ಸ್ಥಳದಲ್ಲಿ ಸ್ವಾತಂತ್ರ್ಯ ಭಾರತದ ಮೊದಲ ಭಾರತೀಯ ಗವರ್ನರ್ ಸಿ. ರಾಜಗೋಪಾಲಾಚಾರಿ ಅವರ ಪ್ರತಿಮೆ ಸ್ಥಾಪಿಸಲಾಗುವುದು ಎಂದೂ ಹೇಳಿದರು.

ಪ್ರಸಾರವಾದ ಕಾರ್ಯಕ್ರಮ ಆಲಿಸಿದ ಸಂಸದ ಯದುವೀರ್, ನಂತರ ಅವರು ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ. ನಮ್ಮ ಪ್ರದೇಶದ ಅತ್ಯಂತ ಪ್ರಿಯವಾದ ಭೌಗೋಳಿಕ ಸೂಚಕ (ಜಿಐ) ಉತ್ಪನ್ನಗಳಾದ ನಂಜನಗೂಡು ಬಾಳೆ ಹಣ್ಣು ಮತ್ತು ಮೈಸೂರು ವೀಳ್ಯೆದೆಲೆ ಬಗ್ಗೆ ಮನ್ ಕಿ ಬಾತ್‌ನಲ್ಲಿ ಪ್ರಧಾನ ಮಂತ್ರಿಗಳು ಪ್ರಸ್ತಾಪಿಸಿದ್ದನ್ನು ನಾನು ಸ್ವಾಗತಿಸುತ್ತೇನೆ. ಇದಕ್ಕಾಗಿ ಪ್ರಧಾನ ಮಂತ್ರಿಗಳಿಗೆ ಧನ್ಯವಾದ ಸಲ್ಲಿಸುತ್ತೇನೆ, ಎಂದು ತಿಳಿಸಿದ್ದಾರೆ

**ಇಳುವರಿ ಹೆಚ್ಚಳಕ್ಕೆ ಆದ್ಯತೆ**

**ರೈತರಿಗೆ ಆರ್ಥಿಕ ಸಬಲೀಕರಣಕ್ಕೆ ಪೂರಕ**

**ಸ್ಥಳೀಯ ಜೀವವೈವಿಧ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ರಕ್ಷಿಸುವಾಗ ಭಾರತದ ಕೃಷಿ- ಕ್ಷೇತ್ರವನ್ನು ಇನ್ನಷ್ಟು ಬಲಪಡಿಸುವ ವಿಶಾಲ ದೃಷ್ಟಿಕೋನದೊಂದಿಗೆ ಕೆಲವು ಯೋಜನೆ ರೂಪಿಸಲಾಗುತ್ತಿದೆ. ರೈತರು, ಸಹಕಾರಿಗಳು, ರಫ್ತುದಾರರಿಗೆ ಮಾರುಕಟ್ಟೆ ಸಂಪರ್ಕಗಳು, ಲಾಜಿಸ್ಟಿಕ್ಸ್, ಬ್ಯಾಂಡಿಂಗ್ ಹೆಚ್ಚಿಸಲು ಕೇಂದ್ರ ಸರಕಾರ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ, ಜಿಐ ಸ್ವತ್ತುಗಳನ್ನು ಗ್ರಾಮೀಣ ಸಮೃದ್ಧಿಯ ಎಂಜಿನ್‌ಗಳಾಗಿ ಪರಿವರ್ತಿಸಲು ಕೇಂದ್ರ ಸರಕಾರ ಯೋಜನೆಗಳನ್ನು ರೂಪಿಸುತ್ತಿದೆ. ಜಾಗತಿಕ ಗುರುತಿಸುವಿಕೆಯ ಪ್ರಯೋಜನಗಳು ನಮ್ಮ ರೈತರಿಗೆ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿದೆ ಎಂದು ತಿಳಿಸಿದ್ದಾರೆ.**

> **ವಿಶಿಷ್ಟ ಮಣ್ಣಿನ ಸಂಯೋಜನೆಯಿಂದಾಗಿ ವಿಶಿಷ್ಟವಾದ ಸುವಾಸನೆ ಮತ್ತು ರುಚಿಗೆ ಹೆಸರುವಾಸಿಯಾದ ನಂಜನಗೂಡು ಬಾಳೆಹಣ್ಣು ಮತ್ತು ಮೌಲ್ಯಯುತವಾದ ಮೈಸೂರು ವೀಳ್ಯೆದೆಲೆಗಳು ಹಲವು ಪೀಳಿಗೆಯ ಕೃಷಿ ಪರಂಪರೆಯನ್ನು ಪ್ರತಿನಿಧಿಸುತ್ತವೆ. ಇದರ ರಫ್ತು ವ್ಯಾಪ್ತಿ ವಿಸ್ತರಿಸುವುದರಿಂದ ರೈತರ ಆದಾಯ ಹೆಚ್ಚಾಗುತ್ತದೆ, ಹೊಸ ಮೌಲ್ಯ ಸೃಷ್ಟಿಸುತ್ತದೆ ಮತ್ತು ಯುವ ಕೃಷಿಕರು ಜಿಐ ಆಧಾರಿತ ಕೃಷಿಯಲ್ಲಿ ಹೂಡಿಕೆ ಮಾಡಲು ಅವಕಾಶ ಕಲ್ಪಿಸುತ್ತದೆ.**
>
> **-ಯದುವೀರ್ ಕೃಷ್ಣದತ್ತ ಚಾಮರಾಜಒಡೆಯರ್ ಸಂಸದ**



# 5 ತಿಂಗಳಿಂದ ವೇತನವಿಲ್ಲದೆ ಪೌರ ಕಾರ್ಮಿಕರ ಪರದಾಟ

• ಉದಯವಾಹಿನಿ, ಹಾರೋಹಳ್ಳಿ

ಪಟ್ಟಣದ ಪುರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ ಕಳೆದ ಐದು ತಿಂಗಳಿನಿಂದ ವೇತನ ಪಾವತಿಯಾಗಿಲ್ಲ. ಇದರಿಂದ ನೇರ ನೇಮಕಾತಿ ಅಡಿ ನೇಮಕವಾಗಿರುವ ಪೌರಕಾರ್ಮಿಕರು ಪರದಾಡುವಂತಾಗಿದೆ. ಹಾರೋಹಳ್ಳಿ ಪುರಸಭೆ ವ್ಯಾಪ್ತಿಯ ಒಟ್ಟು 42 ಪೌರ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಪೈಕಿ ಹೊರಗುತ್ತಿಗೆಯಲ್ಲಿ 24 ಮಂದಿ, ಹಾರೋಹಳ್ಳಿ ಗ್ರಾಮ ಪಂಚಾಯಿತಿಯಿಂದ ನೇಮಕಗೊಂಡ ನಾಲ್ವರು ಹಾಗೂ ನೇರವಾಗಿ ನೇಮಕಗೊಂಡ 14 ಇತರ ಪೌರ ಕಾರ್ಮಿಕರಿದ್ದಾರೆ. ಈ ಪೈಕಿ 11 ಮಂದಿಗೆ 5 ತಿಂಗಳಿನಿಂದ ವೇತನ ಬಂದಿಲ್ಲ. ಈ ಕುರಿತು ಅಧಿಕಾರಿಗಳನ್ನು ಪ್ರಶ್ನಿಸಿದರೆ, ನೇಮಕಾತಿ ಪತ್ರ ಬರದ ಕಾರಣಕ್ಕೆ ಈ ತೊಂದರೆಯಾಗಿದೆ ಎಂಬ ಉತ್ತರ ಬರುತ್ತಿದೆ ಎಂದು ಸಂತ್ರಸ್ತರು ಹೇಳುತ್ತಾರೆ. ಪಟ್ಟಣ ಪ್ರದೇಶ ಸ್ವಚ್ಛವಾಗಿರುವುದರಿಂದ ಎಲ್ಲರೂ ನೆಮ್ಮದಿಯಿಂದ ಬದುಕುತ್ತಾರೆ.


ಉದಯವಾಹಿನಿ ಚಿತ್ರ

ಆದರೆ, ಪಟ್ಟಣದ ಶುಚಿತ್ವ, ಸುಂದರ ಪಟ್ಟಣಕ್ಕಾಗಿ ಹಗಲಿರುಳು ಶ್ರಮಿಸುವ ಪೌರ ಕಾರ್ಮಿಕರ ನರಕಯಾತನೆ ಮಾತ್ರ ಯಾರೂ ಕೇಳುವವರಿಲ್ಲವಾಗಿದೆ. ಇದರಿಂದ ಬದುಕು ನರಕಯಾತನೆಯಾಗಿದೆ ಎಂದು ಎಂದು ಸಂತ್ರಸ್ತರು ಅಲವತ್ತುಕೊಂಡರು. 5 ತಿಂಗಳಿನಿಂದ ವೇತನ ಪಾವತಿಯಾಗದ ಹೊರತಾಗಿಯೂ, ನಗರದ ಸ್ವಚ್ಛಗೊಳಿಸುವ ಕಾಯಕವನ್ನು ನಾವು ನಿಲ್ಲಿಸಿಲ್ಲ. ಸಂಬಳವಿಲ್ಲದೆಯೂ ಕಾರ್ಯ ನಿರ್ವಹಿಸುತ್ತಿದ್ದೇವೆ. ಹೀಗಾಗಿ, ಶೀಘ್ರವೇ ವೇತನ ಪಾವತಿ ಮಾಡಬೇಕು ಎಂಬುದು ಪೌರ ಕಾರ್ಮಿಕರ ಒತ್ತಾಯವಾಗಿದೆ.

**ನಾವು ಜೀತದಾಳುಗಳೇ:** ನಾವೆಲ್ಲರೂ ಸಂಬಳಕ್ಕಾಗಿಯೇ ಕೆಲಸ ಮಾಡುತ್ತೇವೆ. ವೇತನ ಬರುವುದು ಒಂದು ದಿನ ತಡವಾದರೂ ಚಡಪಡಿಕೆ ಶುರುವಾಗುತ್ತದೆ. ಆದರೆ ನಮಗೆ ಐದು ತಿಂಗಳಿನಿಂದ ವೇತನದ ನಯಾಪೈಸೆಯನ್ನೂ ಪಾವತಿ ಮಾಡಿಲ್ಲ. ಹಾಗಿದ್ದರೆ ನಮ್ಮನ್ನು ನೀವು ಪೌರ ಕಾರ್ಮಿಕರು ಎಂದು ಪರಿಗಣಿಸಿರುವಿರೇ ಅಥವಾ ಜೀತದಾಳುಗಳು ಎಂದು ಪರಿಗಣಿಸಿರುವಿರೇ ಎಂದು ಪೌರ ಕಾರ್ಮಿಕರು ಆಕ್ರೋಶದಿಂದ ಪ್ರಶ್ನಿಸಿದರು.

## ಮಿನಿ ನ್ಯೂಸ್

### ಡ್ರಗ್ಸ್ ಮಾರುತ್ತಿದ್ದ ನಾಲ್ವರ ಸೆರೆ

• ಉದಯವಾಹಿನಿ, ಮೈಸೂರು

ನಗರದಲ್ಲಿ ಅಕ್ರಮ ಮಾದಕವಸ್ತು ಮಾರಾಟ ಮತ್ತು ಸಾಗಾಟದ ಮೇಲೆ ಸಿ.ಸಿ.ಬಿ ಪೊಲೀಸರು ದಾಳಿ ಮಾಡಿ ನಾಲ್ವರನ್ನು ಬಂಧಿಸಿ 10,30,800 ರೂ. ಬೆಲೆಯ ನಿಷೇಧಿತ ಮಾದಕವಸ್ತು ಎಂ.ಡಿ.ಎಂ.ಎ., 8 ಲಕ್ಷ ಮೌಲ್ಯದ ಇನೋವಾ ಕಾರ್ ಅನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಮೈಸೂರಿನ ಗೌಸಿಯಾನಗರದ ಝಿಯಾವುಲ್ಲ (28), ಲಷ್ಕರ್ ಮೊಹಲ್ಲಾದ ಜಾವೀದ್ ಅಹಮದ (46), ಗೌಸಿಯಾನಗರದ ಸುಹೇಲ್ ಪಾಷ(19), ಬೆಂಗಳೂರಿನ ಪಾದರಾಯನ ಪುರದ ನುಹೇದ್ ಖಾನ್ (23) ಬಂಧಿತ ಆರೋಪಿಗಳು.

ಪೊಲೀಸ್ ಆಯುಕ್ತರು, ಉಪಪೊಲೀಸ್ ಆಯುಕ್ತರ ಮಾರ್ಗದರ್ಶನದಲ್ಲಿ ಹಾಗೂ ಸಿಸಿಬಿ ಘಟಕದ ಎಸಿಪಿ ಮಹಮದ್ ಶರೀಪ್ ರಾವುತರ್ ಅವರ ಮಾಹಿತಿಯ ಮೇರೆಗೆ ಪಿಐ ಶಬ್ಬಿರ್ ಹುಸೇನ್ ನೇತೃತ್ವದಲ್ಲಿ ಲೇಪಾಕ್ಷ.ಕೆ. ಜೋತ್ಸ್ನಾರಾಜ್.ಆರ್. ರೇವಣಸಿದ್ದಪ್ಪ, ಸಿಬ್ಬಂದಿಗಳಾದ ಮಧುಕುಮಾರ್, ಚೇತನ್, ಅಧಾಮ್. ಕಿರಣ್ ರಾಥೋಡ್, ಸಂತೋಷ್ ಪವಾರ್, ಹಜ್ರತ್ ಅಲಿ, ರಾಜಾಸಾಬ್, ಸಮೀರ್, ಯಶ್ವಂತ್ ದೇವರಾಜು, ಮಮತ. ಎನ್.ಜಿ., ಸಿದ್ದರಾಜು, ಸುರೇಶ್‌ರವರು ಉಮರ್ ಖಾಯಂ ರಸ್ತೆಯಲ್ಲಿ ಇನ್ನೊವಾ ಕಾರನ್ನು ತಪಾಸಣೆ ಮಾಡಿದ್ದಾರೆ. ತಪಾಸಣೆ ವೇಳೆ ಕಾರಿನಲ್ಲಿದ್ದ 4 ಮಂದಿಯನ್ನು ವಶಕ್ಕೆ ಪಡೆದು ಬೆಂಗಳೂರು ವಾಸಿ ನುಹೇದ್ ಬಾನ್ ಬಳಿ ಎಂ.ಡಿ.ಎಂ.ಎ. ಪೆಡ್ಲರ್ ಜಾವೀದ್ಗೆ ಸೇರಿದ 10.40,000 ರೂ ಮೌಲ್ಯದ ನಿಷೇಧಿತ ಮಾದಕವಸ್ತು ಮತ್ತು ಕೃತ್ಯಕ್ಕೆ ಬಳಸುತ್ತಿದ್ದ 8,00,000 ರೂ ಮೌಲ್ಯದ ಇನೋವಾ ಕಾರು ಹಾಗೂ 5 ಮೊಬೈಲ್‌ಗಳು ಸೇರಿದಂತೆ ಇತರೆ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ. ಆರೋಪಿಗಳ ಸಮೇತ ವಶಪಡಿಸಿಕೊಂಡ ಮಾಲನ್ನು ಮಂಡಿ ಪೊಲೀಸ್ ಠಾಣೆಯ ಠಾಣಾಧಿಕಾರಿಗಳ ವಶಕ್ಕೆ ನೀಡಿದ್ದು, ತನಿಖೆ ಮುಂದುವರೆದಿದೆ.

### ಯುವಜನರ ಕಿಚ್ಚು ರಾಜ್ಯ ವ್ಯಾಪಿಸುವುದರಲ್ಲಿ ಸಂಶಯವಿಲ್ಲ

• ಉದಯವಾಹಿನಿ, ರಾಮನಗರ

ಧಾರವಾಡದಲ್ಲಿ ಹೊತ್ತಿಕೊಂಡಿರುವ ನಿರುದ್ಯೋಗಿ ಯುವಜನರ ಕಿಚ್ಚು ಇಡೀ ರಾಜ್ಯಕ್ಕೆ ವ್ಯಾಪಿಸುವುದರಲ್ಲಿ ಸಂಶಯವಿಲ್ಲ. ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದು ಮೂರು ವರ್ಷವಾಗುತ್ತಾ ಬಂದರೂ, ಒಂದೇ ಒಂದು ಹುದ್ದೆ ಭರ್ತಿ ಮಾಡಿಲ್ಲ. ಉದ್ಯೋಗ ಭರ್ತಿ ಮತ್ತು ಸೃಷ್ಟಿಯ ಭರವಸೆ ನೀಡಿದ್ದ ಸರ್ಕಾರದ ನಾಯಕರು ಕುರ್ಚಿ ಕಾಳಗದಲ್ಲಿ ಮುಳುಗಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದರು.

ತಾಲ್ಲೂಕಿನ ತೆಂಗಿನಕಲ್ಲು ಗ್ರಾಮದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿರುದ್ಯೋಗಿಗಳಿಗೆ ಯುವನಿಧಿ ಗ್ಯಾರಂಟಿಯಡಿ 3 ಸಾವಿರ ಕೊಡುತ್ತಿದ್ದೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಲಘುವಾಗಿ ಮಾತನಾಡಿದ್ದಾರೆ. ಆದರೆ, ಯುವಜನರು ಯುವನಿಧಿ ನಂಬಿಕೊಂಡಿಲ್ಲ. ಅವರಿಗೆ ಬೇಕಿರುವುದು ಸ್ವಾಭಿಮಾನದ ಬದುಕು. ಅದಕ್ಕಾಗಿ ಉದ್ಯೋಗ ಸೃಷ್ಟಿಸಿ ಕೊಟ್ಟ ಮಾತು ಉಳಿಸಿಕೊಳ್ಳಬೇಕು ಎಂದು ಆಗ್ರಹಿಸಿದರು. ರಾಜ್ಯದಲ್ಲಿ ಖಾಲಿ ಇರುವ 2.85 ಲಕ್ಷಕ್ಕೂ ಹೆಚ್ಚು ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಕಳೆದ ವರ್ಷವೇ ಸರ್ಕಾರ ಹೇಳಿತ್ತು. ಆದರೆ, ಇದುವರೆಗೆ ಖಾಲಿ ಹುದ್ದೆ ಭರ್ತಿ ಮಾಡದಿರುವುದು ಖಂಡನೀಯ. ಇದೇ ಕಾರಣಕ್ಕೆ ಉದ್ಯೋಗಾಕಾಂಕ್ಷಿ ಯುವಜನರು ಸರ್ಕಾರದ ವಿರುದ್ಧ ರೊಚ್ಚಿಗೆದಿದ್ದಾರೆ. ಯುವಕರ ಕಿಚ್ಚು ರಾಜ್ಯಕ್ಕೆ ವ್ಯಾಪಿಸುವುದಕ್ಕೆ ಮುಂಚೆ ಎಚ್ಚೆತ್ತುಕೊಳ್ಳಬೇಕು ಎಂದರು.

### ಪಕ್ಷಕ್ಕಾಗಿ ಜೈಲಿಗೆ ಹೋದ ಡಿಕೆಶಿಗೆ ಸಿಎಂ ಸ್ಥಾನ ನೀಡಲಿ: ಶಾಸಕ ಬಾಲಕೃಷ್ಣ

• ಉದಯವಾಹಿನಿ, ಮಾಗಡಿ

ಪಕ್ಷಕ್ಕಾಗಿ ಜೈಲಿಗೆ ಹೋದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಸಿಎಂ ಸ್ಥಾನ ನೀಡಬೇಕು ಎಂದು ಶಾಸಕ ಬಾಲಕೃಷ್ಣ ಒತ್ತಾಯಿಸಿದರು. ತಾಲ್ಲೂಕಿನ ಚಕ್ರಬಾವಿ ಗ್ರಾಮದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ.ಸಿಎಂ ವಿಚಾರವಾಗಿ ನಾವು ಹೈಕಮಾಂಡ್ ಬಳಿ ಕೇಳಿ ಸಾಕಾಗಿದೆ. ನಮ್ಮ ಜಿಲ್ಲೆಯ ಡಿ.ಕೆ.ಶಿವಕುಮಾರ್ ಅವರಿಗೆ ಸಿಎಂ ಸ್ಥಾನ ನೀಡಬೇಕು ಎಂಬುದು ನಮ್ಮ ಒತ್ತಾಯ.

ಡಿ.ಕೆ. ಶಿವಕುಮಾರ್ ಹುಟ್ಟು ಕಾಂಗ್ರೆಸ್ಸಿಗರಾಗಿದ್ದು, ಪಕ್ಷಕ್ಕಾಗಿ ಹಲವು ತ್ಯಾಗ ಮಾಡಿದ್ದಾರೆ ಎಂದರು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಗೃಹ ಸಚಿವ ಜಿ.ಪರಮೇಶ್ವರ್ ಬೆಂಗಳೂರಿನ ಖಾಸಗಿ ಹೋಟೆಲ್‌ನಲ್ಲಿ ಭೇಟಿಯಾದ ಬಗ್ಗೆ ನನಗೆ ಮಾಹಿತಿ ಇಲ್ಲ. ಇದಕ್ಕೆ ಹೆಚ್ಚಿನ ಮಹತ್ವ ಕೊಡುವ ಅಗತ್ಯವಿಲ್ಲ ಎಂದರು. ಮಾರ್ಚ್ 4ರಂದು ಚಕ್ರಬಾವಿ ಗ್ರಾಮದಲ್ಲಿ ವೈಜಿ ಗುಡ್ಡ ಜಲಾಶಯದಿಂದ ಕೆರೆಗಳನ್ನು ತುಂಬಿಸುವ ಯೋಜನೆಗೆ ಡಿ.ಕೆ.ಶಿವಕುಮಾರ್ ಚಾಲನೆ ನೀಡಲಿದ್ದಾರೆ.

# ನಾನು ರಾಮನಗರಕ್ಕೆ ಫಿಕ್ಸ್; ಅನುಮಾನ ಬೇಡ

• ಉದಯವಾಹಿನಿ, ರಾಮನಗರ



ನಾನು ರಾಮನಗರಕ್ಕೆ ಫಿಕ್ಸ್ ಆಗಿದ್ದೇನೆ. ಈ ವಿಷಯದಲ್ಲಿ ಯಾವುದೇ ಅನುಮಾನ ಬೇಡ. ನಾನು ಪಲಾಯನವಾದಿ ರಾಜಕಾರಣ ಮಾಡಲ್ಲ. ನಮ್ಮ ಕಾರ್ಯಕರ್ತರ ಆದೇಶವೇ ಅಂತಿಮ ಎನ್ನುವ ಮೂಲಕ, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ರಾಮನಗರದಿಂದಲೇ ಕಣಕ್ಕಿಳಿಯುವುದಾಗಿ ಸ್ಪಷ್ಟಪಡಿಸಿದರು.

ತಾಲ್ಲೂಕಿನ ತೆಂಗಿನಕಲ್ಲು ಮತ್ತು ಕಡ್ಲೆಸುಬ್ಬಯ್ಯನದೊಡ್ಡಿ ಗ್ರಾಮದ ಕೋಟೆಮಾರಮ್ಮ ದೇವಿಯ ನೂತನ ಶಿಲಾ ಮೂರ್ತಿ ಪ್ರತಿಷ್ಠಾಪನೆ, ನೂತನ ದೇವಾಲಯ ಉದ್ಘಾಟನೆ, ವಿಮಾನ ಗೋಪುರ ಕುಂಭಾಭಿಷೇಕ ಮಹೋತ್ಸವದಲ್ಲಿ ಮಂಗಳವಾರ ಭಾಗವಹಿಸಿ ನಂತರ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಮುಂದಿನ ಚುನಾವಣೆಯಲ್ಲಿ ನಾನು ಎಲ್ಲಿಂದ ಸ್ಪರ್ಧಿಸುತ್ತೇನೆ ಎಂಬುದರ ಬಗ್ಗೆ ಪದೇ ಪದೇ ಪ್ರಶ್ನೆ ಕೇಳಬೇಡಿ. ರಾಮನಗರದಲ್ಲಿ ಸ್ಪರ್ಧಿಸುವ ವಿಷಯದಲ್ಲಿ ಅಷ್ಟೊಂದು ಅನುಮಾನ ಬೇಡ. ವಿರೋಧಿಗಳು ಎಲ್ಲಾ ಕಡೆಯಿಂದ ನನಗೆ ರೌಂಡಪ್ ಆಗಿದ್ದಾರೆ. ಮುಂದೆಯೂ ಆಗುತ್ತಾರೆ. ಆದರೆ, ಜನ ನನ್ನನ್ನು ಕಾಪಾಡುವ ವಿಶ್ವಾಸವಿದೆ ಎಂದು ಹೇಳಿದರು.


**ಸಿಎಂ ಬೆಳವಣಿಗೆಗೆ ಎಚ್‌ಡಿಡಿ ಕಾರಣ:** ಸಿದ್ದರಾಮಯ್ಯ ಅವರು ರಾಜ್ಯದ ಮುಖ್ಯಮಂತ್ರಿಯಾಗಿ 18ನೇ ಬಜೆಟ್ ಮಂಡನೆ ಮಾಡಲು ಸಿದ್ಧವಾಗುತ್ತಿರುವುದಕ್ಕೆ ಜೆಡಿಎಸ್ ವರಿಷ್ಠರಾದ ಎಚ್.ಡಿ. ದೇವೇಗೌಡರು, ಜನತಾದಳ ಪಕ್ಷವೇ ಕಾರಣ ಎಂದು ಸಿದ್ದರಾಮಯ್ಯ ಅವರು ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಮಾಡಿರುವ ಪೋಸ್ಟ್‌ಗೆ ನಿಖಿಲ್ ಪ್ರತಿಕ್ರಿಯಿಸಿದರು. ಅಂದು ಪಕ್ಷದಲ್ಲಿ ಅಗ್ರಗಣ್ಯ ನಾಯಕರಿದ್ದರೂ ಸಿದ್ದರಾಮಯ್ಯ ಅವರ ಕೈಯಲ್ಲಿ ಸಾಮಾಜಿಕ ನ್ಯಾಯದ ಬದ್ಧತೆಯ ಬಜೆಟ್ ಮಂಡನೆ ಮಾಡಿಸಿದ್ದು ದೇವೇಗೌಡರು ಅಂದು ಹಾಗೆ ಮಾಡಿಲ್ಲದಿದ್ದರೆ, ಮಂಗಳವಾರ ಸಿದ್ದರಾಮಯ್ಯ ಅವರು 18ನೇ ಬಜೆಟ್ ಮಂಡಿಸುತ್ತಿದ್ರಾ? ಇತಿಹಾಸ ತಿಳಿದುಕೊಂಡು ಮಾತನಾಡಬೇಕು ಎಂದು ತಿರುಗೇಟು ನೀಡಿದರು.

ಎಂಟು ವರ್ಷ ಮುಖ್ಯಮಂತ್ರಿಯಾಗಿ 35 ವರ್ಷ ಅಧಿಕಾರ ಅನುಭವಿಸಿರುವ ಸಿದ್ದರಾಮಯ್ಯ ಅವರು, ದೇವರಾಜು ಅರಸು ದಾಖಲೆ ಬ್ರೇಕ್ ಮಾಡಿದ್ದಾರೆ. ಇಷ್ಟೆಲ್ಲಾ ಯೋಗ ಮಾಡಿರುವಂತಹ ಸಿಎಂ ಬಾಯಲ್ಲಿ ಇಂತಹ ಮಾತು ನಿರೀಕ್ಷಿಸಿರಲಿಲ್ಲ. ಸಮಾಜ ಮತ್ತು ಸಮುದಾಯ ಮುಂದಿಟ್ಟುಕೊಂಡು ರಕ್ಷಣೆ ಪಡೆಯುವ ಕೆಲಸ ಮಾಡಬಾರದು ಎಂದು ಕಿಡಿಕಾರಿದರು.

ಸಚಿವರ ಬದಲಾವಣೆ ಕುರಿತು 31 'ಕೈ' ಶಾಸಕರ ಪತ್ರದ ಕುರಿತು ಪ್ರತಿಕ್ರಿಯಿಸಿ, ಸಚಿವರ ಬದಲಾವಣೆಯಲ್ಲ, ಕಾಂಗ್ರೆಸ್ ಸರ್ಕಾರವನ್ನೇ ಬದಲಾವಣೆ ಮಾಡುವ ಕೆಲಸವಾಗಬೇಕು. ಈ ಸರ್ಕಾರದಲ್ಲಿ ಯಾರನ್ನೇ ಬದಲಾಯಿಸಿದರೂ ಅಭಿವೃದ್ಧಿಯಾಗದು. ಇನ್ನೆರಡು ವರ್ಷದಲ್ಲಿ ಎಷ್ಟಾಗುತ್ತೊ ಅಷ್ಟು ಲೂಟಿ ಮಾಡಬೇಕೆಂಬ ಮನಸ್ಥಿತಿಯಲ್ಲಿ ಎಲ್ಲರೂ ಇದ್ದಾರೆ ಎಂದು ವಾಗ್ದಾಳಿ ನಡೆಸಿದರು. ಪಕ್ಷ ಸಂಘಟನೆಗಾಗಿ ಇದುವರೆಗೆ ನಾನು ರಾಜ್ಯದಾದ್ಯಂತ 9 ಸಾವಿರ ಕಿ.ಮೀ. ಪ್ರವಾಸ ಮಾಡಿದ್ದೇನೆ. ಹೋದಲೆಲ್ಲಾ ಜನರು ಸರ್ಕಾರದ ಬಗ್ಗೆ ಅಸಹನೆ ವ್ಯಕ್ತಪಡಿಸುತ್ತಿದ್ದಾರೆ. ಈಗಲೇ ಚುನಾವಣೆ ನಡೆದರೆ ಜನ ಕಾಂಗ್ರೆಸ್ ಅನ್ನು ತಿರಸ್ಕರಿಸಿಬೀದಿಗೆ ತಳ್ಳುತ್ತಾರೆ ಎಂದು ಕಿಡಿಕಾರಿದರು.

# ಭೂತ್ ಲೆವೆಲ್ ಏಜೆಂಟ್ ತರಬೇತಿ ಕಾರ್ಯಗಾರ

• ಉದಯವಾಹಿನಿ, ಗುಂಡ್ಲುಪೇಟೆ



ಉದಯವಾಹಿನಿ ಚಿತ್ರ

ಭೂತ್ ಲೆವೆಲ್ ಏಜೆಂಟ್ ಎರಡು ತರಬೇತಿ ಕಾರ್ಯಗಾರವು ಪಕ್ಷ ಸಂಘಟನೆಗೆ ಸಹಕಾರಿ ಆಗಲಿದೆ ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ತಿಳಿಸಿದರು. ಕರ್ನಾಟಕ ಕಾಂಗ್ರೆಸ್ ಸಮಿತಿ ಗುಂಡ್ಲುಪೇಟೆ, ಬ್ಲಾಕ್ ಕಾಂಗ್ರೆಸ್ ಸಮಿತಿ ಬೇಗೂರು ವತಿಯಿಂದ ಪಟ್ಟಣದ ಬಸವೇಶ್ವರ ಕಮ್ಯುನಿಟಿ ಹಾಲ್‌ನಲ್ಲಿ ಭೂತ್ ಲೆವೆಲ್‌ಏಜೆಂಟ್ 2ರ ತರಬೇತಿ, ಕಾರ್ಯಾಗಾರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷ ಸದೃಢವಾಗಿದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪಕ್ಷವನ್ನು ಸಂಘಟನೆ ಮಾಡಲು ಇಂತಹ ಕಾರ್ಯಕ್ರಮ ಗಳನ್ನು ಮಾಡಲಾಗುತ್ತಿದೆ.

ಕ್ಷೇತ್ರದ ಅಭಿವೃದ್ಧಿ ಸಹಿಸಲಾಗದ ಬಿಜೆಪಿಗರು ಅಪಪ್ರಚಾರದಲ್ಲಿ ತೊಡಗಿದ್ದಾರೆ.

ಮಡಹಳ್ಳಿ ರಸ್ತೆ ಅಭಿವೃದ್ಧಿಗೊಂಡಿದೆ ಹಾಗೆಯೇ ಗ್ರಾಮೀಣ ಭಾಗದ ರಸ್ತೆಗಳು ಅಭಿವೃದ್ಧಿ ಕಾಣುತ್ತಿವೆ ವಿದ್ಯುತ್ ಉಪಕರಣ ಕೇಂದ್ರಗಳು, ವಸತಿ ನಿಲಯಗಳ ಸ್ಥಾಪನೆ ಹೀಗೆ ಹತ್ತಾರು ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ, ಟೀಕೆ ಮಾಡುವುವರಿಗೆ ಉತ್ತರ ಕೊಡಲು ಆಗುವುದಿಲ್ಲ ಅಭಿವೃದ್ಧಿ ಕೆಲಸಗಳ ಮೂಲಕ ಉತ್ತರಿಸುತ್ತೇವೆ, ಟೀಕೆಗಳು ಶಾಶ್ವತವಲ್ಲ ಕೆಲಸಗಳು ಶಾಶ್ವತ ಎಂದರು.

**ಪಕ್ಷ ಸಂಘಟನೆಗೆ ಸಹಕಾರಿ**

ಉತ್ತೂರು ಕೆರೆಗೆ ನೀರು ಬರುತ್ತಿದೆ ಕೆರೆಗಳಿಗೆ ನೀರು ತುಂಬಿಸುವುದು ತಡವಾಗುತ್ತಿರುವುದು ವಿರೋಧ ಪಕ್ಷದವರಿಂದಲೇ, ಅವರ ಆಡಳಿತ ಅವಧಿಯಲ್ಲಿ ಏನು ನಡೆದಿದೆ ಅನುವುದನ್ನ ಅವರೇ ತಿಳಿದು ಕೊಳ್ಳುವ ಕೆಲಸ ಮಾಡಲಿ ನಮ್ಮ ಪಕ್ಷ ಸರ್ವರಿಗೂ ಸವಲತ್ತುಗಳ ನೀಡುವುದರ ಮೂಲಕ ರಾಜ್ಯದ ಅಭಿವೃದ್ಧಿಗೆ ಪಣ ತೊಟ್ಟಿದೆ ಎಂದು ವಿಶ್ಲೇಷಿದರು.

ಜಿಲ್ಲಾ ಉಸ್ತುವಾರಿ ವಿ. ಆರ್ ಸುದರ್ಶನ್ ಮಾತನಾಡಿ ಗುಂಡ್ಲುಪೇಟೆ ತಾಲ್ಲೂಕಿಗೆ ತನ್ನದೇ ಆದ ಇತಿಹಾಸವಿದೆ ಮಹದೇವಪ್ರಸಾದ್ ಅವರು ನನಗೆ ಹಳೆಯ ಸ್ನೇಹಿತರು ಅವರಿಗೆ ಕೊಟ್ಟ ಇಲಾಖೆಯ ಸಚಿವ ಸ್ಥಾನದ ಕೆಲಸಗಳನ್ನು ಬಹಳ ಅಚ್ಚುಕಟ್ಟಾಗಿ ಮಾಡಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿದ್ದಾರೆ, ಇಲ್ಲಿ ಕಾಂಗ್ರೆಸ್ ಪಕ್ಷವನ್ನು ಇನ್ನಷ್ಟು ಸಕ್ರಿಯವಾಗಿ ಬಲಪಡಿಸಲು ಭೂತ್ ಲೆವೆಲ್ ಏಜೆಂಟ್ 2ರ ತರಬೇತಿ ಕಾರ್ಯಕ್ರಮ ನಡೆಸುವುದರ ಮೂಲಕ ಕಾರ್ಯಕರ್ತರು ಜವಾಬ್ದಾರಿಯುತ ಸ್ಥಾನಗಳನ್ನು ತೆಗೆದುಕೊಂಡು ಪ್ರತಿ ಗ್ರಾಮದ ಜನಸಾಮಾನ್ಯರಿಗ ಸರ್ಕಾರದ ಸವಲತ್ತುಗಳ ಮಾಹಿತಿ ತಲುಪಿಸಬೇಕು ಶಾಸಕರು ಸಂಸದರ ಅಭಿವೃದ್ಧಿಯ ವಿಚಾರಗಳನ್ನು ತಿಳಿಸುವ ಮೂಲಕ ಮತ ದಾರರಗಟ್ಟಿಗೊಳಿಸಲು ಸಹಕಾರವಾಗುತ್ತದೆ, ಕಾರ್ಯಕ್ರಮದ ಸಾರ್ಥಕತೆಗೆ ಸಾಕ್ಷಿ ಆಗುತ್ತದೆ ಎಂದರು. ಕಾಡಾ ಮಾಜಿ ಅಧ್ಯಕ್ಷ ಹಂಗಳ ನಂಜಪ್ಪ, ಮಾಜಿ ಉಪಾಧ್ಯಕ್ಷ ಕಬ್ಬಹಳ್ಳಿ ಮಹೇಶ್, ಚಾಮರಾಜನಗರ ಉಸ್ತುವಾರಿ ವಿ.ಆರ್. ಸುದರ್ಶನ್, ಅಧ್ಯಕ್ಷ ರಾಜಶೇಖರ್, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ ಬಸವರಾಜು, ಹಿರಿಯ ಮುಖಂಡ ಮಡಿವಾಳಪ್ಪ, ಪುರಸಭಾ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಹೊಸಹಳ್ಳಿ ಮಧುಸೂದನ್, ಇನ್ನಿತರರಿದ್ದರು.

# ಮನರೇಗಾ ಮರುಜಾರಿಗೆ ಒತ್ತಾಯಿಸಿ ಕಾಂಗ್ರೆಸ್ ಪಾದಯಾತ್ರೆ

• ಉದಯವಾಹಿನಿ, ಗುಂಡ್ಲುಪೇಟೆ



ಉದಯವಾಹಿನಿ ಚಿತ್ರ

ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನ ಮರುಜಾರಿಗೊಳಿಸುವಂತೆ ಒತ್ತಾಯಿಸಿ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ನೇತೃತ್ವದಲ್ಲಿ ಮಂಗಳವಾರ ಗುಂಡ್ಲುಪೇಟೆಯಲ್ಲಿ ಪಾದಯಾತ್ರೆ ನಡೆಸಲಾಯಿತು. ಪಟ್ಟಣದ ಬಸವೇಶ್ವರ ಕಲ್ಯಾಣ ಮಂಟಪದಿಂದ ಕಾಲ್ನಡಿಗೆ ಹೊರಟ ಪಕ್ಷದ ಮುಖಂಡರು ತಹಶೀಲ್ದಾರ್ ಕಚೇರಿ ಮುಂಭಾಗ ಸಮಾವೇಶಗೊಂಡು ಕೇಂದ್ರ ಸರಕಾರದ ವಿರುದ್ಧ ದಿಕ್ಕಾರದ ಘೋಷಣೆಗಳನ್ನ ಕೂಗಿ ಆಕ್ರೋಶ ಹೊರಹಾಕಿದರು.

ಶಾಸಕ ಗಣೇಶ್ ಪ್ರಸಾದ್ ಮಾತನಾಡಿ ಕೇಂದ್ರ ಸರ್ಕಾರವು ಮನರೇಗಾ ಯೋಜನೆಯನ್ನ ರದ್ದುಗೊಳಿಸಿ ಜಾರಿ ಮಾಡಲೊರಟಿರುವ ವಿಬಿ ಜಿ ರಾಂಜಿ ಯಿಂದ ಕೋಟ್ಯಾಂತರ ಜನರಿಗೆ ಉದ್ಯೋಗ ಕುಂಟಿತವಾಗುತ್ತದೆ, ಗ್ರಾಮೀಣ ಪ್ರದೇಶದ ಜನರ ಕೂಲಿಯನ್ನ ಕಸಿದುಕೊಳ್ಳುವ ಹುನ್ನಾರಕ್ಕೆ ಮುಂದಾಗಿರುವ ಬಿಜೆಪಿ ಸರ್ಕಾರದ ನಡೆ ಖಂಡನೀಯ ಆದುದು, ಗ್ರಾಮಾಂತರ ಪ್ರದೇಶಗಳಲ್ಲಿನ ಜನರ ಅಭಿವೃದ್ಧಿಗೆಂದೆ ದೂರದೃಷ್ಟಿ ಚಿಂತನೆಯಿಂದ ಕಾಂಗ್ರೆಸ್ ಪಕ್ಷ ಜಾರಿಗೊಳಿಸಿದ್ದ ಮನರೇಗಾ ವನ್ನ ಮರುಜಾರಿಗೊಳಿಸಬೇಕು, ಸದಾ ಜನರ ಹಿತಬಯಸುತ್ತಿದ್ದ ಕಾಂಗ್ರೆಸ್ ಗ್ರಾಮಪಂಚಾಯತಿಗಳಲ್ಲಿ ಅಭಿವೃದ್ಧಿ ಮೂಲ ಮಂತ್ರವನ್ನ ದ್ಯೇಯವಾಗಿರಿಸಿತ್ತು ಆದರೆ ನರೇಂದ್ರಮೋದಿ ನೇತೃತ್ವದ ಎನ್ ಡಿಎ ಸರ್ಕಾರ ಅವಸಾನದತ್ತ ಕೊಂಡೊಯ್ಯುತ್ತಿದೆ ಎಂದು ಅಸಮಾಧಾನ ಹೊರಹಾಕಿದರು.

ಮನರೇಗಾ ಮರುಸ್ಥಾಪನೆಗೆ ಒತ್ತಾಯಿಸಿ ಸಿಎಂ ಡಿಸಿಎಂ ನೇತೃತ್ವದಲ್ಲಿ ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆ ನಡೆಸಲಾಗಿದೆ, ನಮ್ಮ ಪಕ್ಷದ ಜನಪರ ಯೋಜನೆ ಗೋಸ್ಕರವಾಗಿ ಇಡೀ ದೇಶಾದ್ಯಂತ ಹೋರಾಟ ನಡೆಸಬೇಕಿರುವ ಪರಿಸ್ಥಿತಿ ನಿರ್ಮಾಣವಾಗಿರುವುದು ಕೇಂದ್ರ ಸರ್ಕಾರಕ್ಕೆ ನಾಚಿಕೆಗೇಡು ಎಂದು ಕಿಡಿಕಾರಿದರು. ಈ ಕೂಡಲೇ ಮನರೇಗಾ ಮರುಸ್ಥಾಪನೆಗೆ ಕೇಂದ್ರ ಸರ್ಕಾರ ಮುಂದಾಗಬೇಕು ಇಲ್ಲವಾದಲ್ಲಿ ಚಳುವಳಿ ಮತ್ತಷ್ಟು ಗಟ್ಟಿಯಾಗುತ್ತದೆ ಎಂದು ಎಚ್ಚರಿಸಿ ಉಪತಹಶೀಲ್ದಾರ್ ಜಯಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳರ ಮುಖಂಡರಾದ ಎಚ್.ಎಸ್. ನಂಜಪ್ಪ, ಕಬ್ಬಹಳ್ಳಿ ಮಹೇಶ್, ಮರಿಸ್ವಾಮಿ, ಮಡಿವಾಳಪ್ಪ, ಪಿ.ಬಿ.ರಾಜಶೇಖರ್, ಮಣಿ ಮಡಹಳ್ಳಿ, ಶ್ರೀನಿವಾಸ್ ಚಿರಕನಹಳ್ಳಿ, ಆದರ್ಶ್, ವಿಶ್ವಾಸ್, ಶಿವಪುರ ಮಂಜಪ್ಪ, ಚಂದ್ರಶೇಖರ್ ವೀರನಪುರ, ಗುರುಪ್ರಸಾದ್, ಮಂಜು ದೇವರಹಳ್ಳಿ, ಯುವ ಕೈ ಕಾರ್ಯಕರ್ತರು ಇದ್ದರು.

**ಕೇಂದ್ರ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ**

# ಬೀದಿ ನಾಯಿಗಳ ಹಾವಳಿ ನಿಯಂತ್ರಿಸಿ ಜಿಲಾಧಿಕಾರಿ ಕುಮಾರ

• ಉದಯವಾಹಿನಿ, ಮಂಡ್ಯ


ಉದಯವಾಹಿನಿ ಚಿತ್ರ

ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ಸುಪ್ರೀಂಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ನಗರ, ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ತಕ್ಷಣವೇ ಬೀದಿ ನಾಯಿಗಳ ನಿಯಂತ್ರಣಕ್ಕೆ ಕಾರ್ಯೋನ್ಮುಖರಾಗಬೇಕು ಎಂದು ಜಿಲ್ಲಾಧಿಕಾರಿ ಕುಮಾರ ತಿಳಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಬೀದಿ ನಾಯಿಗಳ ಹಾವಳಿ ನಿಯಂತ್ರಣ ಸಂಬಂಧ ಸಭೆ ನಡೆಸಿ ಅವರು ಮಾತನಾಡಿದರು.

ಪ್ರತಿ ನಗರ ಸ್ಥಳೀಯ ಸಂಸ್ಥೆಗಳಲ್ಲಿಯೂ ಬೀದಿ ನಾಯಿಗಳ ಉಪಟಳ ತಡೆಯಲು ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು ಸಾರ್ವಜನಿಕ ಕಟ್ಟಡಗಳ ಸುತ್ತ ಆವರಣ ಗೋಡೆ ನಿರ್ಮಿಸಬೇಕು. ಬಸ್ ನಿಲ್ದಾಣದಲ್ಲಿ ಬೀದಿ ನಾಯಿಗಳು ಪ್ರವೇಶಿಸದಂತೆ, ಎಲ್ಲೆಂದರಲ್ಲಿ ತಿನಿಸು ಪದಾರ್ಥಗಳನ್ನು ಎಸೆಯದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

**ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ:** ಎಲ್ಲಾ ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸಿ ಅವುಗಳನ್ನು ಸೂಕ್ತ ಆಶ್ರಯ ತಾಣಕ್ಕೆ ಸ್ಥಳಾಂತರಿಸಿ ರೇಬಿಸ್ ಲಸಿಕೆಗಳನ್ನು ಹಾಕಬೇಕಾಗುತ್ತದೆ. ಈ ಸಂಬಂಧ ಅಗತ್ಯ ಕ್ರಮ ವಹಿಸುವಂತೆ ಸಭೆಯಲ್ಲಿ ತಿಳಿಸಿದರು.

ಪ್ರತಿ ತಾಲ್ಲೂಕಿನ ಸ್ಥಳೀಯ ಸಂಸ್ಥೆಯ ವ್ಯಾಪ್ತಿಯಲ್ಲಿ ಒಂದರಂತೆ ಒಟ್ಟು 8 ಆಶ್ರಯ ತಾಣಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಲಾಗಿದೆ. ಶಾಲಾ, ಕಾಲೇಜು, ಬಸ್ ನಿಲ್ದಾಣ, ಆಸ್ಪತ್ರೆ ಆವರಣದಲ್ಲಿ 190 ಬೀದಿ ನಾಯಿಗಳನ್ನು ಗುರುತಿಸಲಾಗಿದ್ದು ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ನಡೆಸಿ ಮುಂದಿನ ದಿನಗಳಲ್ಲಿ ಆಶ್ರಯತಾಣಕ್ಕೆ ಸ್ಥಳಾಂತರಿಸಲು ಅಗತ್ಯ ಕ್ರಮವಹಿಸಿ ಎಂದು ಸಭೆಯಲ್ಲಿ ಮಾಹಿತಿ ನೀಡಿದರು. ಆಹಾರದ ತ್ಯಾಜ್ಯಗಳು ನಾಯಿಗಳನ್ನು ಆಕರ್ಷಿಸುತ್ತವೆ. ಆದ್ದರಿಂದ ಕಸದ ಡಬ್ಬಿಗಳನ್ನು ಮುಚ್ಚಿಡಿ ಮತ್ತು ತ್ಯಾಜ್ಯವನ್ನು ಪ್ರತಿದಿನ ವಿಲೇವಾರಿ ಮಾಡಿ ಎಂದು ಸಭೆಯಲ್ಲಿ ತಿಳಿಸಿದರು.

# ಮಾಲೂರು ತಾಲ್ಲೂಕಿನ ಗ್ರಾಮೀಣ ಭಾಗಕ್ಕಿಲ್ಲ ಬಸ್ ಸೌಲಭ್ಯ

## ಶಾಲೆಗೆ ಬರಲು ಆರೇಳು ಕಿಮೀ ನಡಿಗೆ; ಬಸ್ ಸೌಲಭ್ಯ ಒದಗಿಸಿದರೆ ಸಾಕು ಬೆಳಗಲಿದೆ ಮಕ್ಕಳ ಭವಿಷ್ಯದ ದೀವಿಗೆ

• ಉದಯವಾಹಿನಿ, ಕೋಲಾರ

ಗ್ರಾಮೀಣ ಭಾಗದ ಗ್ರಾಮಗಳಿಗೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದ ಪರಿಣಾಮ ಶಾಲಾ, ಕಾಲೇಜಿಗೆ ಮಕ್ಕಳು ಊಟ ನೀರು ಬಿಟ್ಟು ನಿತ್ಯ ಆರೇಳು ಕಿಮೀ ದೂರ ನಡೆದುಕೊಂಡು ಬಂದು ತರಗತಿಗಳಿಗೆ ಹಾಜರಾಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸರ್ಕಾರ ಗ್ರಾಮಗಳ ಮತ್ತು ಶಾಲೆಗಳ ಅಭಿವೃದ್ಧಿಗೆ ಕೋಟ್ಯಂತ ರೂ.ಗಳನ್ನು ಖರ್ಚು ಮಾಡುತ್ತಿದೆ. ಆದರೆ ಗ್ರಾಮಗಳಿಂದ ಶಾಲೆಗಳಿಗೆ ಹೋಗಲು ಬಸ್ ವ್ಯವಸ್ಥೆ ಮಾಡದೆ ಕಡೆಗಣಿಸಿರುವ ಕಾರಣ ಮಕ್ಕಳು ನಡೆದೇ ಹೋಗಬೇಕಾದ ಅನಿವಾರ್ಯವಿದೆ. ಮಾಲೂರು ತಾಲ್ಲೂಕಿನ ವ್ಯಾಪ್ತಿಗೆ ಸೇರಿದ ಊಸರಹಳ್ಳಿ, ಹಳೇಪಾಳ್ಯ, ಸೋರಕಾಯಲಹಳ್ಳಿ, ಗುಂಡ್ಲಪಾಳ್ಯ ದೇವರಹಳ್ಳಿ ಮುಂತಾದ ಗ್ರಾಮಗಳಿಂದ 30ಕ್ಕೂ ಹೆಚ್ಚಿನ ಗ್ರಾಮಗಳ ಮಕ್ಕಳು ನಿತ್ಯ ಬೂದಿಕೋಟೆಯ ಕೆಪಿಎಸ್ ಶಾಲೆ ಹಾಗೂ ಪಿಯು ಕಾಲೇಜಿಗೆ ಬರುತ್ತಾರೆ.

**ಬಸ್ ಇಲ್ಲ:** ಈ ಮಾರ್ಗದಲ್ಲಿ ಶಾಲಾ ಕಾಲೇಜುಗಳಿಗೆ ಮಕ್ಕಳು ಹೋಗುವ ಸಮಯಕ್ಕೆ ಯಾವುದೇ ಬಸ್ ಸಂಪರ್ಕವಿಲ್ಲ. ಅದರಿಂದಾಗಿ ಬೆಟ್ಟ ಗುಡ್ಡಗಳ ನಡುವಿನ ಕಲ್ಲುಗಳೇ ತುಂಬಿರುವ ರಸ್ತೆಯಲ್ಲಿಆರೇಳು ಕಿ.ಮೀ ದೂರ ನಡೆದೇ ಬರಬೇಕು. ಮಕ್ಕಳು ದಿನಾಲೂ ಬೆಳಗ್ಗೆ 8 ಗಂಟೆಗೆ ಮನೆ ಬಿಟ್ಟು 10 ಗಂಟೆಗೆ ಶಾಲೆ ತಲುಪುತ್ತಾರೆ. ಶನಿವಾರದ ದಿನ ಬೆಳಗ್ಗೆ 6 ಗಂಟೆಗೆ ಮನೆ ಬಿಟ್ಟು 8 ಗಂಟೆ ವೇಳೆಗೆ ತರಗತಿಗೆ ಹಾಜರಾಗುತ್ತಾರೆ. ಮಕ್ಕಳು ಶಾಲೆಗೆ ಹೋಗುವ ಸಮಯಕ್ಕೆ ಮನೆಗಳಲ್ಲಿ ಅಡುಗೆ ಮಾಡಿರದ ಕಾರಣ ರಾತ್ರಿಯ ತಂಗಳನ್ನು ತಿಂದು ಹೊರಟರೆ, ಕೆಲವರಂತೂ ಊಟವಿಲ್ಲದೆ ಖಾಲಿ ಹೊಟ್ಟೆಯಲ್ಲಿ ತರಗತಿಗಳಿಗೆ ಬರುತ್ತಾರೆ. ಈ ಮಕ್ಕಳಿಗೆ ಶಾಲೆಯಲ್ಲಿ ನೀಡುವ ಬೆಳಗಿನ ಹಾಲು, ಮಧ್ಯಾಹ್ನದ ಬಿಸಿಯೂಟ ಹೊಟ್ಟೆಗೆ ಆಸರೆಯಾಗಿದೆ. ಈ ಗ್ರಾಮಗಳಿಗೆ ಸಂಪರ್ಕ ಕಲ್ಪಿಸಲು ಬಂಗಾರಪೇಟೆ, ಬೂದಿಕೋಟೆ, ಮಾರಾಂಡಹಳ್ಳಿ ಮಾರ್ಗವಾಗಿ ಮಾಸ್ತಿಗೆ ಕೆಂಪು ಬಸ್ ಸಂಚರಿಸುತ್ತದೆ. ಈ ಬಸ್ ಬೂದಿಕೋಟೆಯನ್ನು ಬೆಳಗ್ಗೆ 9:30ಕ್ಕೆ ಬಿಟ್ಟು ಮತ್ತೆ 11 ಗಂಟೆಗೆ ವಾಪಸ್ಸು ಆಗುವುದರಿಂದ ಶಾಲಾ ಮಕ್ಕಳಿಗೆ ಅನುಕೂಲವಾಗುತ್ತಿಲ್ಲ. ಸಂಜೆ 4:30 ಸಮಯಕ್ಕೆ ಬಸ್ ಇರುವುದರಿಂದ ಶಾಲಾ ಮಕ್ಕಳು ಬಸ್ ಹತ್ತಿ ಮನೆಗೆ ಹೋಗಲು ಸಹಕಾರಿಯಾಗಿದೆ.

ಶನಿವಾರ ಶಾಲೆಗೆ ಹೋಗುವಾಗ, ಬರುವಾಗ ಬಸ್ ವ್ಯವಸ್ಥೆ ಇಲ್ಲದೆ ನಡೆದು ಹೋಗುವುದು ತಪ್ಪಿಲ್ಲ. 10ನೇ ತರಗತಿಯ ಮಕ್ಕಳಿಗೆ ವಿಶೇಷ ತರಗತಿಗಳನ್ನು ನಡೆಸುವಾಗ ಬೆಳಗ್ಗೆ 7 ಗಂಟೆಗೆ ಮನೆ ಬಿಡಬೇಕು. ಇಲ್ಲವಾದರೆ ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ.

ಈ ಮಾರ್ಗದ ರಸ್ತೆ ಬೆಟ್ಟಗುಡ್ಡ, ಕಾಡಂಚಿಗೆ ಹೊಂದಿಕೊಂಡಿರುವುದರಿಂದ ಒಂಟಿಯಾಗಿ ಸಂಚರಿಸಲು ಅಸಾಧ್ಯವಾಗಿದೆ. ನಿತ್ಯ ಸುಮಾರು ಮೂರರಿಂದ ನಾಲ್ಕು ಗಂಟೆಗಳಷ್ಟು ನಡೆಯುವುದಕ್ಕೆ ಸಮಯ ವ್ಯರ್ಥವಾಗುತ್ತಿರುವುದರಿಂದ ಮಕ್ಕಳಿಗೆ ಶಾಲೆಯಲ್ಲಿ ಮಾಡಿದ ಪಾಠಗಳನ್ನು ಓದಿಕೊಳ್ಳಲು ಕಷ್ಟ ಆಗುತ್ತಿದೆ. ಜತೆಗೆ ಕಾಲು ನೋವಿನ ಸಮಸ್ಯೆ ಮಕ್ಕಳಲ್ಲಿಕಾಡುತ್ತಿದೆ. ಹಲವು ವರ್ಷಗಳಿಂದ ಬಸ್ ವ್ಯವಸ್ಥೆ ಇಲ್ಲದೆ ಮಕ್ಕಳ ವಿದ್ಯಾಭ್ಯಾಸ ಕುಂಠಿತಗೊಳ್ಳುತ್ತಿದ್ದು, ಶಾಲೆಗೆ ಹೋಗುವ ಮತ್ತು ವಾಪಸ್ಸು ಬರುವ ಸಮಯದಲ್ಲಿ ಸರ್ಕಾರ ಬಸ್ ಹಾಕಿಸಿದರೆ ಗ್ರಾಮೀಣ ಭಾಗದ ಮಕ್ಕಳ ಭವಿಷ್ಯ ಉಜ್ವಲವಾಗಲಿದೆ. ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು ಕಾಲ್ನಡಿಗೆಯಲ್ಲಿ ಸುಮಾರು 7 ಕಿಮೀ ನಡೆಯುತ್ತಿರುವುದರಿಂದ ಓದಿನ ಕಡೆ ಗಮನ ಮತ್ತು ಏಕಾಗ್ರತೆ ನೀಡಲು ಸಾಧ್ಯವಾಗುತ್ತಿಲ್ಲ. ದಾರಿಯುದ್ದಕ್ಕೂ ದೊಡ್ಡದೊಡ್ಡ ಕಲ್ಲುಬಂಡೆಗಳು ಇರುವ ಕಾರಣ ಹೆಣ್ಣು ಮಕ್ಕಳು ಒಬ್ಬರು ಇಬ್ಬರು ಹೋಗಲು ಭಯವಾಗುತ್ತಿದೆ. ಸರ್ಕಾರ ಬಸ್ ಹಾಕಿಸಿದರೆ ಎಲ್ಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎನ್ನುತ್ತಾರೆ ಸೋರಕಾಯಲಹಳ್ಳಿ ವಿದ್ಯಾರ್ಥಿನಿ ಅನುಪ್ರಿಯ.

ಐದಾರು ಗ್ರಾಮಗಳು ಮಾಲೂರು ತಾಲ್ಲೂಕಿಗೆ ಸೇರಿದ್ದರೂ ಹೆಚ್ಚಿನ ವಿದ್ಯಾರ್ಥಿಗಳು ಬಂಗಾರಪೇಟೆ ತಾಲ್ಲೂಕಿನ ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಎಲ್ಲಾಮಕ್ಕಳು ನಿತ್ಯ ಶಾಲೆಗೆ ನಡೆದೇ ಹೋಗಬೇಕಾದ ಅನಿವಾರ್ಯವಿದೆ. ಆದರೆ ಯಾರೂ ನಮ್ಮ ಕಷ್ಟಗಳ ನಿವಾರಣೆಗೆ ಮುಂದಾಗುತ್ತಿಲ್ಲ. ಬಸ್ ವ್ಯವಸ್ಥೆ ಇಲ್ಲದೆ ಪಾಲಕರು ಹೆಣ್ಣು ಮಕ್ಕಳನ್ನು ಕಾಲೇಜುಗಳಿಗೆ ಕಳುಹಿಸಲು ಮುಂದಾಗುತ್ತಿಲ್ಲ ಎಂದು ವಿದ್ಯಾರ್ಥಿನಿ ನಿತ್ಯಶ್ರೀ ಅಸಮಾಧಾನ ವ್ಯಕ್ತಪಡಿಸುತ್ತಾರೆ.






> **ಬಂಗಾರಪೇಟೆಯಿಂದ ಮಾಸ್ತಿಗೆ ಸೊರಕಾಯಲಹಳ್ಳಿ ಮಾರ್ಗವಾಗಿ ಈಗಾಗಲೇ ಒಂದು ಬಸ್ ಸಂಚರಿಸುತ್ತಿದೆ. ನನ್ನ ಹಂತದಲ್ಲಿ ಮತ್ತೊಂದು ಬಸ್ ಹಾಕಲು ಸಾಧ್ಯವಿಲ್ಲ. ಕೋಲಾರದ ಡಿವಿಜನ್ ಆಫೀಸ್‌ನಿಂದ ಬರುವ ಆದೇಶ ಪಾಲನೆ ಮಾಡುತ್ತಿದ್ದೇವೆ. ಡಿವಿಜನ್ ಕಚೇರಿಗೆ ಗ್ರಾಮಸ್ಥರು ಬೇಡಿಕೆ ಇಟ್ಟು ಮನವಿ ಸಲ್ಲಿಸಿದರೆ ಬಸ್ ವ್ಯವಸ್ಥೆ ಮಾಡುತ್ತಾರೆ.**
>
> **- ನೇತ್ರಾವತಿ, ಕೆಜಿಎಫ್ ಡಿಪೋ ಮ್ಯಾನೇಜರ್**

**ಗ್ರಾಮಗಳತ್ತ ಕಷ್ಟಸುಖ ವಿಚಾರಿಸಲು ಬರುತ್ತಿಲ್ಲ ಎಂಬುದು ಗ್ರಾಮಸ್ಥರ ಆರೋಪ**

**ಬೂದಿಕೋಟೆ ಕೆಪಿಎಸ್ ಶಾಲೆ ಜತೆಗೆ ದಿನ್ನಹಳ್ಳಿ ಗ್ರಾಮದಲ್ಲಿ ಪ್ರೌಢಶಾಲೆ ಇದ್ದರೂ ಅಲ್ಲಿಗೆ ಹೋಗಲಿಕ್ಕೆ ಸಹ ಬಸ್ ಸಂಪರ್ಕ ಸರಿಯಾಗಿಲ್ಲ. ಬೆಳಿಗ್ಗೆ ಶಾಲೆಗೆ ಹೋಗಲು ಬಸ್ ಇದ್ದರೆ ಸಂಜೆ ಸಂಪರ್ಕ ಕಲ್ಪಿಸಲು ಬಸ್ ಇಲ್ಲದ ಕಾರಣ ಶಾಲೆಯಿಂದ ವಾಪಸ್ಸು ಬರಲು ನಡೆದು ಬರಲು ಕತ್ತಲಾಗುವ ದೃಷ್ಟಿಯಿಂದ ಪೋಷಕರು ಅಲ್ಲಿಗೆ ದಾಖಲಿಸಲು ಮುಂದಾಗುತ್ತಿಲ್ಲ. ಚುನಾವಣೆ ಸಮಯದಲ್ಲಿ ಬರುವ ರಾಜಕಾರಣಿಗಳು ಬಸ್ ವ್ಯವಸ್ಥೆ ಕಲ್ಪಿಸುವ ಭರವಸೆ ನೀಡಿ ಹೋದರೆ ಮತ್ತೆ ಗ್ರಾಮಗಳತ್ತ ಕಷ್ಟ ಸುಖ ವಿಚಾರಿಸಲು ಬರುತ್ತಿಲ್ಲ ಎಂಬುದು ಗ್ರಾಮಸ್ಥರ ಆರೋಪವಾಗಿದೆ.**

**ಬಸ್ ಸೌಲಭ್ಯ ಕಲ್ಪಿಸಿ ಕೊಡುವುದೇ ಸರ್ಕಾರ?**

## ಅಂತರಾಳದಿಂದ.. EDITORIAL

# ಎಐಗೆ ಪ್ರಜಾಪ್ರಭುತ್ವದ ಆಯಾಮ ಭಾರತದ ಆಶಯ ಅನುಸರಣೀಯ




ನವದೆಹಲಿಯಲ್ಲಿ ಕಳೆದ ವಾರ ಕೊನೆಗೊಂಡ 'ಎಐ ಇಂಪ್ಯಾಕ್ಟ್ ಶೃಂಗಸಭೆ'ಯು ದೇಶದಲ್ಲಿನ 'ಎಐ' ಸಂಬಂಧಿತ ಚಟುವಟಿಕೆಗಳಿಗೆ ಉತ್ತೇಜನ ನೀಡುವಂತಹದ್ದಾಗಿದೆ. ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ 'ಜಾಗತಿಕ ದಕ್ಷಿಣ ಭಾಗದಲ್ಲಿ ನಡೆದ ಮೊದಲ ಪ್ರಮುಖ ಸಮಾವೇಶ ಇದಾಗಿದೆ. ಕೃತಕ ಬುದ್ಧಿಮತ್ತೆಯ ಪ್ರತಿಷ್ಠಿತ ವೇದಿಕೆಗಳಲ್ಲಿ ಜಾಗತಿಕ ದಕ್ಷಿಣ ದೇಶಗಳು ಇಲ್ಲಿಯವರೆಗೆ ಯಾವುದೇ ಮಹತ್ವದ ಉಪಸ್ಥಿತಿಯನ್ನು ಹೊಂದಿಲ್ಲ, 'ಎಐ' ಆಡಳಿತಕ್ಕೆ ಸಂಬಂಧಿಸಿದ ಸಂವಾದಗಳಲ್ಲಿ ಭಾಗಿಯಾಗಿಲ್ಲ. ಪ್ರಸ್ತುತ ವಿಶ್ವವ್ಯಾಪಿಯಾಗಿರುವ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉನ್ನತ ಮಟ್ಟದ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶವನ್ನು ದೆಹಲಿಯ ಸಮಾವೇಶ ದಕ್ಷಿಣದ ದೇಶಗಳಿಗೆ, ವಿಶೇಷವಾಗಿ ಭಾರತಕ್ಕೆ ಕಲ್ಪಿಸಿತು. ಈ ಶೃಂಗಸಭೆಯಲ್ಲಿ ಅಳವಡಿಸಿಕೊಂಡ 'ದೆಹಲಿ ಘೋಷಣೆ'ಯು ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ಪ್ರಜಾಪ್ರಭುತ್ವದ ಸ್ಪರ್ಶ ನೀಡುವ ಮೂಲಕ ವಿಶ್ವದಲ್ಲಿ ಬದಲಾವಣೆ ತರುವುದಕ್ಕೆ ಕರೆ ನೀಡಿದೆ. 'ಎಐ' ಬಳಕೆಯ ಅನುಕೂಲವನ್ನು ಜನರಿಗೆ ಸಾಧ್ಯವಾದಷ್ಟೂ ತಲಪಿಸುವ, ವಿಶ್ವದ ದಕ್ಷಿಣ ಭಾಗದ ದೇಶಗಳಲ್ಲಿ 'ಎಐ' ಅನ್ನು ಪ್ರಸ್ತುತವಾಗಿಸುವ, ಸುರಕ್ಷಿತ ಹಾಗೂ ವಿಶ್ವಾಸಾರ್ಹ ಆಗಿಸುವ ಕುರಿತು 'ದೆಹಲಿ ಘೋಷಣೆ' ಒಳಗೊಂಡಿರುವ ವಿಷಯಗಳು ಭಾರತ ಗೊತ್ತುಪಡಿಸಿಕೊಂಡ ಆದ್ಯತೆಗಳೊಂದಿಗೆ ಹೊಂದಾಣಿಕೆ ಆಗುವಂತಿವೆ. ಈ ಘೋಷಣೆಗೆ ಅಮೆರಿಕ, ಚೀನಾ, ಫ್ರಾನ್ಸ್ ಸೇರಿದಂತೆ ಕೃತಕ ಬುದ್ಧಿಮತ್ತೆ ಕ್ಷೇತ್ರದ ಮುಂಚೂಣಿ ದೇಶಗಳು ಸಹಿ ಹಾಕಿವೆ. ಶೃಂಗಸಭೆಯನ್ನು ಉದ್ದೇಶಿಸಿ ಮಾತನಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಓಪನ್ ಕೋಡ್ ಮತ್ತು ಹಂಚಿಕೆಯ ಅಭಿವೃದ್ಧಿಯನ್ನು ಆಧರಿಸಿದ 'ಎಐ' ಕುರಿತ ಪರ್ಯಾಯ ದೃಷ್ಟಿಕೋನವನ್ನು ಪ್ರತಿಪಾದಿಸಿದರು.

> ಎಐ ಇಂಪ್ಯಾಕ್ಸ್ ಶೃಂಗಸಭೆ' ಕೃತಕ ಬುದ್ಧಿಮತ್ತೆ ಕ್ಷೇತ್ರದ ಚಟುವಟಿಕೆಗಳಿಗೆ ಉತ್ತೇಜನ ನೀಡುವಂತಿದೆ ಹಾಗೂ ಆ ಕ್ಷೇತ್ರದಲ್ಲಿನ ಚರ್ಚೆಗಳಲ್ಲಿ ಭಾರತೀಯರಿಗೆ ವೇದಿಕೆ ದೊರಕಿಸುವ ಪ್ರಯತ್ನ ಆಗಿದೆ.

ಅಂತಿಮವಾಗಿ 'ಎಐ' ತಂತ್ರಜ್ಞಾನ ವಿಶ್ವದ ಸಾಮಾನ್ಯ ಒಳಿತನ್ನು ಸಾಧಿಸುವಂತಿರಬೇಕು. ದೇಶಗಳು ಮತ್ತು ಕಂಪನಿಗಳ ನಡುವೆ ತೀವ್ರ ಸ್ಪರ್ಧೆ ಇರುವ ಸಂದರ್ಭದಲ್ಲಿ ಈ 'ಸಾಮಾನ್ಯ ಒಳಿತಿ'ನ ಆಶಯ ಮಹತ್ವದ್ದಾಗಿದೆ. ಚಾಟ್‌ಜಿಪಿಟಿ ಸಿಇಒ ಸ್ಯಾಮ್ ಆಲ್ಟಮನ್, ಆ್ಯಂಥ್ರೋಪಿಕ್ ಸಿಇಒ ಡೇರಿಯೊ ಅಮೊಡೈ ಅವರು ಶೃಂಗಸಭೆಯಲ್ಲಿ ಸಾರ್ವಜನಿಕವಾಗಿ ಪರಸ್ಪರ ಕೈಗಳನ್ನು ಹಿಡಿದುಕೊಂಡು ಮೇಲೆತ್ತಲು ನಿರಾಕರಿಸಿದ್ದು, ಆ ಕ್ಷೇತ್ರದಲ್ಲಿ ಇರುವ ಸ್ಪರ್ಧೆಯ ತೀವ್ರತೆಯನ್ನು ಸಂಕೇತಿಸುವಂತಿದೆ. ವಿಶ್ವದ ಗಮನಸೆಳೆದಿದ್ದರೂ, 'ಎಐ' ತಂತ್ರಜ್ಞಾನ ಇನ್ನೂ ಶೈಶವಾವಸ್ಥೆಯಲ್ಲಿದೆ ಹಾಗೂ ಅದರ ಸಾಧ್ಯತೆಗಳು ಅಸ್ಪಷ್ಟವಾಗಿಯೇ ಇವೆ. ಕೈಗಾರಿಕೆ, ವೈದ್ಯಕೀಯ, ಕೃಷಿ, ಕಾನೂನು, ಸಮಾಜ ವಿಜ್ಞಾನ ಸೇರಿದಂತೆ ಖಾಸಗಿ ಹಾಗೂ ಸಾರ್ವಜನಿಕ ಜೀವನದ ಬಹುತೇಕ ಕ್ಷೇತ್ರಗಳನ್ನು ಈ ಹಿಂದಿನ ಯಾವ ತಂತ್ರಜ್ಞಾನವೂ ಪ್ರಭಾವಿಸದಷ್ಟು ಗಾಢವಾಗಿ 'ಎಐ' ಪ್ರಭಾವಿಸಲಿದೆ ಎಂದು ಭಾವಿಸಲಾಗಿದೆ. ಅಮೆರಿಕ, ಚೀನಾದಂತಹ ಕೆಲವು ದೇಶಗಳು ಮತ್ತು ಸಂಸ್ಥೆಗಳು ಈ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿವೆ. ನರೇಂದ್ರ ಮೋದಿ ಅವರು ನೀಡಿರುವ 'ಮಾನವ್' ಪರಿಕಲ್ಪನೆ ಪ್ರತಿನಿಧಿಸುವ ನೈತಿಕತೆ, ಹೊಣೆಗಾರಿಕೆ, ರಾಷ್ಟ್ರೀಯ ಸಾರ್ವಭೌಮತೆ, ಲಭ್ಯತೆ, ವಿಶ್ವಾಸಾರ್ಹತೆ ಎನ್ನುವ ಐದು ಆಶಯಗಳನ್ನು ಈ ಕ್ಷೇತ್ರದ ಭಾಗವಾಗಿಸುವುದು ಸುಲಭವಲ್ಲವಾದರೂ, ಸಾಮಾನ್ಯ ಒಳಿತಿಗಾಗಿ ಮೂಲಭೂತವಾದ ಮಾರ್ಗಸೂಚಿಗಳನ್ನು ಹೊಂದುವ ಅಗತ್ಯವನ್ನು ಗಟ್ಟಿಯಾಗಿ ಹೇಳಬೇಕಾಗಿದೆ. 'ಎಐ' ಕ್ಷೇತ್ರದ ಪ್ರಮುಖ ಸಂಸ್ಥೆಗಳು ಸಕ್ರಿಯವಾಗಿ ಭಾಗವಹಿಸಿದ್ದು ಶೃಂಗಸಭೆಯ ವಿಶೇಷಗಳಲ್ಲೊಂದಾಗಿದೆ. ಐದುನೂರಕ್ಕೂ ಹೆಚ್ಚು ಖಾಸಗಿ ಮಾತುಕತೆಗಳು ನಡೆದಿದ್ದು, 250 ಶತಕೋಟಿ ಡಾಲರ್‌ಗೂ ಹೆಚ್ಚು ಬಂಡವಾಳ ಹೂಡಿಕೆಯ ಬದ್ಧತೆ, 20 ಶತಕೋಟಿ ಡಾಲರ್ ಅಂದಾಜಿನ ಸಂಶೋಧನೆಗಳ ಬದ್ಧತೆಗೆ ಸಮಾವೇಶ ಸಾಕ್ಷಿಯಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ. ಗೂಗಲ್, ಮೈಕ್ರೋಸಾಫ್ಟ್‌ನಂತಹ ಪ್ರಮುಖ ಸಂಸ್ಥೆಗಳೊಂದಿಗಿನ ಭಾರತದ ಪಾಲುದಾರಿಕೆಯ ಮಾತುಕತೆಗಳು ತಂತ್ರಜ್ಞಾನ ಮತ್ತು ಬಂಡವಾಳ, ಎರಡರ ಬರುವಿಕೆಗೂ ಕಾರಣವಾಗುವಂತಿವೆ. ಭಾರತವು ತನ್ನ ಅಗತ್ಯ, ಸಂದರ್ಭಗಳಿಗೆ ಸಂಬಂಧಿಸಿದಂತೆ ನಾವೀನ್ಯತೆ ಮತ್ತು ಪ್ರಯೋಗಗಳ ಮೂಲಕ ಸಂಶೋಧನೆಯನ್ನು ರೂಪಿಸಿಕೊಳ್ಳಬೇಕಾಗಿದೆ. 'ಎಐ'ಗೆ ಸಂಬಂಧಿಸಿದ ಆಸಕ್ತಿ ಮತ್ತು ಚಟುವಟಿಕೆ ತೀವ್ರಗೊಳ್ಳುತ್ತಿರುವ ಸಂದರ್ಭದಲ್ಲಿ, ಈ ಕ್ಷೇತ್ರದಲ್ಲಿ ಹಲವಾರು ನವೋದ್ಯಮಗಳು ಸಕ್ರಿಯವಾಗಿವೆ. ಈ ಎಲ್ಲಾ ಚಟುವಟಿಕೆಗಳಿಗೆ ಮತ್ತು ಆಕಾಂಕ್ಷೆಗಳಿಗೆ 'ಎಐ ಇಂಪ್ಯಾಕ್ಟ್ ಶೃಂಗಸಭೆ' ಉತ್ತೇಜನ ನೀಡಿದೆ.

## ರಾಮಾಯಣ



### ತಾರೆಯು ಲಕ್ಷ್ಮಣನಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ಕೋಪದಿಂದ ಬುಸುಗುಟ್ಟುತ್ತಿದ್ದ ಆ ದಶರಥ ಪುತ್ರನನ್ನು ನೋಡಿ ಕಪಿನಾಯಕರು ಹೆದರಿ ದೂರದಲ್ಲಿ ಸರಿದು ನಿಂತರು. ಸೌಮಿತ್ರಿಯಾ ರಮ್ಯವೂ ವಿಶಾಲವೂ ಆದ ಕಿಷ್ಕಿಂಧಾ ಗುಹೆಯನ್ನು ಪ್ರವೇಶಿಸಿದನು. ಅದು ಅನೇಕ ಉಪ್ಪರಿಗೆಯ ಭವನಗಳಿಂದಲೂ ಅರಳಿದ ನಾನಾ ಬಗೆಯ ವೃಕ್ಷಗಳಿಂದಲೂ ಶೋಭಿಸುತ್ತಿತ್ತು., ಕಾಮರೂಪಿಗಳೂ ದೇವಗಂಧರ್ವಪುತ್ರರೂ ಆದ ವಾನರರು ದಿವ್ಯಮಾಲ್ಯಾಂಬರಗಳನ್ನು ಧರಿಸಿದ್ದರು. ವಿಶಾಲವಾದ ರಸ್ತೆಗಳ ಇಕ್ಕೆಲಗಳಲ್ಲಿಯೂ ಸುಗಂಧಿಯಾದ ವಿವಿಧ ಮದ್ಯಗಳನ್ನು ಮಾರುತ್ತಿದ್ದರು. ದಾರಿಯಲ್ಲಿ ಸೌಮಿತ್ರಿಯು ಅಂಗದ ಮೈಂದ, ದ್ವಿವಿದ, ಗವಯ, ಗವಾಕ್ಷ, ಶರಭ, ಸೂರ್ಯಾಕ್ಷ, ಹನುಮಂತ ಮೊದಲಾದ ವಾನರ ಶ್ರೇಷ್ಠರ ದಿವ್ಯಭವನಗಳನ್ನು ನೋಡುತ್ತ ಹೋದನು. ಆ ಭವನಗಳಲ್ಲಿ ಧನಧಾನ್ಯಗಳೂ ಉತ್ತಮ ಸ್ತ್ರೀಯರೂ ತುಂಬಿದ್ದರು. ಮುಂದೆ ಹೋಗುತ್ತ ಲಕ್ಷ್ಮಣನು ಬಿಳಿಯ ಪ್ರಾಕಾರದಿಂದ ಪರಿವೃತವಾದ ಸುಗ್ರೀವನ ಅರಮನೆಯನ್ನು ಕಂಡನು. ಕೈಲಾಸಶಿಖರಗಳಂತೆ ಉನ್ನತವೂ ಶುಭ್ರವೂ ಆದ ಗೋಪುರಗಳಿಂದ ಆ ಭವನವು ಸುಂದರವಾಗಿ ತೋರುತ್ತಿದ್ದಿತು. ಒಳ್ಳೆಯ ದಟ್ಟವಾದ ನೆರಳನ್ನು ಕೊಡುವ ದಿವ್ಯಪುಷ್ಪಫಲಗಳಿಂದ ವಿರಾಜಿಸುವ ವೃಕ್ಷಗಳು ಪ್ರಾಕಾರದೊಳಗೆ ಕಂಗೊಳಿಸುತ್ತಿದ್ದವು. ಶಸ್ತ್ರಧಾರಿಗಳಾದ ಕಪಿಗಳು ಬಾಗಿಲನ್ನು ಕಂಯುತ್ತಿದ್ದರು. ಆರಮನೆಯು ಚಿನ್ನದ ತೋರಣದಿಂದ ಅಲಂಕೃತವಾಗಿತ್ತು. ಮಹಾಬಲಶಾಲಿಯಾದ ಲಕ್ಷ್ಮಣನು ನೇರವಾಗಿ ಅರಮನೆಯೊಳಕ್ಕೆ ಹೋಗುತ್ತಿರಲು ಯಾರೂ ಅವನನ್ನು ತಡೆಯಲಿಲ್ಲ. ಅವನು ಜನಸಮೃದ್ಧವಾದ ಏಳು ಕಕ್ಷ್ಯಗಳನ್ನು ದಾಟಿಹೋಗಿ ವಿಶಾಲವಾದ ಸುಗ್ರೀವನ ಅಂತಃ ಪುರವನ್ನು ಕಂಡನು. ಅದಕ್ಕೆ ಬಿಗಿಯಾದ ಕಾವಲಿತ್ತು. ಅಲ್ಲಲ್ಲಿ ಸುವರ್ಣಮಯವೂ ರಜತಮಯವೂ ಆದ ವಿವಿಧಾಕಾರದ ಮಂಚಗಳನ್ನೂ ಪೀಠಗಳನ್ನೂ ಇಟ್ಟಿದ್ದರು. ಒಂದೇ ಸಮನಾಗಿ ಮಧುರವಾದ ವೀಣಾಧನಿಯೂ ಸಂಗೀತವೂ ಸುತ್ತಲೂ ವಿಜೃಂಭಿಸುತ್ತಿತ್ತು.

ಲಕ್ಷ್ಮಣನು ಆ ಸುಗ್ರೀವಭವನದಲ್ಲಿ ರೂಪಯೌವನಗರ್ವಿತೆಯರಾದ ಬಹುಮಂದಿ ಸುಂದರ ಸ್ತ್ರೀಯರನ್ನು ಕಂಡನು. ಅವರೆಲ್ಲರೂ ಚಿತ್ರವಿಚಿತ್ರವಾದ ಪ್ರಷ್ಟಹಾರಗಳಂದಲೂ ವಿವಿಧಾಭರಣಗಳಿಂದಲೂ ಅಲಂಕೃತರಾಗಿದ್ದರು. ಸುಗ್ರೀವನ ಅನುಚರರೆಲ್ಲರೂ ತೃಪ್ತರಾಗಿ ಉತ್ತಮ ವಸ್ತ್ರಗಳಿಂದ ಭೂಷಿತರಾಗಿ ಆನಂದದಿ ರಿಸುವುದನ್ನು ಲಕ್ಷ್ಮಣನು ಕಂಡನು. ಹೆಂಗಸರ ತ್ಕಾರವನ್ನೂ ಕೇಳಿ ಲಕ್ಷ್ಮಣನಿಗೆ ನಾಚಿಕೆಯಾಯಿತು. ಆ ವೀರನು ಮರುಕ್ಷಣದಲ್ಲಿ ಕ್ರುದ್ಧನಾಗಿ ತನ್ನ ಧನುಸ್ಸನ್ನು ರೋಂಕರಿಸಿ ದಿಕ್ಕುಗಳನ್ನು ಮೊಳಗಿಸಿದನು. ಆಗ ಅಂತಃಪುರದಲ್ಲಿದ್ದ ಸುಗ್ರೀವನು ಆ ಧ್ವನಿಯನ್ನು ಕೇಳಿ ಲಕ್ಷ್ಮಣನು ಸಮೀಪಕ್ಕೆ ಬಂದನೆಂದು ತಿಳಿದುಕೊಂಡನು. ಅಂಗದನ ವಾಕ್ಕವು ಸತ್ಯವೆಂದು ಅವನು ಮನಸ್ಸಿಗೆ ತಂದುಕೊಂಡು ತಾರಾದೇವಿಯನ್ನು ಕರೆದು ಹೀಗೆಂದನು ತಾರೆ, ಲಕ್ಷ್ಮಣನು ಸ್ವಭಾವದಿಂದ ಮೃದುಹೃದಯ. ಈಗ ಆತನು ಕೋಪಯುಕ್ತನಾಗಿ ಬಂದಿರುವಂತೆ ಕಾಣುತ್ತಿದೆ. ಆತನಿಗೆ ಕೋಪಬರುವುದಕ್ಕೆ ತಾರಣವೇನೋ ತಿಳಿಯದು. ನೀನು ಆ ಕಾರಣವನ್ನು ಯುಕ್ತಿಯಿಂದ ವಿಚಾರಿಸು. ಲಕ್ಷ್ಮಣನು ನಿಷ್ಕಾರಣವಾಗಿ ಕೋಪಿಸುವವನಲ್ಲ. ಆತನಿಗೆ ನಾವು ಅಪರಾಧವನ್ನು ಮಾಡಿದೆವೆಂದು ಮನಸ್ಸಿನಲ್ಲೆಣಿಸಿಕೊಂಡಿದ್ದಾನೋ ಏನೋ ತಿಳಿಯಲಿಲ್ಲ. ಈ ಕಾರ್ಯವನ್ನು ಆಲೋಚಿಸಿ ತಿಳಿದು ಹೇಳು. ನೀನೇ ಹೋಗಿ ಆತನ ಮನಸ್ಸಿನಲ್ಲಿರುವುದನ್ನು ತಿಳಿದು ಬಂದು ಹೇಳುವುದುತ್ತವು. ಆತನೊಡನೆ ಮಾತನಾಡುವಾಗ ಮೃದುನುಡಿಗಳನ್ನು ಉಪಯೋಗಿಸು.

ಮುಂದುವರಿಯುವುದು...

ಕೈ ಬಳಸದೆ ಮಹಿಳೆಯ ಟೀ ಶರ್ಟ್ ತೆಗೆದರು, ಎಲ್ಲರೆದುರು ಸ್ನಾನ ಮಾಡಿಸಿದರು; ಎಲ್ವಿಶ್ ಯಾದವ್ ಅವರ ಆ ಕಾರ್ಯಕ್ರಮ ವಿವಾದದ ಸುಳಿಯಲ್ಲಿ

# ಮಹಿಳೆಯರನ್ನು ಗೌರವಿಸಲು ಸಾಧ್ಯವಾಗದಿದ್ದರೆ, ಅವರನ್ನು ಅವಮಾನಿಸಬೇಡಿ

• **ಉದಯವಾಹಿನಿ, ಮುಂಬೈ**

'ಜಿಯೋ ಹಾಟ್‌ಸ್ಟಾರ್' ಒಟಿಟಿ ಪ್ಲಾಟ್‌ಫಾರ್ಮ್‌ನಲ್ಲಿ ಪ್ರಸಾರವಾಗುತ್ತಿರುವ 'ಎಂಗೇಜ್ಡ್ 2' ಎಂಬ 'ರಿಯಾಲಿಟಿ ಶೋ' ಮೂಲಕ ನಡೆಯುತ್ತಿರುವ ಅಶ್ಲೀಲತೆ ಮತ್ತು ಮಹಿಳೆಯರ ವಿಡಂಬನೆಯ ವಿರುದ್ಧ ಹಿಂದೂ ಜನಜಾಗೃತಿ ಸಮಿತಿಯು ಆಕ್ರಮಣಕಾರಿ ನಿಲುವು ತಳೆದಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಮಿತಿಯು ಮುಖ್ಯಮಂತ್ರಿಗಳು ಮತ್ತು ಗೃಹ ರಾಜ್ಯ ಸಚಿವರಿಗೆ ಮನವಿ ಸಲ್ಲಿಸಿ, ಈ 'ರಿಯಾಲಿಟಿ ಶೋ'ವನ್ನು ತಕ್ಷಣವೇ ನಿಷೇಧಿಸಬೇಕು, ಸಂಬಂಧಿತರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿದೆ.

ದಿನೇ ದಿನೇ ಮಹಿಳೆಯರ ಮೇಲಿನ ದೌರ್ಜನ್ಯಗಳು ಹೆಚ್ಚುತ್ತಿರುವಾಗ, ಇಂತಹ ಕಾರ್ಯಕ್ರಮಗಳ ಮೂಲಕ ಮಹಿಳೆಯರನ್ನು ಅಶ್ಲೀಲವಾಗಿ ಪ್ರದರ್ಶಿಸುವುದು ನಾಚಿಕೆಗೇಡಿನ ಸಂಗತಿಯಾಗಿದ್ದು, ಇದು ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಪ್ರೋತ್ಸಾಹ ನೀಡುತ್ತದೆ. ಆದ್ದರಿಂದ, ಮಹಿಳೆಯರ ಗೌರವವನ್ನು ಕಾಪಾಡಲು ಸಾಧ್ಯವಾಗದಿದ್ದರೆ,

ಕನಿಷ್ಠ ಅವರನ್ನು ಅವಮಾನಿಸಬೇಡಿ ಎಂದು 'ರಿಯಾಲಿಟಿ ಶೋ' ಆಯೋಜಕರಿಗೆ ಹಿಂದೂ ಜನಜಾಗೃತಿ ಸಮಿತಿಯ ರಣರಾಗಿಣಿ ಕುಮಾರಿ ಪ್ರಿಯಾಂಕಾ ಲೋಣೆ ಅವರು ಎಚ್ಚರಿಸಿದ್ದಾರೆ.

ಸಮಿತಿಯ ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಿದ ಗೃಹ ರಾಜ್ಯ ಸಚಿವ ಶ್ರೀ ಯೋಗೇಶ್ ಕದಮ್ ಅವರು, ಈ ಪ್ರಕರಣದಲ್ಲಿ ಪೊಲೀಸ್ ಮಹಾನಿರ್ದೇಶಕರಿಗೆ ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗುವುದು, ಈ ಕುರಿತು ಕ್ರಮಕ್ಕಾಗಿ ಸಾಂಸ್ಕೃತಿಕ ಇಲಾಖೆಗೂ ತಿಳಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.


ಈ 'ರಿಯಾಲಿಟಿ ಶೋ'ನಲ್ಲಿ 'ಲ್ಯಾಪ್ ಡ್ಯಾನ್ಸ್', 'ಮಡ್ ಟಾಸ್ಕ್' ಮತ್ತು 'ಐಸ್ ಕ್ಯೂಬ್ ಟಾಸ್ಕ್' ನಂತಹ ಅತ್ಯಂತ ಕೀಳುಮಟ್ಟದ ಕೃತ್ಯಗಳ ಮೂಲಕ ಮಹಿಳೆಯರನ್ನು ಕೇವಲ ವಸ್ತುವಿನಂತೆ ಬಿಂಬಿಸಲಾಗುತ್ತಿದೆ ಎಂದು ಸಮಿತಿಯು ಗಮನ ಸೆಳೆದಿದೆ. ವಿಶೇಷವಾಗಿ ಕೈಗಳನ್ನು ಬಳಸದೆ ಕೇವಲ ಬಾಯಿಯಿಂದ ಮಹಿಳೆಯರ ವಸ್ತ್ರವನ್ನು ತೆಗೆಯುವುದು, ಸಾರ್ವಜನಿಕವಾಗಿ ಮಹಿಳೆಯರನ್ನು ಸ್ಪರ್ಶಿಸಿ ಸ್ನಾನ ಮಾಡಿಸುವುದು, ಮೈಗೆ ಕೆಸರು ಹಚ್ಚುವುದು ಮೊದಲಾದ ಟಾಸ್ಕ್‌ಗಳು ಕಾನೂನಿನ ಬಹಿರಂಗ ಉಲ್ಲಂಘನೆಯಾಗಿದೆ. ಈ ಕೃತ್ಯಗಳು ಯುವ ಪೀಳಿಗೆಯ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು, ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯುತ್ತಿರುವ ಈ ಅರಾಜಕತೆಯನ್ನು ತಡೆಯುವುದು ಕಾಲದ ಅಗತ್ಯವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ವಿಷಯದ ಗಂಭೀರತೆಯನ್ನು ಅರಿತ ಬಿಜೆಪಿ ಶಾಸಕಿ ಚಿತ್ರಾ ವಾಘ್, ಶಿವಸೇನೆಯ ಶಾಸಕಿ ಡಾ. ಮನೀಷಾ ಕಾಯಂದೆ ಅವರೂ ಈ ಪ್ರಕರಣವನ್ನು ಬೆನ್ನಟ್ಟುವ ಭರವಸೆ ನೀಡಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಇಂತಹ ಅಶ್ಲೀಲ ಸಾಹಿತ್ಯದ ಮೇಲೆ ಶಾಶ್ವತ ನಿಷೇಧ ಹೇರಲು ಪ್ರಯತ್ನಿಸಲಾಗುವುದು ಎಂದು ಜನಪ್ರತಿನಿಧಿಗಳು ಸ್ಪಷ್ಟಪಡಿಸಿದ್ದಾರೆ. ಡಿಜಿಟಲ್ ಮಾಧ್ಯಮಗಳ ಮೇಲೆ ನಿಗಾ ಇಡಲು ರಾಜ್ಯ ಸರ್ಕಾರವು 'ಸಾಂಸ್ಕೃತಿಕ ಮೇಲ್ವಿಚಾರಣಾ ಸಮಿತಿಯನ್ನು ರಚಿಸಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಿಸಲಾಗಿದೆ. ಮಹಾರಾಷ್ಟ್ರದ ಸಂಸ್ಕೃತಿ ಮತ್ತು ಸ್ತ್ರೀ ಗೌರವದ ಪರಂಪರೆಯನ್ನು ಕಾಪಾಡಲು ಇಂತಹ ವಿಕೃತ ಕಾರ್ಯಕ್ರಮಗಳಿಗೆ ಅವಕಾಶ ನೀಡುವುದಿಲ್ಲ ಎಂದು ಹಿಂದೂ ಜನಜಾಗೃತಿ ಸಮಿತಿ ಎಚ್ಚರಿಸಿದೆ. 24 ಗಂಟೆಯೊಳಗೆ ಕಠಿಣ ಕ್ರಮ ಕೈಗೊಳ್ಳಬೇಕೆಂದು ಸಮಿತಿಯು ಗೃಹ ರಾಜ್ಯ ಸಚಿವರಿಗೆ ಆಗ್ರಹಿಸಿದೆ.

**ನಾಚಿಕೆಗೇಡಿನ ಸಂಗತಿ**

ಉದಯವಾಹಿನಿ ಚಿತ್ರ




ಉದಯವಾಹಿನಿ ಚಿತ್ರ



## ದಿನಕ್ಕೊಂದು ಮುಕ್ತಕ-102



**ಸಾಮಾಜಿಕ ಕಳಕಳಿ**

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ

**ಗಿಡಗಳನು ನೆಡುತಲಿಯೆ ಪರಿಸರವ ಉಳಿಸುತಲಿ
ಮಡಿಯಲ್ಲಿ ನಡೆಯುತಿರೆ ಸೇವೆಯಲಿಯೆ
ಸಡಿಲಿಕೆಯು ಸರಿಯಿರದು ಮಾತೆಯನು ನೆನೆಯುತಿರಿ
ತಡೆಯುತಲಿ ನಾಶವನು ಲಕ್ಷ್ಮಿ ದೇವಿ...**

ಉದಯವಾಹಿನಿ ಚಿತ್ರ



**ಭಾವಾರ್ಥ:** ಪ್ರತಿ ಮನೆಯಲ್ಲಿ ಒಂದೊಂದು ಗಿಡವನ್ನು ನೆಟ್ಟರೆ ಪರಿಸರ ಚಂದವಾಗಿರುತ್ತದೆ. ಅಲ್ಲದೆ ಸುತ್ತಮುತ್ತಲ ಪರಿಸರ ಸ್ವಚ್ಛಗೊಂಡರೆ, ಅಕ್ಕ ಪಕ್ಕದ ಮನೆಗಳಲ್ಲಿ ಗಿಡಗಳನ್ನು ನೆಟ್ಟು ಬೆಳೆಸಿದರೆ ಪರಿಸರದ ಜೊತೆಗೆ ಆರೋಗ್ಯವು ಚೆನ್ನಾಗಿರುತ್ತದೆ. ಪ್ರತಿ ಮನೆಗಳಲ್ಲೂ ಗಿಡಗಳನ್ನು ನೆಡುವುದರಿಂದ ನಮ್ಮ ಆರೋಗ್ಯವು ಚೆನ್ನಾಗಿರುತ್ತದೆ. ಮಡಿ ಮೈಲಿಗೆ ಮನುಷ್ಯನಿಗೆ ಮಾತ್ರವಲ್ಲ, ಮನುಜರಿಗೂ ಇದ್ದಂತೆ ಪರಿಸರಕ್ಕೂ ಇರುತ್ತದೆ. ಯಾವುದೇ ರೀತಿಯ ಸಡಿಲಿಕೆಯನ್ನು ತೋರದಂತೆ ಪ್ರಕೃತಿ ಮಾತೆಯನ್ನು ನನೆಯುತ್ತ ಪರಿಸರದ ನಾಶವನ್ನು ತಡೆಯುತ್ತ ಗಿಡಗಳನ್ನು ನೆಡುವಂತಹ ಕೆಲಸವನ್ನು ಮಾಡಬೇಕು. ಪ್ರತಿಯೊಂದು ಜೀವಿಗೂ ಪರಿಸರ ಬೇಕೇ ಬೇಕು.

# ಉಸಿರಾಟದ ಸಮಸ್ಯೆಗಳನ್ನು ಆಯುರ್ವೇದದ ಮೂಲಕ ಯಾವ ರೀತಿ ಗುಣಪಡಿಸಬಹುದು

ಗಾಳಿಯ ಗುಣಮಟ್ಟ ಮಾಲಿನ್ಯ, ಕಳಪೆ ಜೀವನಶೈಲಿ ಮತ್ತು ಒತ್ತಡ ಸೇರಿದಂತೆ ಹಲವು ಅಂಶಗಳಿಂದಾಗಿ ತೀವ್ರ ದೀರ್ಘಕಾಲದ ಉಸಿರಾಟದ ಕಾಯಿಲೆಗಳಿಗೆ ಅಲರ್ಜಿಯಂತಹ ವಿವಿಧ ಉಸಿರಾಟದ ಕಾಯಿಲೆಗಳು ಹೆಚ್ಚುತ್ತಿವೆ. ಇಂತಹ ಸಮಸ್ಯೆಗಳು ದಿನನಿತ್ಯದ ಜೀವನ ಮತ್ತು ಜೀವನದ ಗುಣಮಟ್ಟದ ಮೇಲೆ ಪರಿಣಾಮ ಬೀರುವುದರಿಂದ ದೀರ್ಘಕಾಲೀನ ಕಾಯಿಲೆಗಳಾಗಿ ಪರಿಣಾಮ ಬೀರಬಹುದು. ಶ್ವಾಸಕೋಶದ ಸೋಂಕು ಉಸಿರಾಟದ ತೊಂದರೆಗೆ ಕಾರಣವಾಗಬಹುದು ಮತ್ತು ಆಸ್ತಮಾ ಅಥವಾ ಕೆಮ್ಮಿನಂತಹ ಸಮಸ್ಯೆಗಳಿಗೆ ಕಾರಣವಾಗಬಹುದು. ಆಯುರ್ವೇದದ ಸಹಾಯದಿಂದ ಉಸಿರಾಟದ ಸಮಸ್ಯೆಗಳನ್ನು ಯಾವ ರೀತಿ ಗುಣಪಡಿಸಬಹುದು ಎನ್ನುವುದನ್ನು ನಾವಿಲ್ಲಿ ತಿಳಿಯೋಣ.

**ಹವಾಮಾನ ಯಾವರೀತಿ ಪರಿಣಾಮ ಬೀರಿದೆ:** ಬದಲಾಗುತ್ತಿರುವ ಹವಾಮಾನ ಮಾದರಿಗಳು, ಏರಿಳಿತದ ತಾಪಮಾನ, ಹೆಚ್ಚುತ್ತಿರುವ ಮಾಲಿನ್ಯ ಮಟ್ಟಗಳು, ಪುನರಾವರ್ತಿತ ವೈರಲ್ ಏಕಾಏಕಿ, ಆಸ್ತಮಾ, ಸಿಒಪಿಡಿ, ನ್ಯುಮೋನಿಯಾ, ಇನ್ಫ್ಲುಯೆನ್ಸ, ಅಲರ್ಜಿಕ್ ರಿನಿಟಿಸ್, ವೈರಲ್ ನಂತರದ ಉಸಿರಾಟದ ದೌರ್ಬಲ್ಯದಂತಹ ಉಸಿರಾಟದ ಪರಿಸ್ಥಿತಿಗಳು ಹೆಚ್ಚುತ್ತಿವೆ. ಕಾಲೋಚಿತ ಬದಲಾವಣೆಗಳು ವಾಯುಮಾರ್ಗದ ಸೂಕ್ಷ್ಮತೆಯನ್ನು ಉಲ್ಬಣಗೊಳಿಸುತ್ತವೆ ಮತ್ತು ರೋಗನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತವೆ, ಇದರಿಂದಾಗಿ ವ್ಯಕ್ತಿಗಳು ಸೋಂಕುಗಳು ಮತ್ತು ದೀರ್ಘಕಾಲದ ಉಸಿರಾಟದ ಕಾಯಿಲೆಗಳ ಉಲ್ಬಣಗಳಿಗೆ ಹೆಚ್ಚು ಗುರಿಯಾಗುತ್ತಾರೆ ಎನ್ನುತ್ತಾರೆ ಅಪೋಲೋ ಆಯುರ್ವೇದದ ಪ್ರಾಥಮಿಕ ವೈದ್ಯ ಡಾ. ರಾಕೇಶ್ ನಾಯರ್.

**ಕಫ ಮತ್ತು ವಾತ ದೋಷಗಳ ಉಲ್ಬಣ:** ಆಯುರ್ವೇದ ದೃಷ್ಟಿಕೋನದಿಂದ, ಈ ಸವಾಲುಗಳು ಪ್ರಾಥಮಿಕವಾಗಿ ಕಫ, ವಾತ ದೋಷಗಳ ಉಲ್ಬಣಗಳಿಂದ ಉಂಟಾಗುತ್ತವೆ, ಇದು ಪ್ರಾಣವಾಹ ಸ್ರೋತಗಳು (ಉಸಿರಾಟದ ಮಾರ್ಗಗಳು) ಮತ್ತು ಒಟ್ಟಾರೆ ಶ್ವಾಸಕೋಶದ ಆರೋಗ್ಯದ ಮೇಲೆ ಗಾಢವಾಗಿ ಪ್ರಭಾವ ಬೀರುತ್ತದೆ. ಕಫ ದೋಷವು ಅದರ ಭಾರೀ, ಜಿಗುಟಾದ ಮತ್ತು ಶೀತ ಗುಣಗಳಿಂದ ನಿರೂಪಿಸಲ್ಪಟ್ಟಿದೆ, ಶೀತ, ಆರ್ದ್ರ ಋತುಗಳಲ್ಲಿ ಅಥವಾ ಮಾಲಿನ್ಯಕ್ಕೆ ಒಡ್ಡಿಕೊಳ್ಳುವ ಸಮಯದಲ್ಲಿ ಉಸಿರಾಟದ ಪ್ರದೇಶದಲ್ಲಿ ಸಂಗ್ರಹವಾಗುತ್ತದೆ, ಇದು ಲೋಳೆಯ ಶೇಖರಣೆ, ದಟ್ಟಣೆ, ಆಸ್ತಮಾ, ಸಿಒಪಿಡಿ. ದೀರ್ಘಕಾಲದ ಕೆಮ್ಮಿನಂತಹ ಪರಿಸ್ಥಿತಿಗಳಿಗೆ ಕಾರಣವಾಗುತ್ತದೆ. ಇದು ಉತ್ಪಾದಕ ಕೆಮ್ಮು, ಉಸಿರಾಟದ ತೊಂದರೆ.



ಎದೆಯಲ್ಲಿ ಭಾರದಂತಹ ಲಕ್ಷಣಗಳಾಗಿ ಕಾಣಿಸಿಕೊಳ್ಳಲು ಆರಂಭಿಸುತ್ತದೆ. ಶುಷ್ಕ, ಒರಟು ಮತ್ತು ಚಲನಶೀಲ ಸ್ವಭಾವದ ವಾತ ದೋಷವು ಅನಿಯಮಿತ ಹವಾಮಾನ, ಒತ್ತಡ, ವೈರಲ್ ನಂತರದ ದೌರ್ಬಲ್ಯದಿಂದ ಕಲುಷಿತಗೊಳ್ಳುತ್ತದೆ.

ಇದು ವಾಯು ಮಾರ್ಗದ ಶುಷ್ಕತೆ, ಸೆಳೆತ, ಅತಿ ಸೂಕ್ಷ್ಮತೆಯನ್ನು ಉಂಟು ಮಾಡುತ್ತದೆ - ಇದು ಅಲರ್ಜಿಕ್ ರಿನಿಟಿಸ್, ವೈರಲ್ ನಂತರದ ದೌರ್ಬಲ್ಯ, ಉಬ್ಬಸದಲ್ಲಿ ಸ್ಪಷ್ಟವಾಗಿಕಂಡುಬರುತ್ತದೆ.

**ಉಸಿರಾಟದ ಕಾಯಿಲೆಗಳಿಗೆ ನೈಸರ್ಗಿಕ ಚಿಕಿತ್ಸೆ:** ಆಯುರ್ವೇದವು ಉಸಿರಾಟದ ಕಾಯಿಲೆಗಳನ್ನು ಗುಣಪಡಿಸಲು ನೈಸರ್ಗಿಕ ಗಿಡಮೂಲಿಕೆಗಳನ್ನು ಬಳಸುತ್ತದೆ. ಈ ಗಿಡಮೂಲಿಕೆಗಳು ಉರಿಯೂತಗಳನ್ನು ಎದುರಿಸುವ, ಸೂಕ್ಷ್ಮಜೀವಿಗಳ ವಿರುದ್ಧ ಹೋರಾಡುವ ಮತ್ತು ಉಸಿರಾಟದ ಪ್ರದೇಶದಿಂದ ವಸ್ತುಗಳನ್ನು ಹೊರಹಾಕುವ ಕಾರ್ಯಗಳನ್ನು ಹೊಂದಿವೆ. ಹೀಗಾಗಿ ಗಾಳಿಯ ಮಾರ್ಗಗಳನ್ನು ತೆರವುಗೊಳಿಸುವಲ್ಲಿ ಗುಣಪಡಿಸುವ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ತುಳಸಿ :** ಪ್ರಸಿದ್ಧ ಗುಣಪಡಿಸುವ ಗಿಡಮೂಲಿಕೆಯಾದ ತುಳಸಿಯು ಉಸಿರಾಟದ ಉರಿಯೂತವನ್ನು ತಡೆಯುವ ಗಾಳಿಯ ಮಾರ್ಗಗಳನ್ನು ತೆರವುಗೊಳಿಸುವ ಪ್ರಬಲವಾದ ಬ್ಯಾಕ್ಟೀರಿಯಾ ವಿರೋಧಿ. ಉರಿಯೂತದ ಗುಣಗಳನ್ನು ಹೊಂದಿದೆ.


**ಜೇನುತುಪ್ಪವನ್ನು ಸೇವಿಸಿ:** ಜೇನುತುಪ್ಪವನ್ನು ಆಯುರ್ವೇದದಲ್ಲಿ ಔಷಧಿಯಾಗಿ ಬಳಸಲಾಗುತ್ತದೆ. ಕೆಮ್ಮು ಮತ್ತು ಇತರ ಸೋಂಕುಗಳನ್ನು ತಡೆಗಟ್ಟಲು ನೀವು ಜೇನುತುಪ್ಪವನ್ನು ಬಳಸಬಹುದು. ಇದು ಗಂಟಲು ನೋವು, ಶ್ವಾಸಕೋಶದ ಸಮಸ್ಯೆಗಳು, ಉಸಿರಾಟದ ತೊಂದರೆಗಳಂತಹ ಸಮಸ್ಯೆಗಳಿಂದ ಪರಿಹಾರವನ್ನು ನೀಡುತ್ತದೆ.

**ಚ್ಯವನಪ್ರಾಶ ಸೇವಿಸಿ:** ಚ್ಯವನಪ್ರಾಶವು ನಿಮ್ಮ ಶ್ವಾಸಕೋಶವನ್ನು ಆರೋಗ್ಯವಾಗಿಡಲು ಸಹಾಯ ಮಾಡುವ ಅನೇಕ ಪ್ರಮುಖ ರಾಸಾಯನಿಕಗಳನ್ನು ಒಳಗೊಂಡಿದೆ. ಇದು ನಿಮ್ಮ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಕೆಮ್ಮು ಮತ್ತು ಇತರ ಶ್ವಾಸಕೋಶದ ಸೋಂಕುಗಳಿಂದ ನಿಮ್ಮನ್ನು ರಕ್ಷಿಸುತ್ತದೆ.

# ಬೆಳಗಿನ ಜಾವ 3 ಗಂಟೆಗೆ ಎಚ್ಚರವಾಗುತ್ತಾ?

ಮಧ್ಯರಾತ್ರಿಯಲ್ಲಿ ಎಚ್ಚರಗೊಳ್ಳುವುದು ಅಸಾಮಾನ್ಯವೇನಲ್ಲ. ಹೆಚ್ಚಿನ ಜನರು ರಾತ್ರಿಯಲ್ಲಿ ಹಲವಾರು ಬಾರಿ ಎಚ್ಚರಗೊಳ್ಳುತ್ತಾರೆ, ಏಕೆಂದರೆ ಅವರು ಬೇಗನೆ ನಿದ್ರಿಸುತ್ತಾರೆ. ಕೆಲವೊಮ್ಮೆ ನಿದ್ದೆಯ ನಡುವೆ ಸೆಕೆಂಡುಗಳ ಕಾಲ ಎಚ್ಚರಿಕೆಯಾಗುತ್ತದೆ. ನಂತರ ಮತ್ತೆ ನಿದ್ದೆಗೆ ಜಾರುತ್ತಾರೆ.

ಆದರೆ ಇನ್ನೂ ಕೆಲವರು ನಿದ್ದೆಯ ಮಧ್ಯೆ ಪದೇ ಪದೇ ಎಚ್ಚರಗೊಳ್ಳುತ್ತಾರೆ. ಮತ್ತೆ ನಿದ್ದೆಗೆ ಜಾರುವುದು ಕಷ್ಟಕರವಾಗಿರುತ್ತದೆ. ಅವರು ರಾತ್ರಿಯಿಡಿ ಹಾಸಿಗೆಯ ಮೇಲೆ ಮಗ್ಗಲು ಬದಲಿಸುತ್ತಾ ಕಾಲಕಳೆಯಬೇಕಾಗುತ್ತದೆ. ಆದರೆ ನಿಮಗೆ ಗೊತ್ತಾ? ಬೆಳಗಿನ ಜಾವ ಮೂರು ಗಂಟೆಗೆಲ್ಲಾ ಎಚ್ಚರಿಕೆಯಾಗುವುದು ಸಾಮಾನ್ಯವಲ್ಲ. ಇದರ ಹಿಂದೆ ನಾನಾ ಕಾರಣಗಳಿವೆ.



**ನಿದ್ರೆ ಏಕೆ ಅತ್ಯಗತ್ಯ:** ಇದು ಅಂಗಾಂಶಗಳನ್ನು ಸರಿಪಡಿಸುತ್ತದೆ, ಹಾರ್ಮೋನುಗಳನ್ನು ಸಮತೋಲನಗೊಳಿಸುತ್ತದೆ, ರೋಗನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ, ಮೆದುಳಿನ ತ್ಯಾಜ್ಯವನ್ನು ತೆರವುಗೊಳಿಸುತ್ತದೆ, ಮನಸ್ಥಿತಿ, ಗಮನ ಮತ್ತು ಚಯಾಪಚಯ ಕ್ರಿಯೆಯನ್ನು ಸ್ಥಿರಗೊಳಿಸುತ್ತದೆ. ದೀರ್ಘಕಾಲದ ಕಳಪೆ ನಿದ್ರೆ, ಮಧುಮೇಹ, ಅಧಿಕ ರಕ್ತದೊತ್ತಡ, ಹೃದ್ರೋಗ, ಖಿನ್ನತೆ ಮತ್ತು ತೂಕ ಹೆಚ್ಚಾಗುವ ಅಪಾಯಗಳನ್ನು ಹೆಚ್ಚಿಸುತ್ತದೆ ಎನ್ನುತ್ತಾರೆ ಫೋರ್ಟಿಸ್ ಆಸ್ಪತ್ರೆಯ ಡಾ. ಶಾಲಿನಿ ಜೋಶಿ.

### ಬೆಳಗಿನ ಜಾವ 2-4 ಗಂಟೆಗೆ ಆಗಾಗ್ಗೆ ಎಚ್ಚರಗೊಳ್ಳಲು ಕಾರಣಗಳು

- **ನಿದ್ರೆಯಲ್ಲಿ ಉಸಿರುಕಟ್ಟುವಿಕೆ:** ಗೊರಕೆ, ಉಸಿರುಗಟ್ಟುವಿಕೆ, ಬೆಳಿಗ್ಗೆ ತಲೆನೋವು.
- **ತಡವಾಗಿ/ಭಾರೀ ಭೋಜನ:** ಹಿಮ್ಮುಖ ಹರಿವು ಮತ್ತು ಸಕ್ಕರೆಯ ಏರಿಳಿತಗಳು.
- **ಒತ್ತಡ ಅಥವಾ ಆತಂಕ:** ಮುಂಜಾನೆ ಕಾರ್ಟಿಸೋಲ್ ಉಲ್ಬಣ.
- **ಖಿನ್ನತೆ ಅಥವಾ ಒಂಟಿತನ:** ಕ್ಲಾಸಿಕ್ ಬೇಗನೆ ಎಚ್ಚರಗೊಳ್ಳುವುದು.
- ಮದ್ಯ, ಕೆಫೀನ್, ಔಷಧಿಗಳು, ನೋವು, ಋತುಬಂಧ, ಮೂತ್ರದ ಲಕ್ಷಣಗಳು.

**ನಿದ್ರೆಯ ಚಕ್ರಗಳು ಮತ್ತು ರಾತ್ರಿ ಎಚ್ಚರಗೊಳ್ಳುವುದು**

ರಾತ್ರಿಯ ನಿದ್ರೆಯು ಬಹು ನಿದ್ರೆಯ ಚಕ್ರಗಳನ್ನು ಒಳಗೊಂಡಿರುತ್ತದೆ. ಈ ಚಕ್ರಗಳಲ್ಲಿ ರಾತ್ರಿ ಹಲವಾರು ಬಾರಿ ಎಚ್ಚರಗೊಳ್ಳುವುದು ಅಸಾಮಾನ್ಯವೇನಲ್ಲ, ಆದರೂ ಹೆಚ್ಚಿನ ಸಮಯ ನೀವು ನಂತರ ಮತ್ತೆ ನಿದ್ರೆಗೆ ಹೋಗುತ್ತೀರಿ. ವಯಸ್ಕರಿಗೆ ಸಾಮಾನ್ಯವಾಗಿ ಅಗತ್ಯವಿರುವ 7 ರಿಂದ 9 ಗಂಟೆಗಳ ನಿದ್ರೆಯ ಉದ್ದಕ್ಕೂ ಈ ಚಕ್ರಗಳು ಸಂಭವಿಸುತ್ತವೆ.

**ನಾನ್-REM ಮತ್ತು REM ನಿದ್ರೆ:** ನಿದ್ರೆ ಒಂದು ಸ್ವಿಚ್ ಅಲ್ಲ, ನೀವು ಪರದೆಯನ್ನು ಆಫ್ ಮಾಡಿ ಮುಂದಿನ ನಿಮಿಷ ನೀವು ನಿದ್ರಿಸಬಹುದು, ನಿಮ್ಮ ಮೆದುಳು ವಿಶ್ರಾಂತಿ ಪಡೆಯಬೇಕು. ಪ್ರತಿ ರಾತ್ರಿ ನಿಮ್ಮ ಮೆದುಳು 90 ನಿಮಿಷಗಳ ಲೂಪ್‌ಗಳಲ್ಲಿ ನಾನ್-REM, REM ನಿದ್ರೆಯ ಮೂಲಕ ಚಲಿಸುತ್ತದೆ. ನಾನ್-REM ಬೆಳಕಿನ ಹಂತಗಳನ್ನು (N1, N2) ಒಳಗೊಂಡಿದೆ, ಅಲ್ಲಿ ನೀವು ಸುಲಭವಾಗಿ ಉದ್ರೇಕಗೊಳ್ಳುತ್ತೀರಿ ಮತ್ತು ಆಳವಾದ ನಿಧಾನ-ತರಂಗ ನಿದ್ರೆ (N3), ಇದು ದೇಹವನ್ನು ಪುನಃ ಸ್ಥಾಪಿಸುತ್ತದೆ, ರೋಗನಿರೋಧಕ ಶಕ್ತಿಯನ್ನು ಬೆಂಬಲಿಸುತ್ತದೆ ಮತ್ತು ಬೆಳವಣಿಗೆಯ ಹಾರ್ಮೋನ್ ಅನ್ನು ಬಿಡುಗಡೆ ಮಾಡುತ್ತದೆ. ನಂತರ, REM ನಿದ್ರೆ ಹೆಚ್ಚಾಗುತ್ತದೆ, ಇದು ಕನಸು ಕಾಣುವ, ಮೆದುಳು ಮೆಮೊರಿ, ಕಲಿಕೆ, ಭಾವನೆಗಳನ್ನು ಪ್ರಕ್ರಿಯೆಗೊಳಿಸುವ ಸಮಯ. REM ಹಗುರವಾಗಿರುವುದರಿಂದ, ಮುಂಜಾನೆಯ ಸಂಕ್ಷಿಪ್ತ ಜಾಗೃತಿಗಳು ಸಾಮಾನ್ಯ, ಹೆಚ್ಚಿನ ಜನರು ನಿದ್ರೆಗೆ ಮರಳುತ್ತಾರೆ.

**ಉತ್ತಮ ನಿದ್ರೆಗೆ ಸಲಹೆಗಳು:** ಪ್ರತಿದಿನ ನಿಗದಿತ ನಿದ್ರೆ ಮಾಡುವ ಹಾಗೂ ಏಳುವ ಸಮಯವನ್ನು ಪಾಲಿಸಿ. ಮಲಗುವ 2-3 ಗಂಟೆಗಳ ಮೊದಲು ಭೋಜನವನ್ನು ಮುಗಿಸಿ, ತಡವಾಗಿ ಕೆಫೀನ್/ಮದ್ಯವನ್ನು ತಪ್ಪಿಸಿ. ಮಂದ ಬೆಳಕುಗಳು, ನಿದ್ರೆಗೆ 30 ರಿಂದ 60 ನಿಮಿಷಗಳ ಮೊದಲು ಮೊಬೈಲ್, ಟಿವಿಯನ್ನು ಆಫ್ ಮಾಡಿ. ನಿಯಮಿತ ವ್ಯಾಯಾಮ ಮಾಡಿ.

**ತರಕಾರಿ ತಿನ್ನುತ್ತಿರುವ ಬೆಂಗಳೂರಿಗರೇ ಎಚ್ಚರ. ಮಾರುಕಟ್ಟೆಗಳ ತರಕಾರಿಯನ್ನು ಪರಿಶೀಲನೆ ನಡೆಸಿದಾಗ ಭಾರೀ ಪ್ರಯಾಣದ ವಿಷಕಾರಿ ಅಂಶಗಳು ಪತ್ತೆಯಾಗಿವೆ. ಈ ಬಗ್ಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮಿತಿಯು ಪರೀಕ್ಷೆ ನಡೆಸಿ ದೃಢಪಡಿಸಿದೆ. ಪರೀಕ್ಷಿಸಿದ 72 ಮಾದರಿಗಳಲ್ಲಿ 19 ರಲ್ಲಿ ವಿಷಕಾರಿ ಅಂಶ ಕಂಡುಬಂದಿದೆ. ಬದನೆಕಾಯಿ, ಚಪ್ಪರದ ಅವರೆ, ತೊಂಡೆಕಾಯಿ, ಸೊಪ್ಪಿನಲ್ಲಿ ಸೀಸ ಅಂಶವಿದೆ ಎಂದು ತಿಳಿದುಬಂದಿದೆ.**

# ತರಕಾರಿಯಲ್ಲಿ ವಿಷಕಾರಿ ಅಂಶ!

ಮಾರುಕಟ್ಟೆಯಲ್ಲಿ ಸಿಗುವ ತರಕಾರಿಗಳಲ್ಲಿ ವಿಷಕಾರಿ ಸೀಸದ ಅಂಶ ಪತ್ತೆಯಾಗಿದೆ. ಅದರಲ್ಲೂ, ಬದನೆಕಾಯಿ, ತೊಂಡೆಕಾಯಿ, ಚಪ್ಪರದ ಅವರೆ, ಸೊಪ್ಪಿನಲ್ಲಿ ಸೀಸದ ಪ್ರಯಾಣ ಹೆಚ್ಚಿರುವುದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ನಡೆಸಿದ ಪರೀಕ್ಷೆಯಲ್ಲಿ ದೃಢಪಟ್ಟಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (ಇಎಂಪಿಆರ್‌ಐ) ತರಕಾರಿಗಳಲ್ಲಿ ಭಾರೀ ಲೋಹಗಳ ಇರುವಿಕೆಯ ಬಗ್ಗೆ ಎರಡು ವರ್ಷಗಳ ಹಿಂದೆ ಎಚ್ಚರಿಸಿತ್ತು. ಸದ್ಯ ಎಚ್ಚೆತ್ತುಕೊಂಡ ಕೇಂದ್ರ ಮತ್ತು ರಾಜ್ಯ ಪ್ರಾಧಿಕಾರಗಳನ್ನೊಳಗೊಂಡ ಸಮಿತಿಯು ನಡೆಸಿದ ಮರುಪರಿಶೀಲನೆಯಲ್ಲಿ ತರಕಾರಿಗಳಲ್ಲಿ ಅಪಾಯಕಾರಿ 'ಸೀಸ' (ಲಿಡ್) ಹಾಗೂ ನಿಷೇಧಿತ ಕೀಟನಾಶಕಗಳಿರುವುದು ಕಂಡುಬಂದಿದೆ.

2023 ರಲ್ಲಿ ಮಾಧ್ಯಮಗಳಲ್ಲಿ ಪ್ರಕಟಿಸಿದ ವರದಿಯನ್ನು ಆಧರಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿತ್ತು. ವಾಸ್ತವ ಸ್ಥಿತಿಯನ್ನು ಪರಿಶೀಲಿಸಲು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಗೆ (ಸಿಪಿಸಿಬಿ) ಆದೇಶ ನೀಡಿತ್ತು ಇದರನ್ವಯ ಐವರು ಸದಸ್ಯರ ಸಮಿತಿಯು ಎಫ್‌ಎಸ್‌ಎಸ್‌ಎಐ ಮಾನ್ಯತೆ ಪಡೆದ ಪ್ರಯೋಗಾಲಯಗಳ ಮೂಲಕ ಪರೀಕ್ಷೆ ನಡೆಸಿದೆ ಎಂದು ವರದಿ ಮಾಡಿದೆ.

**ಎಲ್ಲೆಲ್ಲಿ ಮಾದರಿ ಸಂಗ್ರಹ?:** ಸಮಿತಿಯು ನೆಲಮಂಗಲ, ರಾಜಾಜಿನಗರ, ಕೋಲಾರ ಮತ್ತು ಚಿಕ್ಕಬಳ್ಳಾಪುರದ ಮಾರುಕಟ್ಟೆಗಳು, ಕೃಷಿ ಜಮೀನುಗಳಿಂದ ಒಟ್ಟು 72 ತರಕಾರಿ ಮಾದರಿಗಳನ್ನು ಸಂಗ್ರಹಿಸಿತ್ತು. ಪರೀಕ್ಷೆಗೆ ಒಳಪಡಿಸಿದ 72 ಮಾದರಿಗಳ ಪೈಕಿ 19ರಲ್ಲಿ ನಿಗದಿಗಿಂತ ಹೆಚ್ಚಿನ ಪ್ರಮಾಣದ ಸೀಸ ಪತ್ತೆಯಾಗಿದೆ.

**ಮಣ್ಣೂ ಕಲುಷಿತ:** ತರಕಾರಿ ಮಾತ್ರವಲ್ಲದೆ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ನೆಲಮಂಗಲದ 13 ಕಡೆಗಳಿಂದ ಸಂಗ್ರಹಿಸಿದ 26 ಮಣ್ಣಿನ ಮಾದರಿಗಳ ಪೈಕಿ 23 ಮಾದರಿಗಳು ಕಲುಷಿತಗೊಂಡಿರುವುದು ಪರೀಕ್ಷೆಯಲ್ಲಿ ಕಂಡುಬಂದಿದೆ.

**ನಿಷೇಧಿತ ಕೀಟನಾಶಕಗಳ ಪತ್ತೆ:** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮಾವಳಿಗಳ (ಎಫ್‌ಎಸ್‌ಎಸ್‌ಆರ್) ಮಿತಿಯನ್ನು ಮೀರಿ 12 ಬಗೆಯ ಕೀಟನಾಶಕಗಳ ಶೇಷ ತರಕಾರಿಗಳಲ್ಲಿ ಪತ್ತೆಯಾಗಿದೆ. ದಪ್ಪ ಮೆಣಸಿನಕಾಯಿ, ಶುಂಠಿ, ಸೌತೆಕಾಯಿ, ಮೆಣಸಿನಕಾಯಿ ಬಜ್ಜಿಯಲ್ಲಿ ಅತಿ ಹೆಚ್ಚು ಕೀಟನಾಶಕ ಕಂಡುಬಂದಿದೆ. ಭಾರತದಲ್ಲಿ 2023 ರಲ್ಲೇ ನಿಷೇಧಿಸಲಾದ ಅತ್ಯಂತ ವಿಷಕಾರಿ ಮೊನೊಕ್ರೊಟೊಫಾಸ್ ಕೀಟನಾಶಕವು ಮೆಣಸಿನಕಾಯಿ ಬಜ್ಜಿಯಲ್ಲಿ ನಿಗದಿಗಿಂತ ಎರಡು ಪಟ್ಟು ಹೆಚ್ಚಿದೆ. ಯುರೋಪಿಯನ್ ಯೂನಿಯನ್‌ನಲ್ಲಿ ವಿಷಕಾರಿ ಎಂದು ನಿಷೇಧಿಸಲಾಗಿರುವ ಅಸಿಫೇಟ್, ಇಥಿಯಾನ್, ಫಿಪ್ರೊನಿಲ್, ಪ್ರೊಫೆನೊಫಾಸ್‌ನಂತಹ ರಾಸಾಯನಿಕಗಳು ಪತ್ತೆಯಾಗಿವೆ.



### ಯಾವ ತರಕಾರಿಯಲ್ಲಿ ಎಷ್ಟು ವಿಷ ಪತ್ತೆ?:

- ಬದನೆಕಾಯಿಯು ಸಾವಯವ ಎಂದು ಮಾರಾಟವಾಗುತ್ತಿದ್ದ ಬದನೆಕಾಯಿಯಲ್ಲಿ 1.953 mg/kg ನಷ್ಟು ಸೀಸ ಪತ್ತೆಯಾಗಿದ್ದು, ಇದು ನಿಗದಿಗಿಂತ ಬರೋಬ್ಬರಿ 20 ಪಟ್ಟು ಹೆಚ್ಚಿದೆ.
- ತೊಂಡೆಕಾಯಿಯಲ್ಲಿ ಮಿತಿಗಿಂತ ಸುಮಾರು 18 ಪಟ್ಟು ಹೆಚ್ಚು ಸೀಸ ಕಂಡುಬಂದಿದೆ.
- ಚಪ್ಪರದ ಅವರೆಯಲ್ಲಿ ನಿಗದಿಗಿಂತ 9 ಪಟ್ಟು ಹೆಚ್ಚು.
- ಸೊಪ್ಪು ಮತ್ತು ಎಲೆಕೋಸಿನಲ್ಲಿ ನಿಗದಿಗಿಂತ 5 ಪಟ್ಟು ಹೆಚ್ಚು ಸೀಸ ಪತ್ತೆಯಾಗಿದೆ.
- ಸೌತೆಕಾಯಿ, ಹೀರೆಕಾಯಿ, ದಪ್ಪ ಮೆಣಸಿನಕಾಯಿ ಬೀಟ್‌ರೂಟ್, ಹಾಗಲಕಾಯಿ, ನವಿಲುಕೋಸು, ಮೆಣಸಿನಕಾಯಿ ಬಜ್ಜಿ ಮಾದರಿಗಳಲ್ಲೂ ಸೀಸದ ಅಂಶ ಮಿತಿ ಮೀರಿದೆ.

ಇದು ಕೇವಲ ಆರಂಭಿಕ ಹಂತದ ವರದಿಯಾಗಿದ್ದು, ಕೃಷಿ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾಲಯಗಳ ನೇತೃತ್ವದಲ್ಲಿ ಸ್ಥಳೀಯ ಮಟ್ಟದಲ್ಲಿ ಇನ್ನಷ್ಟು ಸಮಗ್ರ ಅಧ್ಯಯನ ನಡೆಯಬೇಕಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಜೊತೆಗೆ ರೈತರಲ್ಲಿ ಕೀಟನಾಶಕಗಳ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲು ಶಿಫಾರಸು ಕೂಡ ಮಾಡಿದೆ.

### ಈ ಭಾಗದ ಜನರಿಗೆ ಹಾಗೂ ಹೊರಗಿನ ವಾಹನಗಳ ಸುಗಮ ಸಂಚಾರಕ್ಕೆ ಬಹಳಷ್ಟು ಸಹಕಾರಿಯಾಗಲಿದೆ

# ವಾಹನ ದಟ್ಟನೆ ನಿಯಂತ್ರಣಕ್ಕೆ ರಿಂಗ್ ರೋಡ್ ಅಗತ್ಯ

• ಉದಯವಾಹಿನಿ, ಹುಬ್ಬಳ್ಳಿ

ಹಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿರುವ ಹುಬ್ಬಳ್ಳಿ-ಧಾರವಾಡ (ಅರ್ಧ ಭಾಗದ) ರಿಂಗ್ ರೋಡ್ ಯೋಜನೆ ಈ ಬಾರಿ ಬಜೆಟ್‌ನಲ್ಲಾದರೂ ಅನುಮೋದನೆಗೊಂಡು ಕಾರ್ಯರೂಪಕ್ಕೆ ಬರಬೇಕಿದೆ. ಇಂತಹದೊಂದು ನಿರೀಕ್ಷೆ ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಜನತೆಯಲ್ಲಿದೆ.

ಅತೀ ಅಗತ್ಯ ಹಾಗೂ ಬಹುನಿರೀಕ್ಷಿತ ರಿಂಗ್ ರೋಡ್ ನಿರ್ಮಾಣದಿಂದಾಗಿ ಅವಳಿ ನಗರದಲ್ಲಿ ಶೇ.80ರಷ್ಟು ಟ್ರಾಫಿಕ್ ಸಮಸ್ಯೆಗೆ ಪರಿಹಾರದ ಜತೆಗೆ ಭಾರಿ ತೂಕದ ವಾಹನಗಳ ಇಂಧನ ಉಳಿತಾಯಕ್ಕೂ ಸಹಕಾರಿಯಾಗಲಿದೆ. ಆದಾಗ್ಯೂ ಯೋಜನೆ ಅನುಷ್ಠಾನ ಏಕೆ ಸಾಕಾರಗೊಳ್ಳುತ್ತಿಲ್ಲ ಎನ್ನುವುದೇ ಯಕ್ಷಪ್ರಶ್ನೆಯಾಗಿದೆ. ಈಗಾಗಲೇ ಹುಬ್ಬಳ್ಳಿ ಹೊರವಲಯದ ಕುಸುಗಲ್-ಬೆಂಗಳೂರು, ಗದಗ-ವಿಜಯಪುರ ರಸ್ತೆ ಸಂಪರ್ಕಿಸುವ ಅರ್ಧ ವರ್ತುಲ ರಸ್ತೆ ನಿರ್ಮಾಣಗೊಂಡು ವಾಹನ ಸಂಚಾರ ನಡೆಸುತ್ತಿವೆ. ಆದರೆ ಹುಬ್ಬಳ್ಳಿ ಕುಸುಗಲ್ ರಸ್ತೆಯಿಂದ (ಎನ್‌ಎಚ್-218) ಧಾರವಾಡ ಬೇಲೂರು ಹೈಕೋರ್ಟ್‌ವರೆಗೆ (ಎನ್‌ಎಚ್-4) 60 ಮೀಟರ್ ಅಗಲ ಹಾಗೂ ಅಂದಾಜು 33 ಕಿಮೀ ವ್ಯಾಪ್ತಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಿಂಗ್ ರೋಡ್ ನಿರ್ಮಾಣ ಕಾರ್ಯ ನೆನಗುದಿಗೆ ಬಿದ್ದಿದೆ. ಇದರಿಂದ ಈ ಭಾಗದ ಜನರಿಗೆ ಹಾಗೂ ಹೊರಗಿನ ವಾಹನಗಳ ಸುಗಮ ಸಂಚಾರಕ್ಕೆ ಬಹಳಷ್ಟು ಸಹಕಾರಿಯಾಗಲಿದೆ.

ರಿಂಗ್ ರೋಡ್ ನಿರ್ಮಾಣದಿಂದ ಯಾವುದೇ ಟ್ರಾಫಿಕ್ ಕಿರಿಕಿರಿ ಇಲ್ಲದೇ, ಸುಗಮವಾಗಿ ಸಂಚರಿಸಲು ಸಾಕಷ್ಟು ಅನುಕೂಲವಾಗಲಿದೆ. ಕುಸುಗಲ್ ಮಾರ್ಗವಾಗಿ ಆಗಮಿಸುವವರು ಧಾರವಾಡ ಹಾಗೂ ಬೆಳಗಾವಿ ಕಡೆಗೆ ಹೋಗಲು ನೇರವಾಗಿ ರಿಂಗ್ ರೋಡ್ ಮೂಲಕ ತೆರಳಲು ಸಹಕಾರಿಯಾಗುತ್ತದೆ. ಅಲ್ಲದೇ ಹು-ಧಾ ಮಾರ್ಗವಾಗಿ ವಿವಿಧ ರಾಜ್ಯ ಮತ್ತು ಜಿಲ್ಲೆಗೆ ಹೋಗುವ ವಾಹನಗಳಿಗೂ ಟ್ರಾಫಿಕ್ ಸಮಸ್ಯೆ ನಿವಾರಣೆಯಾಗಲಿದೆ. ಈಗಾಗಲೇ ಸಲ್ಲಿಕೆಯಾಗಿರುವ ಡಿಪಿಆರ್‌ಗೆ ರಾಜ್ಯ ಸರಕಾರ ಒಪ್ಪಿಗೆ ನೀಡಿ ಯೋಜನೆ ಅನುಷ್ಠಾನಗೊಳಿಸಬೇಕು ಎಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.


ಉದಯವಾಹಿನಿ ಚಿತ್ರ

**ಯೋಜನಾ ವ್ಯಾಪ್ತಿಗೆ 18 ಹಳ್ಳಿಗಳು**

**ರಿಂಗ್ ರೋಡ್ ನಿರ್ಮಾಣದ ಯೋಜನೆಗೆ ಒಟ್ಟು 489 ಎಕರೆ ಜಾಗದ ಅವಶ್ಯಕತೆ ಇದ್ದು, ಅಂದಾಜು 876-900 ಕೋಟಿ ವೆಚ್ಚವಾಗಲಿದೆ ಎಂದು ಈ ಹಿಂದೆ ಹುಡಾ ಸರಕಾರಕ್ಕೆ ಸಲ್ಲಿಸಿದ ಡಿಪಿಆರ್ ವರದಿಯಲ್ಲಿ ಉಲ್ಲೇಖಿಸಿದೆ. ಈ ಯೋಜನೆಯೂ ಹುಬ್ಬಳ್ಳಿ ತಾಲ್ಲೂಕಿನ ಕುಸುಗಲ್, ಗೋಪನಕೊಪ್ಪ, ಬ್ಯಾಹಟ್ಟಿ, ಸುಳ್ಳ, ಉಣಕಲ್, ಅಮರಗೋಳ ಹಾಗೂ ಧಾರವಾಡ ತಾಲ್ಲೂಕಿನ ಶಿವಳ್ಳಿ, ಮಾರಡಗಿ, ಸೋಮಾಪುರ, ದಿಂಡಿಕೊಪ್ಪ, ದಾಸನಕೊಪ್ಪ, ಕವಲಗೇರಿ, ಅಮ್ಮಿನಭಾವಿ, ನರೇಂದ್ರ, ಮರೇವಾಡ, ಖಾನಾಪುರ, ಎಂ.ನರೇಂದ್ರ, ಕುಂಬಾಪುರ ಮತ್ತು ಮಮ್ಮಿಗಟ್ಟಿ ಗ್ರಾಮಗಳು ಒಳಪಡಲಿವೆ ಎಂದು ಹುಡಾ ವರದಿ ಸಲ್ಲಿಸಿತ್ತು.**

**ಸುಲಭ ಸಂಪರ್ಕಕ್ಕೆ ರಿಂಗ್ ರೋಡ್ ಅಗತ್ಯ:** ಹು-ಧಾ ಅವಳಿ ನಗರಕ್ಕೆ ಹೊಂದಿಕೊಂಡಂತೆ ಹೈಕೋರ್ಟ್ ಸಂಚಾರಿ ಪೀಠ, ವಿಮಾನ ನಿಲ್ದಾಣ, ಕೃಷಿ ವಿವಿ, ಕಾನೂನು ವಿವಿ, ಐಐಟಿ, ಐಐಐಟಿ, ಬೇಲೂರು ಕೈಗಾರಿಕಾ ಪ್ರದೇಶ ಹಾಗೂ ಬೈಪಾಸ್ ರಸ್ತೆ ಸೇರಿದಂತೆ ವಿವಿದೆಡೆ ರಿಂಗ್ ರೋಡ್ ನಿರ್ಮಾಣದಿಂದ ಸುಲಭವಾಗಿ ಸಂಪರ್ಕ ಸಾಧಿಸಬಹುದಾಗಿದೆ. ಅಷ್ಟೇ ಅಲ್ಲದೇ ನಿತ್ಯ ಸಂಭವಿಸುತ್ತಿರುವ ವಾಹನಗಳ ಅಪಘಾತ ಪ್ರಮಾಣವನ್ನು ಗಣನೀಯವಾಗಿ ತಡೆಯಬಹುದಾಗಿದೆ. ಸಮಯ ಮತ್ತು ಇಂಧನ ಉಳಿತಾಯಕ್ಕೂ ಈ ಯೋಜನೆ ಬಹಳಷ್ಟು ಅನುಕೂಲವಾಗಲಿದೆ.

**ಡಿಪಿಆರ್ ಸಲ್ಲಿಕೆ:** ರಿಂಗ್ ರೋಡ್ ನಿರ್ಮಾಣಕ್ಕೆ ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ (ಎನ್‌ಎಚ್‌ಎಐ) ಈಗಾಗಲೇ ಮೂರು ಅಲೈನ್‌ಮೆಂಟ್ ಡಿಪಿಆರ್ ಸಲ್ಲಿಸಿದ್ದರೆ, ಹುಡಾ ಕೂಡಾ ಒಂದು ಡಿಪಿಆರ್ ಅನ್ನು ರಾಜ್ಯ ಸರಕಾರಕ್ಕೆ ಸಲ್ಲಿಸಿವೆ. ಅವುಗಳಲ್ಲಿಯಾವುದು ಸೂಕ್ತ ಎಂಬುದನ್ನು ಆಯ್ಕೆ ಮಾಡಿಕೊಂಡು ರಾಜ್ಯ ಸರಕಾರವು ಕೇಂದ್ರ ಸರಕಾರದ ಅನುಮೋದನೆಗೆ ಕಳುಹಿಸಿಕೊಡಬೇಕಿದೆ. ದಿನದಿಂದ ದಿನಕ್ಕೆ ಹು-ಧಾ ಅವಳಿ ನಗರದಲ್ಲಿ ವಾಹನ ದಟ್ಟಣೆ ಹೆಚ್ಚುತ್ತಲೇ ಸಾಗುತ್ತಿದೆ.

ಇದರಿಂದ ಕೆಲವೊಮ್ಮೆ ಟ್ರಾಫಿಕ್ ಜಾಮ್ ಉಂಟಾಗಿ, ಸುಗಮ ಸಂಚಾರಕ್ಕೂ ಅಡೆತಡೆಯಾಗುತ್ತಿವೆ. ಈ ಯೋಜನೆ ಅನುಷ್ಠಾನಕ್ಕೆ ಬಂದಲ್ಲಿ ಟ್ರಾಫಿಕ್ ಸಮಸ್ಯೆ ಬಹಳಷ್ಟು ಇಳಿಕೆಯಾಗಲಿದೆ ಎಂದಿದ್ದಾರೆ ರವೀಶ ಸಿ.ಆರ್., ಡಿಸಿಪಿ, ಕ್ರೈಂ ಆ್ಯಂಡ್ ಟ್ರಾಫಿಕ್.

ಹು-ಧಾ ರಿಂಗ್ ರೋಡ್ ನಿರ್ಮಾಣಕ್ಕೆ ಪೂರಕವಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಬೆಂಗಳೂರಿನ ಭೂ ಸಾರಿಗೆ ಮಂತ್ರಾಲಯ ಪ್ರಾದೇಶಿಕ ಕಚೇರಿಗೆ (ಆರ್‌ಒ ಕಚೇರಿ) ಒಟ್ಟು ಮೂರು ಪ್ರತ್ಯೇಕ ಅಲೈನ್ಮೆಂಟ್‌ಗಳನ್ನು ಕಳಿಸಲಾಗಿದೆ. ಇಲ್ಲಿಯವರೆಗೆ ನಮಗೆ ಮೇಲಾಧಿಕಾರಿಗಳಿಂದ ಯಾವುದೇ ಆದೇಶ ಬಂದಿಲ್ಲ. ಏನಾದರೂ ಆದೇಶ ಬಂದಲ್ಲಿ, ಅನುಷ್ಠಾನಕ್ಕೆ ತರಲಾಗುವುದು ಎಂದಿದ್ದಾರೆ ಸತೀಶ ನಾಗನೂರ, ಎಇಇ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

- **ಅವಳಿ ನಗರದಲ್ಲಿ ಶೇ.80ರಷ್ಟು ಟ್ರಾಫಿಕ್ ಸಮಸ್ಯೆಗೆ ಪರಿಹಾರದ ಜತೆಗೆ ಭಾರಿ ತೂಕದ ವಾಹನಗಳ ಇಂಧನ ಉಳಿತಾಯಕ್ಕೂ ಸಹಕಾರಿಯಾಗಲಿದೆ**
- **ಹುಬ್ಬಳ್ಳಿ ಹೊರವಲಯದ ಕುಸುಗಲ್-ಬೆಂಗಳೂರು, ಗದಗ-ವಿಜಯಪುರ ರಸ್ತೆ ಸಂಪರ್ಕಿಸುವ ಅರ್ಧ ವರ್ತುಲ ರಸ್ತೆ ನಿರ್ಮಾಣಗೊಂಡು ವಾಹನ ಸಂಚಾರ ನಡೆಸುತ್ತಿವೆ.**
- **ಈಗಾಗಲೇ ಸಲ್ಲಿಕೆಯಾಗಿರುವ ಡಿಪಿಆರ್‌ಗೆ ರಾಜ್ಯ ಸರಕಾರ ಒಪ್ಪಿಗೆ ನೀಡಿ ಯೋಜನೆ ಅನುಷ್ಠಾನಗೊಳಿಸಬೇಕು ಎಂಬುದು ಸಾರ್ವಜನಿಕರ ಒತ್ತಾಸೆಯಾಗಿದೆ.**

**ಅತ್ಯಧಿಕ ವಾಹನ ಸಂಚಾರ**

**ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ಮಾಹಿತಿ ಪ್ರಕಾರ ಹು-ಧಾ ಅವಳಿ ನಗರದ ಮಧ್ಯೆ ನಿತ್ಯ 2.5 ಲಕ್ಷಕ್ಕೂ ಅಧಿಕ ವಾಹನಗಳು ಸಂಚಾರ ನಡೆಸುತ್ತಿವೆ. ವಿವಿಧ ರಾಜ್ಯ ಹಾಗೂ ಜಿಲ್ಲೆಗಳಿಂದ (ಸರಕು, ಖಾಸಗಿ, ಸರಕಾರಿ ಸೇರಿ) ಅಂದಾಜು 3 ಸಾವಿರಕ್ಕೂ ಹೆಚ್ಚು ವಾಹನಗಳು ಆಗಮನ ಮತ್ತು ನಿರ್ಗಮನ ಮಾಡುತ್ತಿವೆ. ಟ್ರಾಫಿಕ್, ಫ್ಲೈಓವರ್ ಹಾಗೂ ರಸ್ತೆ ಕಾಮಗಾರಿ ಸೇರಿದಂತೆ ವಿವಿಧ ಕಾರಣಕ್ಕೆ ಅವಳಿ ನಗರವನ್ನು ದಾಟಲು ವಾಹನಗಳಿಗೆ ಗಂಟೆಗೂ ಅಧಿಕಕಾಲ ಸಮಯಾವಕಾಶ ತಗಲುತ್ತಿದೆ.**

# ರಾಷ್ಟ್ರೀಯ ಅಂಧತ್ವ ನಿವಾರಣಾ ಯೋಜನೆಯಡಿ ನಿರಾಶ್ರಿತ ಅಂಧರ ಬಾಳಿಗೆ ಬೆಳಕಾದ ಜಿಲ್ಲಾಸ್ಪತ್ರೆ ನೇತ್ರ ತಜ್ಞರ ತಂಡ

• ಉದಯವಾಹಿನಿ, ಚಿತ್ರದುರ್ಗ

ಕಳೆದ ಹಲವು ವರ್ಷಗಳಿಂದ ಸ್ವಯಂಪ್ರೇರಿತವಾಗಿ ಚಿತ್ರದುರ್ಗದ ತುರುವನೂರು ರಸ್ತೆಯ ಗೊನೂರುನಲ್ಲಿರುವ ನಿರಾಶ್ರಿತರ ಪುನರ್ವಸತಿ ಕೇಂದ್ರಕ್ಕೆ ಬೆಳಗಟ್ಟ ಸರ್ಕಾರಿ ಪ್ರಾಥಮಿಕ ಆರೋಗ್ಯ ಕಡಿಮೆ ಕೇಂದ್ರದ ಸಹಕಾರದಲ್ಲಿ ಆಗಿಂದಾಗ್ಗೆ ಭೇಟಿನೀಡಿ ಅಲ್ಲಿನ ನಿರಾಶ್ರಿತರ ಕಣ್ಣುಗಳ ಪರೀಕ್ಷೆ ಮಾಡಿ ಸೂಕ್ತ ಚಿಕಿತ್ಸೆ ನೀಡುತ್ತಾ ಬಂದಿದೆ. ಅದೇ ರೀತಿ ಇದೇ ಫೆಬ್ರುವರಿ 23ರ ನಿರಾಶ್ರಿತರ ಕೇಂದ್ರಕ್ಕೆ ಭೇಟಿನೀಡಿ ಸುಮಾರು 25ಕ್ಕೂ ಹೆಚ್ಚು ಜನರಿಗೆ ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ಮಾಡುವುದರ ಮೂಲಕ ನಿರಾಶ್ರಿತ ಅಂಧರ ಬಾಳಲ್ಲಿ ಬೆಳಕು ಚೆಲ್ಲಿದ್ದಾರೆ. ಈ ಸಂದರ್ಭದಲ್ಲಿ ನೇತ್ರತಜ್ಞರಾದ ಡಾ. ಪ್ರದೀಪ್ ಅವರು ಮಾತನಾಡುತ್ತಾ, ದೃಷ್ಟಿ ಇಲ್ಲದೆ ಬದುಕು ಸಾಗಿಸುವುದಕ್ಕಿ ದೊಡ್ಡ ನೋವು ಇನ್ನೊಂದಿಲ್ಲ ಒಂದು ಸಣ್ಣ ಶಸ್ತ್ರಚಿಕಿತ್ಸೆಯಿಂದ ಯಾರಾದರೂ ಮತ್ತೆ ನೋಡಲು ಸಾಧ್ಯವಾದರೆ, ಅದಕ್ಕಿಂತ ದೊಡ್ಡ ಸಂತೋಷ ವೈದ್ಯರಿಗೆ ಮತ್ತೊಂದಿಲ್ಲ. ಪ್ರತಿಯೊಬ್ಬ ಮಾನವನಿಗೂ ನೋಡಲು ಹಕ್ಕಿದೆ ಈ ಬಾರಿ ಚಿಕಿತ್ಸಗೊಳಪಟ್ಟ ಎಲ್ಲರ ಚಿಕಿತ್ಸೆಯು ಸಂಪೂರ್ಣ ಯಶಸ್ವಿಯಾಗಿದ್ದು , ಎಲ್ಲರೂ ಆರೋಗ್ಯವಾಗಿದ್ದಾರೆ. ಕಣ್ಣಿನ ಶಸ್ತ್ರಚಿಕಿತ್ಸೆಗೆ ಒಳಪಟ್ಟ ಎಲ್ಲರೂ ತಮ್ಮ ಹೊಸ ದೃಷ್ಟಿಯೊಂದಿಗೆ ಯುಗಾದಿ ಹಾಗೂ ರಂಜಾನ್ ಹಬ್ಬದ ಚಂದ್ರನನ್ನು ಕರಿಯ ಕಣ್ಣಿನಲ್ಲಿ ನೋಡುತ್ತಾ ಹಬ್ಬವನ್ನು ಸಂಭ್ರಮದಿಂದ ಆಚರಿಸಲಿ ಎಂದು ಶುಭಕೋರಿದರು .


ಉದಯವಾಹಿನಿ ಚಿತ್ರ

ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯ ಸಂಯೋಜಕರು ಡಾ ಚಂದ್ರಶೇಖರ್ ರಾಜು ಅವರು ಮಾತನಾಡುತ್ತಾ ಜಿಲ್ಲಾ ಆಸ್ಪತ್ರೆಯಲ್ಲಿ ಕಳೆದೆರಡು ವರ್ಷದಲ್ಲಿ 39 ಜನ ನಿರಾಶ್ರಿತರಿಗೆ ಹಾಗೂ ಸುಮಾರು ಎರಡು ಸಾವಿರಕ್ಕೂ ಹೆಚ್ಚು ಫಲಾನುಭವಿಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಕಣ್ಣಿನ ಶಸ್ತ್ರ ಚಿಕಿತ್ಸೆಯನ್ನು ಯಶಸ್ವಿಯಾಗಿ ಡಾ ಪ್ರದೀಪ್ ನಡೆಸಿರುವ ಡಾ.ಪ್ರದೀಪ್,ಜಿಲ್ಲಾ ಶಸ್ತ್ರ ಚಿಕಿತ್ಸಕರಾದ ಡಾ.ಎಸ್.ಪಿ. ರವೀಂದ್ರ ಹಾಗೂ ತಂಡದವರ ಕಾರ್ಯಗಳು ಶ್ಲಾಘಾನೀಯವೆಂದು ಪ್ರಶಂಶಿದರು.

ಜಿಲ್ಲಾ ಅಂಧತ್ವ ನಿವಾರಣಾ ಅಧಿಕಾರಿ ಡಾ. ನಾಗರಾಜ್, ನೇತ್ರ ಅಧಿಕಾರಿ ರಾಮು, ಬೆಳಗಟ್ಟ ಆರೋಗ್ಯ ನೀರಿಕ್ಷಣಾಧಿಕಾರಿ ಮಹೇಶ ಡಿ, ಶುಶ್ರೂಷಕರಾದ ಲಕ್ಷ್ಮಿ, ಗಿರೀಶ್, ಸಿದ್ದು, ರಚನಾ, ರಾಜೇಶ್ವರಿ, ಆಯೇಷಾ, ಗೀತ, ಅಮೃತ, ಐಶ್ವರ್ಯ , ನಿರಾಶ್ರಿತರ ಕೇಂದ್ರದ ವ್ಯವಸ್ಥಾಪಕ ಮಹದೇವಪ್ಪ ಹಾಗೂ ಅಧೀಕ್ಷಕರಾದ ವಿಜಯಕುಮಾರ್ ಮತ್ತಿತರರಿದ್ದರು.

# ಯಶಸ್ಸು ನೆತ್ತಿಗೇರದಿರಲಿ: ಜಾಧವ

• ಉದಯವಾಹಿನಿ ವಿಜಯಪುರ

ಆಂಧ್ರಪ್ರದೇಶದಲ್ಲಿ ನಡೆದ ದಕ್ಷಿಣ ಭಾರತ ಅಂತರ ರಾಜ್ಯ 14 ವರ್ಷದೊಳಗಿನ ಕ್ರಿಕೇಟ ಪಂದ್ಯಾವಳಿಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ 3 ಶತಕ ಮತ್ತು ಒಂದು ದ್ವಿಶತಕಗಳೊಂದಿಗೆ ಪಂದ್ಯಾವಳಿಯಲ್ಲಿ ಸರ್ವಾಧಿಕ ಓಟಗಳನ್ನು ದಾಖಲಿಸಿ ದಕ್ಷಿಣ ಭಾರತ ತಂಡಕ್ಕೆ ಆಯ್ಕೆಯಾಗಿರುವ ವಿಜಯಪುರದ ಹೆಮ್ಮೆಯ ಕ್ರಿಕೇಟಿಗ ಪವನದೀಪ ಭಾರದಖಾನೆಯವರಿಗೆ ಲಯನ್ಸ್ ಕ್ಲಬ್ ಆಫ್ ಬಿಜಾಪುರ ಪರಿವಾರದ ವತಿಯಿಂದ ಏರ್ಪಡಿಸಲಾಗಿದ್ದ ಗೌರವ ಸನ್ಮಾನ ಕಾರ್ಯಕ್ರಮದಲ್ಲಿ ಮಹಿಳಾ ಕ್ರಿಕೇಟ ತರಬೇತುದಾರರಾದ ಡಾ. ಅಶೋಕಕುಮಾರ ಜಾಧವ ಇವರು ಮಾತನಾಡುತ್ತ, ಯಶಸ್ಸು ನೆತ್ತಿಗೆರಬಾರದು.

ಯಾರು ತಮ್ಮ ಯಶಸ್ಸನ್ನು ಅತೀ ಬೇಗ ವಿಜೃಂಭಿಸುತ್ತಾರೋ, ಅಂದಿನಿಂದ ಅವರ ಆ ಸಾಧನೆಯ ಅಧೋಗತಿ ಪ್ರಾರಂಭ. ಆದುದರಿಂದ ಚಿಕ್ಕ ವಯಸ್ಸಿನಲ್ಲಿ ಸಿಕ್ಕಿರುವ ಈ ಯಶಸ್ಸು ಅಕಸ್ಮಿಕ.. ಅದು ಶಾಶ್ವತ ಇರಬೇಕಾದರೇ ಪ್ರಯತ್ನ ಮತ್ತು ಸಾಧನೆ ನಿರಂತರ ಆಗಿರಬೇಕು ಎಂದು ಹೇಳಿದರು. ಮತ್ತೊರ್ವ ಅಥಿತಿಗಳಾಗಿ ಆಗಮಿಸಿದ ಲಯನ್ಸ ಪರಿವಾರದ ಮಾಜಿ ಅಧ್ಯಕ್ಷರಾದ ಫಯಾಜ ಕಲಾದಗಿಯವರು ಮಾತನಾಡುತ್ತ, ಪವನದೀಪ ಅವರು ಭವಿಷ್ಯದಲ್ಲಿ ಭಾರತ ದೇಶದ ಕ್ರಿಕೇಟ ಧೃವತಾರೆ ಆಗಬೇಕು. ಐ.ಪಿ.ಎಲ. ಪಂದ್ಯಾವಳಿಯಲ್ಲಿ ಮಿಂಚಿ ನಮ್ಮ ಜಿಲ್ಲೆಗೆ ಕೀರ್ತಿ ತರಬೇಕು. ಆ ನಿಟ್ಟಿನಲ್ಲಿ ಕನಸನ್ನು ಹೊಂದಿರಬೇಕು ಎಂದರಲ್ಲದೇ, ಜಿಲ್ಲೆಯ ವಿವಿಧ ಸಂಘ ಸಂಸ್ಥೆಗಳಿಂದ ಸಹಾಯ ಮಾಡವೇವು ಎಂದು ಹೇಳಿದರು. ಪರಿವಾರದ ಕಾರ್ಯದರ್ಶಿಗಳಾದ ವಿದ್ಯಾ ಕೊಟೆನ್ನವರ ಇವರು ಮಾತನಾಡುತ್ತ, ಯಾವ ಮಕ್ಕಳು ಪಾಲಕರಿಗೆ, ಶಿಕ್ಷಕರಿಗೆ ಮತ್ತು ಹಿರಿಯರಿಗೆ ಗೌರವ ಕೊಟ್ಟು ಕಲಿಕೆಯಲ್ಲಿ ತೊಡಗಿಸಿಕೊಳ್ಳುತ್ತಾರೋ, ಅವರು ಮಾತ್ರ ಸಾಧಕರಾಗುತ್ತಾರೆ. ಪವನದೀಪ ಇವತ್ತು ಅಂತಹ ಸಂಸ್ಕೃತಿಯನ್ನು ಹೊಂದಿದ್ದರಿಂದಲೇ ವಿಜಯಪುರ ಜಿಲ್ಲೆ ಅಷ್ಟೇ ಅಲ್ಲ, ಕರ್ನಾಟಕ ರಾಜ್ಯವು ಕೂಡ ಹೆಮ್ಮೆ ಪಡುವಂತಹ ಸಾಧನೆ ಮಾಡಿದ್ದಾನೆ. ಈ ಸಾಧನೆಯ ಜೋತೆಗೆ ಒಳ್ಳೆಯ ಸಂಸ್ಕೃತಿಯೂ ಮುಂದುವರೆಯಲಿ ಎಂದು ಶುಭ ಹಾರೈಸಿದರು.


ಉದಯವಾಹಿನಿ ಚಿತ್ರ

# ಆರ್ಥಿಕವಾಗಿ ಹಿಂದುಳಿದ ಕುಟುಂಬಕ್ಕೆ ದಾನಿಗಳ ನೆರವಿನಿಂದ ನಿರ್ಮಿಸಿದ ಮನೆ ಹಸ್ತಾಂತರ

• ಉದಯವಾಹಿನಿ, ಸುಳ್ಯ

ಆರ್ಥಿಕವಾಗಿ ಹಿಂದುಳಿದ ಅಮರಮುಡ್ನೂರು ಗ್ರಾಮದ ಹೊನ್ನೆಕಡ್ಪು ಸೀತಮ್ಮ ಅವರ ಕುಟುಂಬಕ್ಕೆ ದಾನಿಗಳ ನೆರವಿನಿಂದ ನಿರ್ಮಿಸಿದ ಮನೆಯ ಹಸ್ತಾಂತರ ಕಾರ್ಯಕ್ರಮ ನಡೆಯಿತು.

ನೂತನ ಮನೆಯನ್ನು ದಾನಿ ಹಾಗೂ ಎಎಲ್‌ಇ ಪ್ರಧಾನ ಕಾರ್ಯದರ್ಶಿ ಅಕ್ಷಯ್ ಕೆ.ಸಿ ಹಸ್ತಾಂತರ ಮಾಡಿ ಮಾತನಾಡಿ ಪ್ರತಿ ಕುಟುಂಬಕ್ಕೆ ಮನೆ ಹಾಗೂ ಶೌಚಾಲಯ ಅತೀ ಅಗತ್ಯ. ಮನೆ ಹಾಗೂ ಶೌಚಾಲಯ ಇಲ್ಲದ ಕುಟುಂಬಗಳು ಈಗಲೂ ಇರುವುದು ಬೇಸರದ ವಿಷಯ. ಆದುದರಿಂದ ಸಮಾಜದ ಅಶಕ್ತ ಕುಟುಂಬಕ್ಕೆ ನೆರವಾಗುವುದು ಎಲ್ಲರ ಕರ್ತವ್ಯ. ಎಲ್ಲರ ಪ್ರಯತ್ನ ಮತ್ತು ದುಡಿಮೆಯಿಂದ ಈ ಮನೆ ನಿರ್ಮಾಣ ಸಾಧ್ಯವಾಗಿದೆ. ಎಷ್ಟೇ ಹಣ ಇದ್ದರೂ ಹಲವರಿಗೆ ಕೊಡುವ ಮನಸ್ಸು ಇರುವುದಿಲ್ಲ. ಆರ್ಥಿಕವಾಗಿ ಸಬಲರಾದವರು ತಮ್ಮ ಆದಾಯದ ಒಂದಿಷ್ಟು ಮೊತ್ತವನ್ನು ಸಮಾಜದ ಕಡುಬಡವರ ಏಳಿಗೆಗಾಗಿ ವ್ಯಯಿಸಬೇಕು ಎಂದು ಹೇಳಿದರು. ವೇದಿಕೆಯಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಸದಸ್ಯ ಅಶೋಕ್ ನೆಕ್ರಾಜೆ, ಸುಳ್ಯ ತಾಲ್ಲೂಕು ಮರಾಟಿ ಸೇವಾ ಸಂಘದ ಅಧ್ಯಕ್ಷ ಬಾಲಕೃಷ್ಣ ನಾಯ್ಕ್ ಅಜ್ಜಾವರ, ಹಿರಿಯ ಪತ್ರಕರ್ತ ಹರೀಶ್ ಬಂಟ್ವಾಳ್, ಪತ್ರಕರ್ತ ಈಶ್ವರ ವಾರಣಾಸಿ, ಪದ್ಮನಾಭ ಬೀಡು, ಗ್ರಾ.ಪಂ.ಮಾಜಿ ಸದಸ್ಯೆ ದಿವ್ಯಾ ಮಡಪ್ಪಾಡಿ, ಕೊರಗಪ್ಪ ಕುರುಂಬುಡೇಲು, ಪ್ರದೀಪ್ ಉಬರಡ್ಕ, ಗೋಪಾಲಕೃಷ್ಣ ಪೊಸವಳಿಗೆ, ಕೇಶವ ಗೌಡ ಪರಿವಾರ, ಮಾಯಿಲಪ್ಪ ಸಂಕೇಶ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

# ಮಾನವೀಯತೆಯೇ ಹಿಂದೂ ಧರ್ಮದ ಸಾರ: ಲಕ್ಷ್ಮಿ ಹೆಬ್ಬಾಳ್ಕರ್

• ಉದಯವಾಹಿನಿ, ಬೆಳಗಾವಿ

ಮಾನವೀಯತೆಯೇ ಹಿಂದೂ ಧರ್ಮದ ಸಾರ. ನಮ್ಮ ಧರ್ಮವನ್ನು ಅನುಸರಿಸುವುದರ ಜೊತೆಗೆ ಇತರ ಧರ್ಮಗಳನ್ನೂ ಗೌರವಿಸುವುದು ನಮ್ಮ ಸಂಸ್ಕೃತಿ. ಕೇವಲ ದ್ವೇಷದಿಂದ ದೇವರು ಮೆಚ್ಚುವುದಿಲ್ಲ. ಮನುಷ್ಯತ್ವ ಬೆಳೆಸಿಕೊಂಡಾಗಲೇ ಸಮಾಜ ಸುಂದರವಾಗುತ್ತದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹೇಳಿದರು.

**ಲಕ್ಷ್ಮಿ ಹೆಬ್ಬಾಳ್ಕರ್ ಕ್ಷೇತ್ರದ ಅಭಿವೃದ್ಧಿಗೆ ಮುಂದಿನ 25 ವರ್ಷದ ಯೋಜನೆ ರೂಪಿಸಿದ್ದಾರೆ. ಕೆರೆಗಳಿಗೆ ನೀರು ತುಂಬಿಸುವ ದೂರದೃಷ್ಟಿಯೂ ಇದೆ. -ಚನ್ನರಾಜ ಹಟ್ಟಿಹೊಳಿ**

ಬಸ್ತವಾಡ ಗ್ರಾಮದಲ್ಲಿ ರೂ.2.80 ಕೋಟಿ ವೆಚ್ಚದ ರಸ್ತೆ ಕಾಮಗಾರಿ ಹಾಗೂ ರೂ.1.18 ಕೋಟಿ ವೆಚ್ಚದಲ್ಲಿ ಕಲ್ಲೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ರಾತ್ರಿ ಪೂಜೆ ಸಲ್ಲಿಸಿ ಮಾತನಾಡಿದ ಅವರು, ಗ್ರಾಮದ ಎಲ್ಲಾ ಜಾತಿಯವರೂ ಒಂದಾಗಿ ಉತ್ತಮ ಕಾರ್ಯಗಳಲ್ಲಿ ಭಾಗವಹಿಸುತ್ತಿರುವುದು ಮಾದರಿಯಾಗಿದೆ ಎಂದರು.

ಕ್ಷೇತ್ರ ಅಭಿವೃದ್ಧಿಯ ದಾರಿಯಲ್ಲಿ ವೇಗವಾಗಿ ಮುನ್ನಡೆಯುತ್ತಿದೆ. ಸೋಲಿನಲ್ಲಿಯೂ ಕೆಲಸ ಮಾಡಿದ್ದರಿಂದಲೇ ಜನರ ವಿಶ್ವಾಸ ಪಡೆದು ಭಾರೀ ಅಂತರದಿಂದ ಗೆಲುವು ಸಾಧಿಸಿದೆ. ಗೃಹಲಕ್ಷ್ಮಿ ಯೋಜನೆಯಿಂದ ಮಹಿಳೆಯರಲ್ಲಿ ಸ್ವಾಭಿಮಾನ ಹೆಚ್ಚುತ್ತಿರುವುದನ್ನು ನೋಡುತ್ತಿದ್ದೇನೆ ಎಂದರು.

ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಮಾತನಾಡಿ, ನಾವು ಮಾತಿನಲ್ಲಿ ಅಲ್ಲ. ಕೆಲಸದಲ್ಲಿ ನಂಬಿಕೆ ಇಟ್ಟವರು. ಜನರ ಸಮಸ್ಯೆಗಳಿಗೆ ಪರಿಹಾರ ಕೊಡುತ್ತೇವೆ; ಯಾರಿಗೂ ಅನ್ಯಾಯವಾಗಲು ಬಿಡುವುದಿಲ್ಲ. ಜಗಳ ಹುಟ್ಟುಹಾಕುವ ರಾಜಕಾರಣ ನಮ್ಮದು ಅಲ್ಲ, ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಧೋರಣೆ ನಮ್ಮದು ಎಂದರು. ಮುಖಂಡರಾದ ಚಂದ್ರಕಾಂತ ಪಾಟೀಲ, ಮನೋಹರ ಬಾಂಡಗಿ, ಶಿಲ್ಪಾ ಪಾಟೀಲ, ಮಾಣಿಕ್ ಸಂಕೇಶ್ವರಿ, ಪಿಡಿಒ ಆಶಾ, ನೇಮು ಪಾಟೀಲ, ಗೋಪಾಲ ಕಾಮಾಜ, ಶಿವಾಜಿ ಕಾಕತ್ಕರ್, ಈರಪ್ಪ ಚೌಗುಲೆ ಇದ್ದರು.


ಉದಯವಾಹಿನಿ ಚಿತ್ರ

**ಕಲ್ಯಾಣ ಮಂಟಪ ಸಾರ್ವಜನಿಕರಿಗೆ ಅರ್ಪಣೆ**

**ಬೆಳಗಾವಿ ಗ್ರಾಮೀಣ ಕ್ಷೇತ್ರದ ಸಾರ್ವಜನಿಕರ ಹಾಗೂ ರೈತರ ಮಕ್ಕಳ ಕಲ್ಯಾಣ ಹಾಗೂ ಇತರ ಕಾರ್ಯಕ್ರಮಗಳ ಅನುಕೂಲಕ್ಕಾಗಿ ರೂ.2 ಕೋಟಿ ವೆಚ್ಚದಲ್ಲಿ ಮಾಸ್ತಮರ್ಡಿ ಗ್ರಾಮದಲ್ಲಿ ನಿರ್ಮಿಸಿದ ಕಲ್ಯಾಣಮಂಟಪವನ್ನು ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಸಾರ್ವಜನಿಕ ಸೇವೆಗೆ ಅರ್ಪಿಸಿದರು. ನಡೆದ ಮೊದಲ ಮದುವೆಯಲ್ಲಿ ಪಾಲ್ಗೊಂಡ ಅವರು ನವದಂಪತಿಗೆ ಶುಭ ಕೋರಿದರು.**

# ಬಜೆಟ್‌ನಲ್ಲಿ ಅವಳಿ ತಾಲ್ಲೂಕಿನ ನೀರಾವರಿಗೆ ಆದ್ಯತೆ ಸಿಕ್ಕೀತೆ?

### ಕಳೆದ ವರ್ಷ ಮಂಡಿಸಿದ ಬಜೆಟ್‌ನಲ್ಲಿ ಜೇವರ್ಗಿ ಹಾಗೂ ಯಡ್ರಾಮಿ ಅವಳಿ ತಾಲ್ಲೂಕುಗಳಿಗೆ ವಿಶೇಷ ಕೊಡುಗೆಗಳು ಇರಲಿಲ್ಲ

• ಉದಯವಾಹಿನಿ, ಜೇವರ್ಗಿ

ಪ್ರತಿ ಬಾರಿಯಂತೆ ಈ ಸಲವೂ ಜೇವರ್ಗಿ ಹಾಗೂ ಯಡ್ರಾಮಿ ಅವಳಿ ತಾಲ್ಲೂಕಿನ ಜನರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಲಿರುವ ಬಜೆಟ್ ಬಗ್ಗೆ ಹಲವು ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದಾರೆ. ಕಳೆದ ವರ್ಷ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಜೇವರ್ಗಿ ಹಾಗೂ ಯಡ್ರಾಮಿ ಅವಳಿ ತಾಲ್ಲೂಕುಗಳಿಗೆ ವಿಶೇಷ ಕೊಡುಗೆಗಳು ಇರಲಿಲ್ಲ. ಆದರೂ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷರೂ ಆದ ಜೇವರ್ಗಿ ಕ್ಷೇತ್ರದ ಶಾಸಕ ಡಾ.ಅಜಯಸಿಂಗ್ ಅವರು ತಮ್ಮ ಕ್ಷೇತ್ರಕ್ಕೆ ಹೇರಳ ಅನುದಾನ ತಂದಿದ್ದಾರೆ. ಹೀಗಿದ್ದರೂ ಕ್ಷೇತ್ರದಲ್ಲಿ ಆಗಬೇಕಾದ ಕೆಲಸಗಳು ಸಾಕಷ್ಟಿವೆ. ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಆಹಾರ ಸಂಸ್ಕರಣಾ ಘಟಕ, ಮಲ್ಲಾಬಾದ ಏತ ನೀರಾವರಿ ಯೋಜನೆ, ಅರ್ಧಕ್ಕೆ ನಿಂತ ನರಿಬೋಳ-ಚಾಮನೂರ, ಹೊನ್ನಾಳ ತುನ್ನೂರ ಸೇತುವೆ, ಯಡ್ರಾಮಿ ಪಟ್ಟಣದಲ್ಲಿ ಬಸ್ ಘಟಕ, ಕೆರೆ ತುಂಬಿಸುವ ಯೋಜನೆ, ಗ್ರಾಮೀಣ ರಸ್ತೆಗಳ ಸುಧಾರಣೆ, ನೀರಾವರಿ ಸೇರಿದಂತೆ ಅಗತ್ಯ ಯೋಜನೆಗಳ ಮಂಜೂರಾತಿಗೆ ಜನರು ಎದುರು ನೋಡುತ್ತಿದ್ದಾರೆ.

**ಪೂರ್ಣಗೊಳ್ಳದ ಮಲ್ಲಾಬಾದ ಏತ ನೀರಾವರಿ ಯೋಜನೆ:** ಯಡ್ರಾಮಿ ತಾಲ್ಲೂಕಿನ 30 ಕ್ಕೂ ಹೆಚ್ಚು ಗ್ರಾಮಗಳ ಹಾಗೂ ಶಹಾಪುರ, ಸುರಪುರ ತಾಲ್ಲೂಕಿನ ಹತ್ತಾರು ಹಳ್ಳಿಗಳ ಲಕ್ಷಾಂತರ ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಮಹತ್ವಾಕಾಂಕ್ಷೆ ಯೋಜನೆಗಳಲ್ಲೊಂದಾದ ಮಲ್ಲಾಬಾದ ಏತ ನೀರಾವರಿ ಕಾಮಗಾರಿ ಎರಡು ದಶಕ ಕಳೆಯುತ್ತಾ ಬಂದರೂ ಇಲ್ಲಿಯವರೆಗೂ ಪೂರ್ಣಗೊಂಡಿಲ್ಲ. ಜೇವರ್ಗಿ ತಾಲ್ಲೂಕಿನ 35ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಭೀಮಾ ನದಿ ಸಮೃದ್ಧವಾಗಿ ಹರಿಯುತ್ತದೆ. ಆ ನೀರು ಬಳಸಿಕೊಂಡು ಜೇವರ್ಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಹಾಗೂ ಕೃಷಿ ಭೂಮಿ ನೀರಾವರಿಯನ್ನಾಗಿಸುವ ಪ್ರಯತ್ನಗಳು ಕಳೆದ ಹಲವು ವರ್ಷಗಳಿಂದ ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ. ಶಾಸಕ ಡಾ.ಅಜಯಸಿಂಗ್ ಅವರು ಅಧಿಕಾರದಲ್ಲಿ ಇದ್ದೇ ಹನ್ನೆರೆಡೂವರೆ ವರ್ಷಗಳು ಪೂರ್ಣಗೊಂಡಿವೆ. ತಮ್ಮ ಭಾಷಣದಲ್ಲಿ ಸದಾ ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡುವುದಾಗಿ ಹೇಳುವ ಶಾಸಕರು ತಮ್ಮ ತಂದೆ ಮಾಜಿ ಮುಖ್ಯಮಂತ್ರಿ ಎನ್.ಧರ್ಮಸಿಂಗ್ ಅವಧಿಯಲ್ಲಿ ಬಾಕಿ ಉಳಿಸಿಕೊಂಡೇ ಬಂದಿರುವ ಫುಡ್ ಪಾರ್ಕ್ ಹಾಗೂ ಏತ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಬೇಕಾದಷ್ಟು ಅನುದಾನ ತಂದಿಲ್ಲ ಎಂದು ಜನ ಬೇಸರದಿಂದಲೇ ಹೇಳುತ್ತಾರೆ.

**ವಿಶೇಷ ಪ್ಯಾಕೇಜ್ ಅಗತ್ಯ:** ಹಿಂದುಳಿದ ತಾಲ್ಲೂಕು ಎಂಬ ಹಣೆ ಪಟ್ಟಿಯನ್ನು ಕಳಚಿಕೊಳ್ಳಲು ಯತ್ನಿಸುತ್ತಿರುವ ಎರಡೂ ತಾಲ್ಲೂಕಿನ ಅಭಿವೃದ್ಧಿಗೆ ಸರ್ಕಾರ ಇನ್ನಷ್ಟು ಉತ್ತೇಜನ ನೀಡಬೇಕಾಗಿದೆ. ದೊಡ್ಡ ದೊಡ್ಡ ಯೋಜನೆಗಳು ಬರಬೇಕಾಗಿದೆ. ಹಾಗಾಗಿ, ಎರಡೂ ತಾಲ್ಲೂಕುಗಳಿಗೆ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂಬ ಕೂಗು ಹಲವು ವಲಯಗಳಿಂದ ಕೇಳಿ ಬರುತ್ತಿದೆ. ಪ್ರತ್ಯೇಕ ತಾಲ್ಲೂಕು ಆಗಿರುವ ಯಡ್ರಾಮಿ ಪಟ್ಟಣ ಅಭಿವೃದ್ಧಿಯ ಹಾದಿಗೆ ಇನ್ನೂ ಹೊರಳಿಲ್ಲ. ತಾಲ್ಲೂಕಿನ ವ್ಯಾಪ್ತಿಯಲ್ಲಿ ಗ್ರಾಮೀಣ ರಸ್ತೆಗಳು ಹಾಳಾಗಿದ್ದು, ಅಭಿವೃದ್ಧಿಗಾಗಿ ಕಾಯುತ್ತಿವೆ. ಬಿಇಒ, ಅಬಕಾರಿ, ಲೋಕೋಪಯೋಗಿ, ಪಂಚಾಯತ್ ರಾಜ್, ಅರಣ್ಯ, ಕೃಷಿ, ತೋಟಗಾರಿಕೆ, ಪಶು, ಆಹಾರ, ಎಪಿಎಂಸಿ ಸೇರಿದಂತೆ ಬಹುತೇಕ ಇಲಾಖೆಯ ಕಚೇರಿಗಳ ಸ್ಥಾಪನೆಯಾಗಬೇಕು. ಯಡ್ರಾಮಿ ಪಟ್ಟಣದ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಅನುದಾನ ಮೀಸಲಿಡಬೇಕಾಗಿದೆ.

**ಅಧ್ಯಯನ ಪೀಠ ಸ್ಥಾಪನೆಯಾಗಲಿ:** ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಶ್ರೇಷ್ಠ ತತ್ವಪದಕಾರರಾದ ಕಡಕೋಳಮಡಿವಾಳಪ್ಪ, ರಾಂಪೂರ ಬಕ್ಕಪ್ಪ, ಚನ್ನೂರ ಜಲಾಲ್ ಸಾಹೇಬರ ಅಧ್ಯಯನ ಪೀಠ ಸ್ಥಾಪನೆಯಾಗಬೇಕು. 17ನೇ ಶತಮಾನದ ಶ್ರೇಷ್ಠ ವಚನಕಾರ ಚರಚಕ್ರವರ್ತಿ ಷಣ್ಮುಖ ಶಿವಯೋಗಿಗಳ ತಪೋನುಷ್ಠಾನಗೈದ ಕೋಳಕೂರ ಗ್ರಾಮದ ಹತ್ತಿರದ ಜೋಗಿಕೊಳ್ಳ, ಶ್ರೀಮಠ ಅಭಿವೃದ್ಧಿಗೆ ಪ್ರಾಧಿಕಾರ ರಚನೆ ಮಾಡಬೇಕು ಎಂದು ಸಾಹಿತಿ ಸದಾನಂದ ಪಾಟೀಲ ಹೇಳುತ್ತಾರೆ.


ಉದಯವಾಹಿನಿ ಚಿತ್ರ

**ಬಗೆಹರಿಯದ ಒಳಚರಂಡಿ ಸಮಸ್ಯೆ**

**ಜೇವರ್ಗಿ ಪಟ್ಟಣದಲ್ಲಿ ಸುಮಾರು 40 ಸಾವಿರಕ್ಕೂ ಅಧಿಕ ಜನಸಂಖ್ಯೆ ಇದ್ದು, ಕಳೆದ ಅನೇಕ ವರ್ಷಗಳಿಂದ ಸ್ಥಳೀಯರು ಒಳಚರಂಡಿ ಸಮಸ್ಯೆ ಎದುರಿಸುತ್ತಿದ್ದಾರೆ. ಸಮರ್ಪಕ ಒಳಚರಂಡಿ ವ್ಯವಸ್ಥೆಗಳೂ ಆಗಬೇಕು. ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಎಲ್ಲಾ ಬಡಾವಣೆಗಳಲ್ಲಿ ಸಿಸಿ ರಸ್ತೆ, ಉದ್ಯಾನವನಗಳ ಅಭಿವೃದ್ಧಿ ಆಗಬೇಕಿದೆ.**

**ಕಳೆದ ಐದಾರು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ನರಿಬೋಳ-ಚಾಮನೂರ ಹೊನ್ನಾಳ-ತುನ್ನೂರ ಸೇತುವೆ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಬೇಕು. ಚಿಗರಹಳ್ಳಿ-ಯಡ್ರಾಮಿ-ನಾಗರಹಳ್ಳಿ ಕ್ರಾಸ್‌ವರೆಗೆ ಹೆದ್ದಾರಿ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಬೇಕು. -ಅರುಣರೆಡ್ಡಿ ಶಿವಪೂರ**

## ಮಿನಿ ನ್ಯೂಸ್

### ಭೂ ಕಬಳಿಕೆ ಆರೋಪ 15 ಜನರ ಮೇಲೆ ವಾರಂಟ್ ಜಾರಿ

• ಉದಯವಾಹಿನಿ ಅಥಣಿ

ಪಟ್ಟಣದ ಸರಕಾರಿ ಜಾಗವನ್ನು ಕಬಳಿಕೆ ಮಾಡಿ ವಾಣಿಜ್ಯ ಉದ್ದೇಶದ ಶೆಡ್ಡ ನಿರ್ಮಾಣ ಮಾಡಿದ ಆರೋಪದಡಿ ನ್ಯಾಯಲಾಯದ ಮೆಟ್ಟಿಲೇರಿದ್ದ ಪ್ರಕರಣಕ್ಕೆ ಸಂಬಂದಿಸಿದಂತೆ ಸಂಬಂಧಿಸಿದವರ ವಿರುದ್ದ ರಾಜ್ಯ ಭೂ ಕಬಳಿಕೆ ನ್ಯಾಯಾಲಯ ಸಮನ್ಸ ಜಾರಿ ಮಾಡಿ ಆದೇಶ ಹೊರಡಿಸಿದೆ ಎಂದು ನ್ಯಾಯವಾದಿ ಶಶಿಕಾಂತ ಬಾಡಗಿ ಹೇಳಿದರು.

ಪುರಸಭೆ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ 1230 ಸಿ.ಟಿ.ಎಸ್.4357 ರಲ್ಲಿ 13 ಗುಂಟೆ ಜತ್ತ ಜಾಂಬೂಟಿ ರಾಜ್ಯ ಹೆದ್ದಾರಿ ಪಕ್ಕದ ಸರಕಾರಿ ಜಾಗವನ್ನು ಅತಿಕ್ರಮಣ ಮಾಡಿ ವ್ಯಾಣಿಜ್ಯ ಮಳಿಗೆ ನಿರ್ಮಿಸಲಾಗಿದ್ದು ಇದು ಕಾನೂನು ಬಾಹಿರವಾಗಿದೆ, ವಿಷಯಕ್ಕೆ ಸಂಭಂದಿಸಿದ ಅದಿಕಾರಿಗಳಿಗೆ ದೂರು ನೀಡಿದಲ್ಲದೆ ನ್ಯಾಯಾಲಯದಲ್ಲಿ ಪ್ರಕರಣ ಹೂಡಲಾಗಿತ್ತು, ಭೂ ಕಬಳಿಕೆ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಲಾಗಿ ಪ್ರತಿವಾದಿಗಳು ಯಾರು ಸಹ ವಿಚಾರಣೆಗೆ ಹಾಜರಾಗದ ಹಿನ್ನಲೆ 15 ಜನರ ವಿರುದ್ದ ನ್ಯಾಯಾಲಯವು ವಿಚಾರಣೆಗೆ ಹಾಜರಾಗಲು ವಾರೆಂಟ್ ಜಾರಿ ಮಾಡಲಾಗಿದೆ, ನನ್ನ ಕಾನೂನಿನ ಹೋರಾಟಕ್ಕೆ ಮೊದಲ ಜಯ ಸಿಕ್ಕಿದೆ, ಅಥಣಿ ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಅನೇಕ ಸರ್ಕಾರಿ ಜಾಗಗಳು ಅತಿಕ್ರಮಣ ಹೊಂದಿದ್ದು ಇವುಗಳ ಬಗ್ಗೆ ಕಾನೂನು ಹೋರಾಟ ಮಾಡಲು ಸಜ್ಜಾಗಿದ್ದು ಸರಕಾರದ ಯಾವುದೆ ಜಾಗ ಒತ್ತುವರಿ, ಕಬಳಿಕೆ, ಅಕ್ರಮ ಬಳಕೆ ಆಗದಂತೆ ನೋಡಿಕೊಳ್ಳುವದು ನಮ್ಮೆಲ್ಲರ ಹೊಣೆಯಾಗಿದೆ ಎಂದು ಹೇಳಿದರು.

### ಆಟೋಚಾಲಕನಿಗೆ 2 ವರ್ಷ ಜೈಲುಶಿಕ್ಷೆ

• ಉದಯವಾಹಿನಿ ಕಲಬುರಗಿ

ನಿರ್ಲಕ್ಷತನದಿಂದ ವೇಗವಾಗಿ ಆಟೋ ಚಲಾಯಿಸಿ ಮಗುವಿನ ಸಾವಿಗೆ ಕಾರಣವಾದ ಆರೋಪ ಸಾಬೀತಾದ್ದರಿಂದ ಆಟೋಚಾಲಕನಿಗೆ ಚಿಂಚೋಳಿಯ ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನ್ಯಾಯಾಲಯವು 2 ವರ್ಷ ಸಾದಾ ಜೈಲುಶಿಕ್ಷೆ ಮತ್ತು ದಂಡ ವಿಧಿಸಿದೆ. ಸುಲೇಪೇಟ ಗ್ರಾಮದ ಬಸವರಾಜ ಶಿವಪುತ್ರಪ್ಪ ಲೋಡನೂರ ಶಿಕ್ಷೆಗೊಳಗಾದ ಆಟೋಚಾಲಕ. 2020 ರ ಸಪ್ಟೆಂಬರ್ 22 ರಂದು ಚಿಂಚೋಳಿಯಲ್ಲಿ ಪ್ರಯಾಣಿಕರನ್ನು ಆಟೋದಲ್ಲಿ ಕರೆದೊಯ್ಯುತ್ತಿದ್ದಾಗ ವೇಗದಿಂದ ಸಾಗುತ್ತಿದ್ದ ಆಟೋದಿಂದ ಒಂದು ವರ್ಷದ ಮಗು ಕೆಳಗೆ ಬಿದ್ದು ಗಾಯಗೊಂಡು ಸಾವಿಗೀಡಾಗಿದ್ದನು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಾದವಿವಾದ ಆಲಿಸಿದ ಚಿಂಚೋಳಿಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು ತೀರ್ಪು ಪ್ರಕಟಿಸಿದ್ದಾರೆ.ಸರಕಾರದ ಪರವಾಗಿ ಸಹಾಯಕ ಸರಕಾರಿ ಅಭಿಯೋಜಕ ಶಾಂತಕುಮಾರ ಪಾಟೀಲ ಅವರು ವಾದ ಮಂಡಿಸಿದ್ದರು.

### ಲೈಂಗಿಕ ಸುರಕ್ಷತೆ ಮತ್ತು ರಕ್ತ ವರ್ಗಾವಣೆ ವೇಳೆ ಸುರಕ್ಷತೆ ಕ್ರಮ ಅನುಸರಿಸಿ

• ಉದಯವಾಹಿನಿ ಕಮಲನಗರ

ತಾಲ್ಲೂಕಿನ ಮದನೂರ್ ಗ್ರಾಮದಲ್ಲಿ ರಾಜ್ಯ ಏಡ್ಸ್ ಪ್ರಿವೆನಷನ್ ಸೊಸೈಟಿ, ಜಿಲ್ಲಾ ಏಡ್ಸ್ ನಿಯಂತ್ರಣ ತಡೆಗಟ್ಟುವಿಕೆ ಹಾಗೂ ಲಾಲ ಬಹಾದ್ದೂರ್ ಶಿಕ್ಷಣ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಯಿತ್ತು.

ಈ ಸಂದರ್ಭದಲ್ಲಿ ಕಮಲನಗರ ಸಮುದಾಯ ಆರೋಗ್ಯ ಕೇಂದ್ರದ ಆಪ್ತ ಸಮಾಲೋಚಕಿ ತುಳಜಮ್ಮ ರೆಡ್ಡಿ ಮಾತನಾಡಿ ಲೈಂಗಿಕ ಸುರಕ್ಷತೆ ಕೊರತೆ ಮತ್ತು ರಕ್ತ ವರ್ಗಾವಣೆ ವೇಳೆ ಅನುಸರಿಸಬೇಕಾದ ಕ್ರಮಗಳ ನಿರ್ಲಕ್ಷದಿಂದ ಸೋಕಿತರ ಸಂಖ್ಯೆ ಹೆಚ್ಚಾಗುತ್ತಿದೆ.ಹದಿ ಹರೆಯದ ಯುವಕ ಮತ್ತು ಯುವತಿಯರಲ್ಲಿ ಕಾಣುವ ವಯೋಸಹಜ ಬಯಕೆ ನಿಯಂತ್ರಣ ಮತ್ತು ಸುರಕ್ಷತೆಯಿಂದ ರೋಗ ಬರದಂತೆ ತಡೆಗಟ್ಟಬಹುದಾಗಿದೆ. ಮಧುಮೇಹ ಮತ್ತು ರಕ್ತದೊತ್ತಡ ಯುವಕರಲ್ಲಿ ಹೆಚ್ಚು ಕಂಡು ಬರುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ ಎಂದರು.

ಪ್ರಯೋಗಾಲಯದ ತಂತ್ರಜ್ಞರಾದ ವಿಕ್ರಮ, ಆಶಾ ಕಾರ್ಯಕರ್ತೆ ಪ್ರಿಯಾ, ರಾಹುಲ ಪಿಚರಟೆ ಮತ್ತು ಸಾರ್ವಜನಿಕರಿಗೆ ಬಿಪಿ ಮತ್ತು ಸುಗರ್ ಪರೀಕ್ಷೆ ನಡೆಸಲಾಯಿತ್ತು. ಸುಮಾರು 81 ಜನರು ಶಿಬಿರದಲ್ಲಿ ಪಾಲ್ಗೊಂಡಿದ್ದು, ಪರೀಕ್ಷೆ ನಡೆಸಲಾಯಿತ್ತು.

### ಫಲಿತಾಂಶ ಹೆಚ್ಚಳಕ್ಕೆ ಪ್ರಯತ್ನ

• ಉದಯವಾಹಿನಿ ಬಾದಾಮಿ

ಎಸ್.ಎಸ್.ಎಲ್.ಸಿ.ಫಲಿತಾಂಶ ವೃದ್ಧಿಸಲು ಶಿಕ್ಷಣ ಇಲಾಖೆಯು ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದು, ಶತಾಯ ಗತಾಯ ಜಿಲ್ಲೆಗೆ ಮತ್ತು ರಾಜ್ಯಕ್ಕೆ ಬಾದಾಮಿ ತಾಲ್ಲೂಕು ಮೊದಲ ಸ್ಥಾನದಲ್ಲಿ ತರಲು ಶಿಕ್ಷಣ ಇಲಾಖೆಯ ತಂಡ ಶಕ್ತಿ ಮೀರಿ ಪ್ರಯತ್ನ ಮಾಡುತ್ತಿದೆ. ಮನೆ ಮನೆಗೆ ಭೇಟಿ, ಸಂಜೆ ಹೆಚ್ಚುವರಿ ತರಗತಿ ನಡೆಸುವುದು, ಅಧ್ಯಯನ ಮಾಡಲು ಪ್ರೇರೆಪಿಸುವುದು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇದಕ್ಕೆ ಪೂರಕವಾಗಿ ತಾಲ್ಲೂಕಿನ ಆಡಗಲ್ ಗ್ರಾಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕೇಶವ ವಾಮನ ಪೆಟ್ಲೂರ ಸೇರಿದಂತೆ ಶಿಕ್ಷಣ ಇಲಾಖೆಯ ತಂಡ ಎಸ್.ಎಸ್. ಎಲ್. ಸಿ. ಎನ್. ಸಿ. ಹಾಗೂ ಪರೀಕ್ಷೆಗೆ ಗೈರು ಹಾಜರಿ ಮಕ್ಕಳ ಮನೆಗೆ ಭೇಟಿ ನೀಡಿ ಸತತ ಶಾಲೆಗೆ ಬರುವಂತೆ, ಚೆನ್ನಾಗಿ ಅಧ್ಯಯನ ಮಾಡಲು ಮಕ್ಕಳ ಮನವೊಲಿಸಿದರು. ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಓದುವ ವಯಸ್ಸಿನಲ್ಲಿ ಚೆನ್ನಾಗಿ ಓದಿ ಜೀವನ ರೂಪಿಸಿಕೊಳ್ಳಿರಿ ಎಂದು ಮಕ್ಕಳಿಗೆ ಸಲಹೆ ನೀಡಿದರು. ಬಿಇಒ ಕಚೇರಿಯ ದೈಹಿಕ ಶಿಕ್ಷಣ ಪರಿವೀಕ್ಷಕ ಬಿ.ಎಚ್.ಹಳಗೇರಿ, ಮುಖ್ಯಶಿಕ್ಷಕ ಬಸವರಾಜ ಅಂಗಡಿ, ಇದ್ದರು.

### ಬಾಗಲಕೋಟೆಯಲ್ಲಿ 28ವರೆಗೆ ನಿಷೇಧಾಜ್ಞೆ

• ಉದಯವಾಹಿನಿ ಬಾಗಲಕೋಟೆ

ಮೂರು ದಿನಗಳಿಂದ ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ. ವ್ಯಾಪಾರ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ನವನಗರ, ವಿದ್ಯಾಗಿರಿಯಲ್ಲಿನ ನಿಷೇಧಾಜ್ಞೆ ವಾಪಸ್ ಪಡೆಯಲಾಗಿದೆ. ಬಾಗಲಕೋಟೆಯಲ್ಲಿ ಮಾತ್ರ ಫೆ.28ರವರೆಗೆ ಮುಂದುವರಿಯಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠ ಸಿದ್ದಾರ್ಥ ಗೋಯಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಜಾಲತಾಣದಲ್ಲಿ ಕೆಲವು ಸಂಘಟನೆಗಳವರು ಫೆ.26ರಂದು ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ತಿಳಿಸಿರುತ್ತಾರೆ. ನಿಷೇಧಾಜ್ಞೆ ಇರುವುದರಿಂದ ಯಾವುದೇ ಪ್ರತಿಭಟನೆಗೆ ಅವಕಾಶ ಇರುವುದಿಲ್ಲ ಎಂದರು. ಮುಂಬರುವ ಹೋಳಿ, ಯುಗಾದಿ ಹಾಗೂ ರಂಜಾನ್ ಹಬ್ಬಗಳನ್ನು ಗಮನದಲ್ಲಿಟ್ಟುಕೊಂಡು ಯಾವುದೇ ಪ್ರತಿಭಟನೆಯನ್ನು ಮಾಡದೇ ಶಾಂತಿ ಕಾಪಾಡಲು ಸಹಕರಿಸಬೇಕು. ಪ್ರತಿಭಟನೆ ಕೈಗೊಂಡು ನಗರದಲ್ಲಿ ಅಶಾಂತಿ ಸೃಷ್ಟಿಯಾದರೆ ಸಂಘಟಕರನ್ನೇ ಹೊಣೆಗಾರರನ್ನಾಗಿಸಿ ಕ್ರಮಕ್ಕೆಗೊಳ್ಳಲಾಗುವುದು ಎಂದರು. ಘಟನೆಗೆ ಸಂಬಂಧಿಸಿದಂತೆ ಮೂರು ಪ್ರಕರಣಗಳನ್ನು ದಾಖಲಿಸಿಕೊಂಡು, ಕೆಲವರನ್ನೂ ಈಗಾಗಲೇ ಬಂಧಿಸಲಾಗಿದೆ. ಸಾಕ್ಷಿ ಆಧರಿಸಿ ತನಿಖೆ ಮುಂದುವರಿಸಲಾಗಿದೆ. ಯಾವುದೇ ಸಮುದಾಯ ನೋಡದೇ ತಪ್ಪು ಮಾಡಿದವರನ್ನು ಬಂಧಿಸಲಾಗುವುದು. ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ ಎಂದು ಹೇಳಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 12:00 ರಿಂದ 01:30 |
| ಗುಳಿಕ ಕಾಲ | ಬೆಳಿಗ್ಗೆ | 10:30 ರಿಂದ 12:00 |
| ಯಮಗಂಡ ಕಾಲ | ಬೆಳಿಗ್ಗೆ | 07:30 ರಿಂದ 09:00 |

**ಮೇಷ** ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ.

**ವೃಷಭ** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯೆಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ಮಿಥುನ** ಕೆಲವರು ನಿಮಗೆ ಏನನ್ನಾದರೂ ಕಲಿಯಲು ವಯಸ್ಸಾಗಿದೆಯೆಂದು ಭಾವಿಸಬಹುದು. ಆದರೆ ಅದು ನಿಜವಲ್ಲ – ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ.

**ಕರ್ಕಾಟಕ** ಪ್ರೀತಿಯ ವ್ಯವಹಾರಗಳಲ್ಲಿ ಬಲವಂತ ಮಾಡುವುದನ್ನು ತಪ್ಪಿಸಿ. ಸಣ್ಣ ವ್ಯಾಪಾರ ಮಾಡುವ ಈ ರಾಶಿಚಕ್ರದ ಜನರಿಗೆ ನಷ್ಟವಾಗಬಹುದು. ಆದಾಗ್ಯೂ ನೀವು ಚಿಂತಿಸಬೇಕಾಗಿಲ್ಲ.

**ಸಿಂಹ** ಒಬ್ಬ ಸ್ನೇಹಿತ ನಿಮ್ಮ ಮುಕ್ತ ಮನಸ್ಸನ್ನು ಪರೀಕ್ಷಿಸಬಹುದು. ನಿಮ್ಮ ಮೌಲ್ಯಗಳೊಂದಿಗೆ ರಾಜಿಯಾಗದಿರುವಂತೆ ಮತ್ತು ಸಕಾರಣವಾದ ನಿರ್ಧಾರಗಳನ್ನು ಕೈಗೊಳ್ಳುವಂತೆ ಎಚ್ಚರಿಕೆ ವಹಿಸಬೇಕು.

**ಕನ್ಯಾ** ನೀವು ಬಯಸುವ ಲ್ಲಾಗಮನವನ್ನೂ ನೀವು ಪಡೆಯುವ ಒಳ್ಳೆಯ ದಿನ, ನಿಮ್ಮ ಮನಸ್ಸಿನಲ್ಲಿ ಅನೇಕ ವಿಷಯಗಳಿರುತ್ತವೆ ಹಾಗೂ ನೀವು ಯಾವುದನ್ನು ಅನುಸರಿಸಬೇಕೆನ್ನುವ ಸಮಸ್ಯೆ ಹೊಂದಿರುತ್ತೀರಿ.

**ತುಲಾ** ಕೆಲಸದ ಒತ್ತಡ ಇಂದು ಸ್ವಲ್ಪ ಒತ್ತಡ ತರಬಹುದು. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು.

**ವೃಶ್ಚಿಕ** ನಿಮ್ಮ ಹಠಮಾರಿ ಧೋರಣೆ ಕೇವಲ ಸಮಯ ವ್ಯರ್ಥವಾದದ್ದರಿಂದ ಅದನ್ನು ನಿಮ್ಮ ಸಂತೋಷದ ಜೀವನದ ಸಲುವಾಗಿ ತೊರೆದುಬಿಡಿ. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು.

**ಧನಸ್ಸು** ಹೆಚ್ಚು ಆಶಾವಾದಿಗಳಾಗಿರಲು ನಿಮ್ಮನ್ನು ನೀವೇ ಪ್ರೇರೇಪಿಸಿಕೊಳ್ಳಿ. ಇದು ವಿಶ್ವಾಸ, ನಮ್ಯತೆಯನ್ನು ಹೆಚ್ಚಿಸುತ್ತದಾದರೂ ಅದೇ ಸಮಯದಲ್ಲಿ ದ್ವೇಷ, ಸೇಡಿನಂಥ ನಕಾರಾತ್ಮಕ ಭಾವನೆಗಳನ್ನು ಹಿಂದೆ ಬಿಡಲು ಸಿದ್ಧವಾಗಿ.

**ಮಕರ** ನಿಮ್ಮ ನಗು ಖಿನ್ನತೆಯ ವಿರುದ್ಧ ಕೆಲಸ ಮಾಡುತ್ತದೆ. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಾಭವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ. ಇದರಿಂದ ನೀವು ತುಂಬಾ ಸಂತೋಷಪಡುತ್ತೀರಿ.

**ಕುಂಭ** ಇಂದು ನೀವು ನಿಮ್ಮ ಸಂಗಾತಿ ನಿಮ್ಮ ಹುಟ್ಟುಹಬ್ಬವನ್ನು ಮರೆತಂಥ ಹಳೆಯ ವಿಷಯದ ಬಗ್ಗೆ ಜಗಳವಾಡಬಹುದು. ಆದರೆ ಕೊನೆಗೆ ಎಲ್ಲವೂ ಸರಿಹೋಗುತ್ತದೆ.

**ಮೀನ** ಬೆಂಬಲ ನೀಡುವ ಸ್ನೇಹಿತರು ನಿಮ್ಮನ್ನು ಸಂತೋಷವಾಗಿರಿಸುತ್ತಾರೆ. ನೀವು ನಿಮ್ಮ ಹೂಡಿಕೆಗಳನ್ನು ಸಂಪ್ರದಾಯಬದ್ಧವಾಗಿ ಉಳಿತಾಯ ಮಾಡಿದರೆ ಹಣ ಮಾಡುತ್ತೀರಿ.

## ಪರಿಶಿಷ್ಟ ಜಾತಿ ಬಲಗೈ ಸಮುದಾಯಕ್ಕೆ ಆಗಿರುವ ಅನ್ಯಾಯ ಖಂಡಿಸಿ ಪ್ರತಿಭಟನೆ

• ಉದಯವಾಹಿನಿ, ಹುಮನಾಬಾದ್

ಪರಿಶಿಷ್ಟ ಜಾತಿ ಒಳಮೀಸಲಾತಿಯಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದು ಆರೋಪಿಸಿ ಹುಮನಾಬಾದ್ ಬಂದ್‌ಗೆ ಕರೆ ನೀಡಲಾಗಿದ್ದು, ಬಹುತೇಕ ಎಲ್ಲಾ ಅಂಗಡಿ -ಮುಂಗಟ್ಟುಗಳು ಮುಚ್ಚಲ್ಪಟ್ಟವು. ಈ ಹಿನ್ನೆಲೆಯಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನಾ ರ್‍ಯಾಲಿ ನಡೆಯಿತು.

ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ, ಒಳಮೀಸಲಾತಿ ಪದ್ಧತಿಯಲ್ಲಿ ಬದಲಾವಣೆ ತರಬೇಕು ಎಂದು ಘೋಷಣೆಗಳನ್ನು ಕೂಗಲಾಯಿತು. ಬಳಿಕ ತಹಶೀಲ್ದಾರ್ ಮುಖಾಂತರ ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಒಳಮೀಸಲಾತಿಯ ರೋಸ್ಟರ್ ಸಿದ್ಧಪಡಿಸುವಾಗ ಸಮತೋಲನ ಕಾಪಾಡದಿದ್ದರೆ ಪರಿಶಿಷ್ಟ ಜಾತಿಗಳ ನೇಮಕಾತಿಯಲ್ಲಿ ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಸಮುದಾಯಗಳು ಸಂಪೂರ್ಣವಾಗಿ ಅವಕಾಶದಿಂದ


ಉದಯವಾಹಿನಿ ಚಿತ್ರ

ವಂಚಿತರಾಗುವ ಅಪಾಯವಿದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ವರ್ಗಗಳಲ್ಲಿ ಹೆಚ್ಚು ಅಂಕ ಪಡೆದ ಹಾಗೂ ಅರ್ಹ ಅಭ್ಯರ್ಥಿಗಳು ಇದ್ದರೂ ಅವರಿಗೆ ಸ್ಪರ್ಧಿಸಲು ಅವಕಾಶ ಸಿಗದಿದ್ದರೆ ಅದನ್ನು ಸಾಮಾಜಿಕ ನ್ಯಾಯವೆಂದು ಹೇಳಲಾಗುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಲಾಗಿದೆ. ಮೀಸಲಾತಿಯ ಉದ್ದೇಶವು ಸಮಾನ ಅವಕಾಶ ಕಲ್ಪಿಸುವುದಾಗಿದ್ದು, ಪ್ರವರ್ಗ-ಬಿಮತ್ತು ಪ್ರವರ್ಗ-ಸಿ ಸಮುದಾಯಗಳಿಗೆ ಅನ್ಯಾಯವಾಗುವ ಒಳಮೀಸಲಾತಿ ಕಾಯ್ದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ಹಿಂದಕ್ಕೆ ಕಳುಹಿಸಬೇಕು ಎಂದು ಆಗ್ರಹಿಸಲಾಗಿದೆ.

ಪ್ರವರ್ಗ-ಎ, ಬಿ, ಸಿ ಸಮುದಾಯಗಳಿಗೆ ಸಮಾನ ಅವಕಾಶ ಒದಗಿಸುವ ಹೊಸ ಕಾಯ್ದೆ ರೂಪಿಸಬೇಕು. ಒಳಮೀಸಲಾತಿಗೆ ಅನ್ವಯಿಸುವ ರೋಸ್ಟರ್ ಬಿಂದುವನ್ನು ಪರಿಷ್ಕರಿಸಬೇಕು. ಶಿಕ್ಷಣ ಮತ್ತು ಉದ್ಯೋಗ ಕ್ಷೇತ್ರಗಳಲ್ಲಿ ಇರುವ ಗೊಂದಲ ಪರಿಹಾರವಾಗುವ ತನಕ ಪ್ರಸ್ತುತ ಒಳಮೀಸಲಾತಿ ಕಾರ್ಯಚಟುವಟಿಕೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕು. ಹೊಸ ಜಾತಿ ಪ್ರಮಾಣ ಪತ್ರ ವಿತರಣೆಯನ್ನು ತುರ್ತಾಗಿ ನಿಲ್ಲಿಸಿ, ಹಳೆಯ ಪ್ರಮಾಣ ಪತ್ರಗಳನ್ನು ಮುಂದುವರಿಸಬೇಕು. ಸಮಸ್ಯೆ ಪರಿಹಾರವಾಗುವ ತನಕ ಹಳೆಯ ಮೀಸಲಾತಿ ಆಧಾರದಲ್ಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಪ್ರತಿಭಟನೆಯಲ್ಲಿ ಒತಾಯಿಸಿದರು.

### ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿಕೆ

## ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ಶಕ್ತಿ

• ಉದಯವಾಹಿನಿ, ಚಿಕ್ಕಮಗಳೂರು

ಪಂಚ ಗ್ಯಾರಂಟಿ ಯೋಜನೆಗಳು ಕೇವಲ ಭರವಸೆಗಳಾಗಿ ಉಳಿಯದೆ ನಾಡಿನ ಆರ್ಥಿಕತೆಯ ಗತಿಯನ್ನೇ ಬದಲಿಸಿವೆ. ಗ್ಯಾರಂಟಿ ಯೋಜನೆಗಳು ರಾಜ್ಯದ ಆರ್ಥಿಕ ಶಕ್ತಿ ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಹೇಳಿದರು. ನಗರದ ಕುವೆಂಪು ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ವತಿಯಿಂದ ಆಯೋಜಿಸಿದ್ದ ಪಂಚ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರವು ಬಜೆಟ್ ಗಾತ್ರವನ್ನು ರೂ. 2.5 ಲಕ್ಷ ಕೋಟಿಯಿಂದ ರೂ.4.09 ಲಕ್ಷ ಕೋಟಿಗೆ ಏರಿಸಿದೆ. ಆ ಮೂಲಕ ಐತಿಹಾಸಿಕ ಸಾಧನೆ ಮಾಡಿದೆ. ವಿಶ್ವಸಂಸ್ಥೆಯ ಉನ್ನತ ಅಧಿಕಾರಿಗಳೇ ಕರ್ನಾಟಕಕ್ಕೆ ಭೇಟಿ ನೀಡಿ ಇಲ್ಲಿನ ಅಭಿವೃದ್ಧಿ ಮಾದರಿಯನ್ನು, ವಿಶೇಷವಾಗಿ ಮಹಿಳಾ ಸಬಲೀಕರಣ ಮತ್ತು ಉದ್ಯೋಗ ಸೃಷ್ಟಿಯ ವಿಷಯವನ್ನು ಮುಕ್ತವಾಗಿ ಶ್ಲಾಘಿಸಿದ್ದಾರೆ ಎಂದು ಅವರು ತಿಳಿಸಿದರು.

**ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಕಾರ್ಯಾಗಾರ**

ಶಕ್ತಿ ಯೋಜನೆ ಮತ್ತು ಗೃಹಲಕ್ಷ್ಮಿ ಯೋಜನೆಗಳ ಮೂಲಕ ಮಹಿಳೆಯರು ಆರ್ಥಿಕವಾಗಿ ಸ್ವತಂತ್ರರಾಗುತ್ತಿದ್ದಾರೆ. ಉಚಿತ ಬಸ್ ಪ್ರಯಾಣವು ಅವರ ಕೆಲಸದ ಅವಕಾಶಗಳನ್ನು ಹೆಚ್ಚಿಸಿದೆ ಎಂಬುದು ಹೆಮ್ಮೆಯ ವಿಷಯ ಎಂದು ಅವರು ಅಭಿಪ್ರಾಯಪಟ್ಟರು. ರಾಜ್ಯದಲ್ಲಿ 1,46,056 ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ 1,664 ಮರಣ ಹೊಂದಿರುವವರ ಖಾತೆಗಳಿಗೆ ಗೃಹಲಕ್ಷ್ಮಿ ಹಣ ಜಮೆಯಾಗಿದ್ದು, ಅವುಗಳನ್ನು ವಾಪಸ್ ಪಡೆಯಲು ಕ್ರಮವಹಿಸಲಾಗುತ್ತಿದೆ ಎಂದು ತಿಳಿಸಿದರು. ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಗ್ಯಾರಂಟಿಗಳು ಕುರಿತು ಉಪನ್ಯಾಸ ನೀಡಿದ ಜಾಗೃತ ಕರ್ನಾಟಕ ಸಂಚಾಲಕ ಎಚ್.ವಿ.ವಾಸು, ರಾಜ್ಯ ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳಿಗಾಗಿ ಒಟ್ಟು ರೂ.1.16 ಲಕ್ಷ ಕೋಟಿ ವ್ಯಯಿಸಿದೆ. ಈ ಬೃಹತ್ ಮೊತ್ತವನ್ನು ನೇರವಾಗಿ ಮಹಿಳೆಯರು ಮತ್ತು ಯುವಜನರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುವ ಮೂಲಕ ಜನಸಾಮಾನ್ಯರ ಆರ್ಥಿಕ ಸ್ಥಿತಿ ಬಲಪಡಿಸಲಾಗಿದೆ ಎಂದರು. ಈ ಗ್ಯಾರಂಟಿಗಳು ಜಾರಿಯಾಗುವುದಿಲ್ಲ ಅಥವಾ ಚುನಾವಣೆಯ ನಂತರ ನಿಂತು ಹೋಗುತ್ತವೆ ಎಂಬ ವದಂತಿ ಹಬ್ಬಿಸಲಾಗಿತ್ತು. ಆದರೆ ಅದು ಸುಳ್ಳಾಗಿವೆ ಮತ್ತು ಮುಂಬರುವ ಬಜೆಟ್‌ನಲ್ಲಿಯೂ ಇವು ಮುಂದುವರಿಯಲಿವೆ ಎಂದು ಸ್ಪಷ್ಟಪಡಿಸಿದರು.

ಈ ಯೋಜನೆಗಳಿಂದ ರಾಜ್ಯ ದಿವಾಳಿಯಾಗುತ್ತದೆ ಎಂಬ ಟೀಕೆಗಳಿದ್ದವು. ಜನರ ಕೈಗೆ ಹಣ ಮತ್ತು ಉಚಿತ


ಉದಯವಾಹಿನಿ ಚಿತ್ರ

### ಯಜಮಾನಿಯರ ಖಾತೆಗೆ ರೂ.1319 ಕೋಟಿ

**ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಅತ್ಯಂತ ಯಶಸ್ವಿಯಾಗಿ ಅನುಷ್ಠಾನಗೊಳ್ಳುತ್ತಿವೆ. ಗೃಹಲಕ್ಷ್ಮಿ ಯೋಜನೆಯು ಜಿಲ್ಲೆಯಲ್ಲಿ ಕ್ರಾಂತಿಕಾರಿ ಬದಲಾವಣೆ ತಂದಿದ್ದು ಈವರೆಗೆ ಒಟ್ಟು ರೂ.1319 ಕೋಟಿಯನ್ನು ಮಹಿಳಾ ಯಜಮಾನಿಯರ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ ಎಂದು ಪ್ರಾಧಿಕಾರದ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಸಿ.ಶಿವಾನಂದಸ್ವಾಮಿ ಹೇಳಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅವರು 'ಜಿಲ್ಲೆಯ ಸುಮಾರು 3 ಲಕ್ಷ ಮನೆಗಳ ಪೈಕಿ 262428 ಮಹಿಳಾ ಯಜಮಾನಿಯರು ಪ್ರತಿ ತಿಂಗಳು ಈ ಯೋಜನೆಯ ಲಾಭ ಪಡೆಯುತ್ತಿದ್ದಾರೆ. ಪ್ರತಿ ತಿಂಗಳು ಸರಾಸರಿ ರೂ.52.45 ಕೋಟಿಯನ್ನು ಜಿಲ್ಲೆಯ ಮಹಿಳೆಯರ ಕೈ ಸೇರುತ್ತಿವೆ. ತಾಂತ್ರಿಕ ಕಾರಣಗಳಿಂದ ಹಣ ಸಂದಾಯವಾಗದ ಪ್ರಕರಣಗಳನ್ನು ಪರಿಹರಿಸಲು ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ಭೇಟಿ ನೀಡಿ ನೆರವಾಗುತ್ತಿದ್ದಾರೆ ಎಂದರು. ಶಕ್ತಿ ಯೋಜನೆಯಡಿ ಜಿಲ್ಲೆಯ ಆರು ಡಿಪೋಗಳ ಮೂಲಕ ಈವರೆಗೆ ಮಹಿಳೆಯರು ಒಟ್ಟು 5 ಕೋಟಿ 95 ಲಕ್ಷ ಬಾರಿ ಉಚಿತವಾಗಿ ಪ್ರಯಾಣಿಸಿದ್ದಾರೆ. ಈ ಯೋಜನೆಯ ಯಶಸ್ವಿ ನಿರ್ವಹಣೆಗಾಗಿ ಸರ್ಕಾರವು ಕೆಎಸ್‌ಆರ್‌ಟಿಸಿಗೆ ರೂ.231 ಕೋಟಿ ಅನುದಾನ ನೀಡಿದೆ. ಪ್ರಯಾಣಿಕರ ಅನುಕೂಲಕ್ಕಾಗಿ ಜಿಲ್ಲೆಯ ವಿವಿಧ ಕ್ಷೇತ್ರಗಳಲ್ಲಿ ರೂ.11 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಬಸ್ ನಿಲ್ದಾಣ ನಿರ್ಮಿಸಲಾಗಿದೆ ಎಂದರು.**

## ಇನಾಂ ಭೂಮಿ ಅಕ್ರಮ ನೋಂದಣಿ ತಡೆಯಲು ಮನವಿ

• ಉದಯವಾಹಿನಿ, ಬಳ್ಳಾರಿ

ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಹಳೇಕೋಟೆ ಮತ್ತು ಸಿರಿಗೇರಿ ಗ್ರಾಮಗಳಲ್ಲಿ ನೂರಾರು ಎಕರೆ ಜಮೀನನ್ನು ಅಕ್ರಮವಾಗಿ ಭೂಗಳ್ಳರು ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳುತ್ತಿರುವುದನ್ನು ತಡೆಯಬೇಕು. ಇದಕ್ಕೆ ಸಹಕರಿಸುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕರ್ನಾಟಕ ಪ್ರಾಂತ ರೈತ ಸಂಘದಿಂದ ನಗರದ ಡಿಸಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸಲಾಯ್ತು. ಸಿರುಗುಪ್ಪ ಸಬ್ ರಿಜಿಸ್ಟರ್ ಯಲ್ಲಾರೆಡ್ಡಿ ಅವರು 50 ಕೋಟಿ ಬೆಲೆ ಬಾಳುವ 130 ಎಕರೆ ಸರ್ಕಾರಿ ಇನಾಂ ಜಮೀನನ್ನು ಕಾನೂನು ಬಾಹಿರವಾಗಿ ನೊಂದಣಿ ಮಾಡಿರುವುದರಿಂದ ಅವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹಾಕಬೇಕು. ಈ ಕೃಷಿ ಜಮೀನನ್ನು ಸರ್ಕಾರಕ್ಕೆ ಹಿಂಪಡೆದು ಬಡ-ಎಸ್.ಸಿ ಎಸ್.ಟಿ ಕುಟುಂಬಗಳಿಗೆ ಸಾಗುವಳಿ ಮಾಡುವುವವರೆಗೆ, ಮಾಜಿ ಸೈನಿಕರಿಗೆ ಭೂಮಿ ಮಂಜೂರು ಮಾಡಬೇಕು. ಹಿಂದಿನ ತಹಶೀಲ್ದಾರರು ಹಾಗೂ ಎ.ಸಿ ಅವರು ಈ 130 ಎಕರೆ ಜಮೀನನ್ನು ಸರ್ಕಾರಕ್ಕೆ ವಾಪಸು ಪಡೆಯಲು ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿ 2 ವರ್ಷ ಆದರೂ ಇಲ್ಲಿಯ ವರಿಗೂ ಭೂಗಳ್ಳರ ಆಮಿಷಕ್ಕೆ ಒಳಗಾಗಿ ಈ ಕೆಲಸ ಆಗಿಲ್ಲ ಎಂದು ಆರೋಪಿಸಿದ್ದಾರೆ. ಮನವಿಯನ್ನು ಸಂಘದ ಮುಖಂಡ ವಿ.ಎಸ್.ಶಿವಶಂಕರ್ ಮೊದಲಾದವರು ಸಲ್ಲಿಸಿದ್ದಾರೆ.

## ಇಲೆಕ್ಟ್ರಿಕ್ ಬಸ್‌ಗಳ ಸಂಚಾರಕ್ಕೆ ಸಿದ್ಧತೆ

• ಉದಯವಾಹಿನಿ, ಮಂಗಳೂರು

ಕೇಂದ್ರ ಸರಕಾರವು ಪ್ರಧಾನಮಂತ್ರಿ ಇ-ಬಸ್ ಸೇವಾ ಯೋಜನೆಯಡಿ ರಾಜ್ಯಕ್ಕೆ 750 ಹೊಸ ಇಲೆಕ್ಟ್ರಿಕ್ ಬಸ್‌ಗಳನ್ನು ಮಂಜೂರು ಮಾಡಿರುವ ಮಧ್ಯೆಯೇ ಖಾಸಗಿಯವರು ಕೂಡ ಇವಿ ಬಸ್ ವ್ಯವಸ್ಥೆಗೆ ಚಿಂತನೆ ನಡೆಸಿದ್ದಾರೆ. ಅದರಲ್ಲೂ ಮಂಗಳೂರಿನಲ್ಲಿ ಸರಕಾರಿ ಇವಿ ಬಸ್‌ಗಳಲ್ಲದೆ ಖಾಸಗಿ ಇವಿ ಬಸ್‌ಗಳು ಓಡಾಡಲು ಸಿದ್ಧತೆ ನಡೆಸಿದೆ.

ವಾಹನಗಳಿಂದ ದೇಶಾದ್ಯಂತ ಆಗುತ್ತಿರುವ ವಾಯುಮಾಲಿನ್ಯವನ್ನು ತಡೆಗಟ್ಟುವ ಸಲುವಾಗಿ ಕೇಂದ್ರ ಸರಕಾರವು ದೇಶದೆಲ್ಲೆಡೆ ಇಲೆಕ್ಟ್ರಿಕ್ ಬಸ್‌ಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಲಾರಂಭಿಸಿದೆ. ಅದರಂತೆ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ರಾಜ್ಯಕ್ಕೆ 750 ಇಲೆಕ್ಟ್ರಿಕಲ್ ಬಸ್‌ಗಳನ್ನು ಮಂಜೂರುಗೊಳಿಸಿದೆ. ಆ ಪೈಕಿ ಮಂಗಳೂರಿಗೆ 100 ಬಸ್‌ಗಳು ಬರುವ ಸಾಧ್ಯತೆ ಇದೆ. ಈ ಬಸ್‌ಗಳಿಗೆ ಕುಂಟಿಕಾನ ಕೆಎಸ್‌ಆರ್‌ಟಿಸಿ ಡಿಪೋ ಮತ್ತು ಬಿಜೈ ಬಸ್ ನಿಲ್ದಾಣದಲ್ಲಿ ಚಾರ್ಜಿಂಗ್ ಪಾಯಿಂಟ್‌ಗೆ ಮೆಸ್ಕಾಂ ಹಾಗೂ ಕೆಪಿಟಿಸಿಎಲ್ ಅನುಮೋದನೆ ನೀಡಿದೆ.

## ಪಾಠದ ಜೊತೆಗೆ ಆಟವೂ ಮುಖ್ಯ

• ಉದಯವಾಹಿನಿ, ಮುನವಳ್ಳಿ

ಪಟ್ಟಣದ ಐತಿಹಾಸಿಕ ಶ್ರೀ ಪಂಚಲಿಂಗೇಶ್ವರ ಜಾತ್ರಾ ಮಹೋತ್ಸವ ಶತಮಾನೋತ್ಸವ ಅಂಗವಾಗಿ ರಾಜ್ಯ ಮಟ್ಟದ ಹೊನಲು ಬೆಳಕಿನ ವಾಲಿಬಾಲ ಪಂದ್ಯಾವಳಿ ಜರುಗಿತು. ವಾಲಿಬಾಲ್ ಪಂದ್ಯಾವಳಿ ಉದ್ಘಾಟಿಸಿ ಜಾತ್ರಾ ಉತ್ಸವ ಸಮಿತಿ ಅಧ್ಯಕ್ಷ ಅಂಬರೀಷ ಯಲಿಗಾರ ಮಾತನಾಡಿ ಪಾಠದ ಜೊತೆಗೆ ಆಟವು ಮುಖ್ಯ ಯುವಕರು ಗ್ರಾಮಿಣ ಬಾಗದಲ್ಲಿ ಜರಗುವ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವದು ಮುಖ್ಯ, ಜಾತ್ರೆ ಹಬ್ಬಗಳು ನಮಗೆ ಸಂಸ್ಕೃತಿ ಸಂಸ್ಕಾರ ತಿಳಿಸುವುದರ ಜೊತೆಗೆ ಒಟ್ಟಿಗೆ ಬಾಳುವ ಸಂದೇಶವನ್ನು ನೀಡುತ್ತವೆ ಎಂದರು.

ಸೋಮಶೇಖರ ಮಠದ ಮುರುಘೇಂದ್ರ ಶ್ರೀಗಳು ಸಾನಿಧ್ಯವಹಿಸಿ ಆಶೀರ್ವಚನದಲ್ಲಿ ಟಿವಿ ಹಾಗೂ ಮೊಬೈಲ ಯುಗದಲ್ಲಿ ಗ್ರಾಮಿಣ ಮಟ್ಟದ ಆಟಗಳು ಕಣ್ಮರೇ ಆಗುತ್ತಿವೆ. ಇಂತಹ ಜಾತ್ರೆಗಳಲ್ಲಿ ವಿವಿಧ ಗ್ರಾಮಿಣ ಆಟಗಳನ್ನು ಆಡಿಸುವ ಮೂಲಕ ಜಾತ್ರೆಗೆ ಮೆರಗು ಬರುತ್ತದೆ. ಯುವಕರು ಇಂತಹ ಆಟಗಳಲ್ಲಿ ಹೆಚ್ಚಿನಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ದೇಹದ ಸದೃಡತೆಯನ್ನು ಕಾಪಿಡಿಕೊಳ್ಳಬೇಕು ಎಂದರು.

## ರೈತ-ಕೃಷಿ ಕೂಲಿಕಾರರ ವಿವಿಧ ಬೇಡಿಕೆಗಳು ಈಡೇರಿಸುವಂತೆ ಮನವಿ

• ಉದಯವಾಹಿನಿ,ಚಿಂಚೋಳಿ

ಬಡ ಫಲಾನುಭವಿಗಳಿಗೆ ಭೂಮಂಜೂರಾತಿ ನೀಡಿ ಪಟ್ಟ ಮಾಡಿ ಕೊಡಬೇಕು,ಮಹಾತ್ಮಾ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ತಾಲ್ಲೂಕಿನ ಲ್ಯಾಂಡ್ ಗ್ರ್ಯಾಂಡ್ ಸಮಿತಿ ರಚನೆ ಸೇರಿದಂತೆ ವಿವಿಧ ಬೇಡಿಕೆಗಳು ಈಡೇರಿಸುವಂತೆ ಕರ್ನಾಟಕ ಕೃಷಿ ಗ್ರಾಮೀಣ ಕೂಲಿ ಕಾರ್ಮಿಕರ ತಾಲ್ಲೂಕಾ ಸಂಘದ ವತಿಯಿಂದ ಒತ್ತಾಯಿಸಿ ತಹಶೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿಪತ್ರ ಸಲ್ಲಿಸಿದರು.

ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ ಮಾತನಾಡಿ ತಾಲ್ಲೂಕಿನಲ್ಲಿ ಕೂಡಲೇ ಲ್ಯಾಂಡ್ ಗ್ರ್ಯಾಂಡ್ ಕಮಿಟಿ ರಚಿಸಿ ಸರ್ಕಾರಿ ಭೂಮಿ ಸಾಗುವಳಿ ಮಾಡುತ್ತಿದ್ದ ಎಲ್ಲಾ ಬಡದವರಿಗೆ ಪಟ್ಟಾ ಕೊಡಬೇಕು,ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರ ರದ್ದುಪಡಿಸಿ ನೂತನವಾಗಿ ಜೀ ರಾಮಜೀ ಕಾಯ್ದೆ ಜಾರಿಗೆ ಮಾಡಿದ್ದು ಇದನ್ನು ರದ್ದುಪಡಿಸಿ ಹಳೆಯ ಯೋಜನೆ ಜಾರಿಗೆ ಮಾಡಿ 300ರಿಂದ 600ರೂ.ಗೆ ನಿಗಧಿಪಡಿಸಬೇಕು.


ಉದಯವಾಹಿನಿ ಚಿತ್ರ

ಬೆಳೆ ಪರಿಹಾರ ಸಿಗದೆ ಇರುವ ರೈತರಿಗೆ ಬೆಳೆ ಪರಿಹಾರ ನೀಡಿ ಬೆಳೆ ವಿಮೆ ಜಾರಿ ಮಾಡಬೇಕು, ದೇಶದ ಎಲ್ಲಾ ರೈತರ ಸಾಲಮನ್ನಾ ಮಾಡಬೇಕು, ಮನೆಯಿಲ್ಲದ ಬಡವರಿಗೆ ಮನೆ ವಿತರಿಸಬೇಕು, ದೇಗಲಮಡಿ ಗ್ರಾಮದ ಸರ್ವೆ ನಂಬರ 24ರಲ್ಲಿನ ಮನೆಯಿಲ್ಲದ ಬಡವರಿಗೆ ಮನೆಗಳು ವಿತರಿಸಬೇಕು ಎಂದು ಒತ್ತಾಯಿಸಿದರು. ಮಲ್ಲಮ್ಮ ಕೋಡ್ಲಿ, ಜಗದೇವಿ ಚಂದನಕೇರಾ, ಸಣಮಂತರಾವ ದೇಶಪಾಂಡೆ, ಭೀಮಶಾ ಕೊಡಂಪಳ್ಳಿ, ತುಳಜಪ್ಪ ರುಸ್ತಾಂಪುರ,ಮಾರುತಿ ಐನೋಳ್ಳಿ,ಖಾಜಾಮಿಯ್ಯ,ಪ್ರಭು ಯಂಪಳ್ಳಿ ಸೇರಿದಂತೆ ಅನೇಕರಿದ್ದರು.

## ತಾಂಡಾಗಳಲ್ಲಿ ಪೂಜಾರಿಗಳು ಭಕ್ತಿ, ಶ್ರದ್ಧೆ,ಸಂಸ್ಕೃತಿ, ಸಂಸ್ಕಾರದ ಮಾರ್ಗದರ್ಶನ ನೀಡಿ

• ಉದಯವಾಹಿನಿ, ಚಿಂಚೋಳಿ

ತಾಂಡಾಗಳಲ್ಲಿನ ದೇವಾಸ್ಥಾನಗಳ ಪೂಜಾರಿಗಳು ಭಕ್ತಿ ಶ್ರದ್ಧೆಯಿಂದ ನಡೆದುಕೊಂಡು ತಾಂಡಾಗಳ ಜನರಿಗೆ ಒಳ್ಳೆಯ ಸನ್ಮಾರ್ಗ ಭಕ್ತಿ ಶ್ರದ್ಧೆಯಿಂದ, ಧ್ಯಾನ ಮಾಡುವುದು ದುಶ್ಚಟಗಳಿಂದ ದೂರ ಇರುವುದು ಮಾರ್ಗದರ್ಶನ ನೀಡಬೇಕು ಎಂದು ಪೌರಾದೇವಿ ಪೀಠಾಧಿಪತಿ ಬಾಬುಸಿಂಗ್ ಮಹಾರಾಜರು ಸಲಹೆ ನೀಡಿದರು. ಪಟ್ಟಣದ ಚಂದಾಪೂರದ ಬಂಜಾರ ಭವನದ ಪಕ್ಕದ ಆವರಣದಲ್ಲಿ ಹಮ್ಮಿಕೊಂಡಿದ್ದ ತಾಲ್ಲೂಕಾ ಸಂತ ಸೇವಾಲಾಲ್ ಮಹಾರಾಜರ ಮತ್ತು ಜಗದಂಬಾದೇವಿ ಮಂದಿರಗಳ ಪೂಜಾರಿಗಳ ಸೇವಾ ಸಂಘವನ್ನು ಉದ್ಘಾಟಿಸಿ ಪದಾಧಿಕಾರಿಗಳ ನೇಮಕಾತಿ ಪತ್ರ ವಿತರಿಸಿ ಮಾತನಾಡಿದ ಅವರು,ಮೊದಲು ಪೂಜಾರಿಗಳು ಸತ್ಯ ಧರ್ಮ ನಿಷ್ಠೆಯಿಂದ ನಡೆದುಕೊಳ್ಳಬೇಕು. ತಾಂಡಾಗಳಲ್ಲಿ ವಾಸಿಸುವ ಜನರಿಗೆ ಒಳ್ಳೆಯ ಮಾರ್ಗದರ್ಶನ ನೀಡಿ ಸತ್ಯಧರ್ಮದ ಹಾದಿಯಲ್ಲಿ ನಡೆಯಲು ಸಲಹೆ ನೀಡಿ ದುಶ್ಚಟಗಳಿಂದ ದೂರವಿರಲು ಉತ್ತಮ ಗುಣಮಟ್ಟದ ಶಿಕ್ಷಣ ಪಡೆದುಕೊಳ್ಳುವಂತೆ ಯುವಕರಿಗೆ ಪಾಲಕರಿಗೆ ಮಾರ್ಗದರ್ಶನ ಮಾಡಬೇಕು. ಬರುವ ದಿನಗಳಲ್ಲಿ ಬಂಜಾರ ಜೋಡೋ ಅಭಿಯಾನ ಹಮ್ಮಿಕೊಂಡು


ಉದಯವಾಹಿನಿ ಚಿತ್ರ

ಬಂಜಾರ ಸಮಾಜಕ್ಕೆ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುವುದು ಅದರಂತೆ ತೆಲಂಗಾಣ ರಾಜ್ಯದಲ್ಲಿ ಪೂಜಾರಿಗಳಿಗೆ ವೇತನ ನೀಡುವ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿಯೂ ಕೂಡ ತಾಂಡಾಗಳ ಪೂಜಾರಿಗಳಿಗೆ ವೇತನ ನೀಡಬೇಕು ಎಂದು ಒತ್ತಾಯಿಸಿದರು. ನಿವೃತ್ತ ನ್ಯಾಯಾಧೀಶ ಸುಭಾಶ್ಚಂದ್ರ ರಾಠೋಡ, ಪರ್ವತಲಿಂಗ ಪರಮೇಶ್ವರ ಮಹಾರಾಜರು,ಬಂಜಾರ ಸಮಾಜ ಅಧ್ಯಕ್ಷ ರಾಮಶೇಟ್ಟಿ ಪವ್ಹಾರ ಮಾತನಾಡಿದರು,ಪಾಂಡು ಮಹಾರಾಜರು ಸ್ವಾಗತಿಸಿದರು,ತಾಂಡಾಗಳ ಪೂಜಾರಿಗಳ ಸಂಚಾಲಕ ಸಚಿನ್ ಚವ್ಹಾಣ ನಿರೂಪಿಸಿ ವಂದಿಸಿದರು.

ಕೊರವಿ ಕಾಳಿಕಾದೇವಿ ಸುಕ್ಷೇತ್ರದ ವಿಠ್ಠಲ ಮಹಾರಾಜರು,ಏಕನಾಥ ಮಹಾರಾಜರು,ರಾಜು ಮಹಾರಾಜರು,ಮೋತಿರಾಮ ರಾಠೋಡ,ಮೇಘರಾಜ ರಾಠೋಡ,ರಾಜು ಪವ್ಹಾರ,ಡಾ.ತುಕ್ಕಾರಾಮ ಪವ್ಹಾರ,ಗೋಪಾಲ ಜಾಧವ,ಕೆಎಂಬಾರಿ, ಶ್ರೀನಿವಾಸ್,ವಿನೋಧ ಚವ್ಹಾಣ, ಹೀರಾಸಿಂಗ್, ಗೋವಿಂದ ಚವ್ಹಾಣ, ಘೇಮು ರಾಠೋಡ,ಅನೇಕರಿದ್ದರು. ಇದಕ್ಕೂ ಮೊದಲು ಚಂದಾಪೂರದ ಡಾ.ರಾಮರಾವ ಮಹಾರಾಜರ ವೃತ್ತದಿಂದ ಬಂಜಾರ ಭವನದವರೆಗೆ ಪೌರಾದೇವಿ ಪೀಠಾಧಿಪತಿ ಬಾಬುಸಿಂಗ್ ಮಹಾರಾಜರಿಗೆ ಭವ್ಯ ಪಾದಯಾತ್ರೆ ಮೆರವಣಿಗೆ ನಡೆಸಲಾಯಿತು.

## ಉಚಿತ ಮಧುಮೇಹ ನಿವಾರಣಾ ಶಿಬಿರ

• ಉದಯವಾಹಿನಿ ಚಿತ್ರದುರ್ಗ

ಜಿಲ್ಲಾ ಆಯುಷ್ ಇಲಾಖೆ ಚಿತ್ರದುರ್ಗ, ಆರೋಗ್ಯ ಮತ್ತು ಕ್ಷೇಮ ಮಂದಿರ ಜೆ ಎನ್ ಕೋಟೆ ಇವರುಗಳ ಸಹಕಾರದಲ್ಲಿ ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ ಜೆ ಎನ್ ಕೋಟೆ ಇವರು ಆಯುಷ್ ಗ್ರಾಮ ಯೋಜನೆಯಡಿಯಲ್ಲಿ ತಾಲ್ಲೂಕಿನ ಪಲ್ಲವಗೆರೆ ಗ್ರಾಮದ ಗ್ರಾಮಸ್ಥರಿಗಾಗಿ ಉಚಿತ ಮಧುಮೇಹ ನಿಯಂತ್ರಣ ಚಿಕಿತ್ಸಾ ಶಿಬಿರ ಆಯೋಜಿಸಿದ್ದರು ಶಿಬಿರದಲ್ಲಿ ಮಧುಮೇಹದ ನಿಯಂತ್ರಣದ ಕೆಲವು ಪಥ್ಯ ಜೀವನಶೈಲಿ ಆಹಾರವಿಹಾರ, ವ್ಯಾಯಾಮ, ಯೋಗದ ಬಗ್ಗೆ ಸವಿಸ್ತಾರವಾಗಿ ತಿಳಿಸಿಕೊಡಲಾಯಿತು ಹಾಗೂ ವಿವಿಧ ರೀತಿಯ ಆಯುರ್ವೇದದ ಕಷಾಯ ಹಾಗೂ ದೇಹಗಳನ್ನು ತಯಾರಿಸುವ ವಿಧಾನ ಹಾಗೂ ತೆಗೆದುಕೊಳ್ಳುವ ಸಮಯ ಇತ್ಯಾದಿ ವಿವರಿಸಲಾಯಿತು ವಿವಿಧ ರಾಗಿ ಜೋಳದ ಸಜ್ಜೆ ನವಣೆ ರೆಡ್ರೈಸ್ ತರಕಾರಿ ಹಣ್ಣುಗಳು ಬಳಸಿ ಮಾಡಬಹುದಾದ ಗಂಜಿ ಕಿಚಡಿ


ಉದಯವಾಹಿನಿ ಚಿತ್ರ

ಪಲ್ಯ ಮುಂತಾದವುಗಳ ಬಗ್ಗೆ ಅರಿವು ಮೂಡಿಸಲಾಯಿತು. ರೋಗಿಗಳ ಆರೋಗ್ಯ ತಪಾಸಣೆ ಮಾಡಿ ಮಾತನಾಡಿದ ಜೆ ಎನ್ ಕೋಟೆ ಸಮುದಾಯ ಆರೋಗ್ಯಾಧಿಕಾರಿ ರಮೇಶ್ ಮಾತನಾಡಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವ ಜನರ ಆರೋಗ್ಯವು ದೇಶದ ಒಟ್ಟಾರೆ ಅಭಿವೃದ್ಧಿಗೆ ಅತ್ಯಂತ ಪ್ರಮುಖವಾಗಿದೆ ಶುದ್ಧ ಕುಡಿಯುವ ನೀರು ಮತ್ತು ಶೌಚಾಲಯ ಸೌಲಭ್ಯಗಳನ್ನು ಬಳಸುವ ಮೂಲಕ ಗ್ರಾಮದ ಸ್ವಚ್ಚತೆಯನ್ನು ಕಾಪಾಡಿಕೊಳ್ಳಬೇಕಿದೆ ಗ್ರಾಮೀಣ ಜನರು ಉಚಿತ ಆರೋಗ್ಯ ಶಿಬಿರಗಳ ಲಾಭ ಪಡೆಯುವುದು ಅತ್ಯಂತ ಅಗತ್ಯ. ಇಂತಹ ಶಿಬಿರಗಳ ಆರೋಗ್ಯ ಸೇವೆಗಳು ಆಸ್ಪತ್ರೆಗಳಿಂದ ದೂರವಾಗಿರುವ ಪ್ರದೇಶಗಳಿಗೆ ವರದಾನವಾಗಿದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಯೋಗ ಚಿಕಿತ್ಸಕ ರವಿ ಕೆ.ಅಂಬೇಕರ್ ಗ್ರಾಮಸ್ಥರಿಗೆ ಮಧುಮೇಹ ನಿಯಂತ್ರಿಸಬಲ್ಲ ಹಲವಾರು ಯೋಗಭ್ಯಾಸಗಳ ತರಬೇತಿ ನೀಡಿದರು.

ಶಿಬಿರದಲ್ಲಿ ಒಟ್ಟು 54 ಫಲಾನುಭವಿಗಳಿಗೆ ಚಿಕಿತ್ಸೆ ನೀಡಿ ಉಚಿತ ಔಷಧ ವಿತರಣೆ ಮಾಡಲಾಯಿತು.

## ಬಸವಣ್ಣನವರ ಪರಿಕಲ್ಪನೆ ಎತ್ತಿ ಹಿಡಿದವರು ಬೀದರ್ ಮಂದಿ

• ಉದಯವಾಹಿನಿ, ಬೀದರ್

ಬಸವಣ್ಣನವರ ಪರಿಕಲ್ಪನೆ ಎತ್ತಿ ಹಿಡಿದವರು ಕೇವಲ ಬಿದರ್ ಜನರು ಮಾತ್ರ. ಇವರ ಮುಗ್ದ ಸ್ವಭಾವ, ಸಹಕಾರ ಮನೋಭಾವ, ಇತರರ ಬಗ್ಗೆ ಇವರಿಗಿರುವ ಕಾಳಜಿ ಇಡೀ ನಾಡಿಗೆ ಮಾದರಿ ಪ್ರಾಯವಾಗಿದೆ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು. ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಬೀದರ್ ಜಿಲ್ಲಾ ಘಟಕದಿಂದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ಕಚೇರಿ ಉದ್ಘಾಟನೆ ಮಾಡಿ ಮಾತನಾಡಿರುವ ಅವರು, ಬಸವಣ್ಣನವರ ಕರ್ಮಭೂಮಿ ಬೀದರ್‌ನಲ್ಲಿ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನ ಮಾಡಲು ಮುಂದಾಗಿರುವುದು ಬಹಳ ಸಂತೋಷದ ಸಂಗತಿ.

ಹೊರ ದೇಶಗಳಿಂದ ಪತ್ರಕರ್ತರನ್ನು ಸಮ್ಮೇಳನಕ್ಕೆ ಆಹ್ವಾನ ಮಾಡಲು ಮುಂದಾಗಿರುವುದು ಸ್ವಾಗತಾರ್ಹ ಕ್ರಮ. ಅವರು ಬೀದರ್‌ಗೆ ಬಂದು ಬಸವಣ್ಣನವರ ಬಗ್ಗೆ ಅರಿತುಕೊಳ್ಳಲು ಬಹಳಷ್ಟು ಅನುಕುಲ ಆಗಲಿದೆ ಎಂದರು. ಶಾಸಕಾಂಗ,


ಉದಯವಾಹಿನಿ ಚಿತ್ರ

ಕಾರ್ಯಾಂಗ, ನ್ಯಾಯಾಂಗಗಳನ್ನು ಸರಿ ದಾರಿಗೆ ತರುವ, ಅವುಗಳ ಯೋಜನೆ ಹಾಗೂ ಕಾರ್ಯಶೈಲಿ ಬಿತ್ತರಿಸುವ ಕಾರ್ಯ ಮಾಧ್ಯಮಗಳು ಮಾಡುತ್ತವೆ. ಇಂದು ನನ್ನಂತಹ ಒಬ್ಬ ಪರಿಪೂರ್ಣ ರಾಜಕೀಯ ಧುರಿಣರನ್ನು ತಯ್ಯಾರು ಮಾಡುವ ಹಾಗೂ ಅಂಥವರಿಗೆ ಮಾರ್ಗದರ್ಶನ ಮಾಡುವ ಕಾರ್ಯ ಸಹ ಮಾಧ್ಯಮಗಳು ಮಾಡುತ್ತವೆ. ಇವತ್ತು ನಿಸ್ವಾರ್ಥಿ ರಾಜಕಾರಣಿಗಳು ಸಮಾಜದ ಮುಖ್ಯ ವಾಹಿನಿಗೆ ಬರಲು ಮಾಧ್ಯಮಗಳ ಪಾತ್ರ ಬಹಳಷ್ಟಿದೆ ಎಂದರು.

## ಸಮಯಕ್ಕೆ ಸರಿಯಾಗಿ ಶಾಲೆಗೆ ಬಾರದ ಶಿಕ್ಷಕರು

### • ಗುಡಪಳ್ಳಿ ತಾಂಡ ಮತ್ತು ಗೋಪಿನಾಯಕ್ ತಾಂಡದ ಸರ್ಕಾರಿ ಶಾಲೆಯ ಅವ್ಯವಸ್ಥೆ

• ಉದಯವಾಹಿನಿ ಬೀದರ್

ಸರಿಯಾದ ಸಮಯಕ್ಕೆ ಆಗಮಿಸದಿರುವುದು, ಪಾಠ ಸುದ್ದಿಮಾಡದೆ ಹರಟೆ ಹೊಡೆಯುವುದು, ಪದೇ ಪದೇ ಗೈರಾಗುವ ಮೂಲಕ ಕರ್ತವ್ಯ ನಿರ್ವಹಿಸುವಲ್ಲಿ ಬೇಜವಾಬ್ದಾರಿ ತೋರಿಸುತ್ತಿರುವ ಶಿಕ್ಷಕರಿಂದ ಔರಾದ್ ತಾಲ್ಲೂಕಿನ ಗುಡುಪಳ್ಳಿ ತಾಂಡ ಹಾಗೂ ಗೋಪಿನಾಯಕ್ ತಾಂಡದ ಸರ್ಕಾರಿ ಶಾಲೆಯ ಶೈಕ್ಷಣಿಕ ವಾತಾವರಣ ಹದಗೆಟ್ಟಿದೆ ಎಂದು ಪಾಲಕರು, ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಗುಡಪಳ್ಳಿ ತಾಂಡಾದಲ್ಲಿ 5ನೇ ತರಗತಿವರೆಗೆ ಶಾಲೆ ಇದ್ದು ಇಬ್ಬರು ಜನ ಶಿಕ್ಷಕರಿದ್ದು, ಕೇವಲ 12 ಮಕ್ಕಳಿದ್ದಾರೆ. ಗೋಪಿನಾಯಕ್ ತಾಂಡಾದಲ್ಲಿ 1 ರಿಂದ 5ನೇ ತರಗತಿ ವರೆಗೆ 21 ಜನ ಮಕ್ಕಳಿದ್ದು ಇಲ್ಲಿ ಕೂಡ ಇಬ್ಬರು ಶಿಕ್ಷಕರಿದ್ದಾರೆ.

ಬೆಳಿಗ್ಗೆ 9.45ಕ್ಕೆ ಹಾಜರಾಗಬೇಕಾದ ಶಿಕ್ಷಕರು ಮಧ್ಯಾಹ್ನ 11 ಗಂಟೆಯಾದರೂ ಶಾಲೆಗೆ ಬರುವುದಿಲ್ಲ. ಕಚೇರಿಯಲ್ಲಿ ಎಲ್ಲರೂ ರಜೆ ಅರ್ಜಿ ಬರೆಯದೆ ಮನಸ್ಸಿಗೆ ಬಂದಂತೆ ರಜೆ ಹಾಕಿ ಶಾಲೆಗೆ ಬಂದ ದಿವಸ ರಜೆ ಮಾಡಿರುವ ಪೂರ್ತಿ ದಿವಸದ ಸಹಿ ಹಾಕುವುದು, ಹೀಗೆ ಹೊಂದಾಣಿಕೆ ಮಾಡಿಕೊಂಡಿದ್ದು, ಪ್ರತಿಯೊಬ್ಬರೂ ವಾರದಲ್ಲಿ ಕನಿಷ್ಠ ಮೂರು ದಿನ ಗೈರಾಗುತ್ತಾರೆ. ಹಾಜರಾದ ಆ ಮೂರು ದಿನವೂ ಪಾಠ ಮಾಡುವದಿಲ್ಲ. ಬರಿ ಹರಟೆ ಹೊಡೆಯುವುದು, ಮೊಬೈಲ್‌ನಲ್ಲಿ ಮಾತನಾಡುವುದು ಕಂಡುಬರುತ್ತದೆ.

ಶಿಕ್ಷಕರ ಈ ಬೇಜವಾಬ್ದಾರಿತನ ಮಕ್ಕಳ ಭವಿಷ್ಯ ಕತ್ತಲಾಗಿಸುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಅವ್ಯವಸ್ಥೆಯಿಂದಾಗಿ ಪಾಲಕರು ತಮ್ಮ ಮಕ್ಕಳನ್ನು ಇಲ್ಲಿ ದಾಖಲಿಸಲು ಹಿಂದೇಟು ಹಾಕಿ ಖಾಸಗಿ ಶಾಲೆಗಳ ಕೂಡ ಮುಖ ಮಾಡುತ್ತಿದ್ದಾರೆ.

ಉದಯವಾಹಿನಿ ಚಿತ್ರ





**ಮಕ್ಕಳ ಭವಿಷ್ಯ ಕತ್ತಲೆಗೆ**

### ಜ್ಞಾನದೇಗುಲದಲ್ಲಿ ಹುಲ್ಲಿನ ಭಣಮೆ

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗುಡಪಳ್ಳಿ ತಾಂಡ ಆವರಣದಲ್ಲೇ ಹುಲ್ಲಿನ ಭಣಮೆ ಜಮೆ ಮಾಡಲಾಗಿದೆ. ಆವರಣ ತುಂಬೆಲ್ಲ ಕಸದ ರಾಶಿ, ಇದು ಶಾಲೆಯೋ ಅಥವಾ ದನದ ಕೊಟ್ಟಿಗೆ ಎಂಬಂತಾಗಿದೆ. ನೂರಾರು ಸಮಸ್ಯೆಗಳಿದ್ದರು ಕೂಡ ಶಾಲೆಯ ಮುಖ್ಯಗುರುಗಳು ಶಾಲೆಗೆ ಚಟಾ ಹೋಡೆದು ಐಷಾರಾಮಿಯಲ್ಲಿ ತಿರುಗಾಡುತ್ತಿದ್ದಾರೆ.**

ಬಿಸಿಯೂಟಕ್ಕೆ ಮುಖ್ಯ ಶಿಕ್ಷಕರು ಒಂದು ದಿನವೂ ತರಕಾರಿ ಒದಗಿಸುವುದಿಲ್ಲ ಕೆಲವೊಂದು ಬಾರಿ ಅಡುಗೆ ಕೋಣೆ ಬೀಗ ಕೂಡಾ ತೆಗೆಯುವುದಿಲ್ಲ ಮಕ್ಕಳು ಬಿಸಿಯೂಟ ಸೇವಿಸುತ್ತಿಲ್ಲ.

> **ಶಿಕ್ಷಕರು ಈ ರೀತಿ ಕರ್ತವ್ಯ ನಿರ್ವಹಿಸುತ್ತಿರುವುದು ಸರಿಯಿಲ್ಲ ಕೂಡಲೇ ನಾನು ಖುದ್ದಾಗಿ ಆ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. -ಸುರೇಶಗೌಡ ಡಿಡಿಪಿಐ ಬೀದರ್**

ಲಕ್ಷ-ಲಕ್ಷ ವೇತನ ಪಡೆಯ ಶಿಕ್ಷಕರು ಮಕ್ಕಳ ಭವಿಷ್ಯ ರೂಪಿಸಲು ಕಿಂಚಿತ್ತು ಕರ್ತವ್ಯ ನಿಷ್ಠೆ ತೋರುತ್ತಿಲ್ಲ. ಪುಟ್ಟ ತಾಂಡಗಳಾಗಿದ್ದು ಈ ಕಡೆ ಒಬ್ಬ ಮೇಲಧಿಕಾರಿಯೂ ಬರುವುದಿಲ್ಲ.

ಈ ಎರಡು ತಾಂಡಗಳ ಶಿಕ್ಷಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಕೂಡಲೇ ಅವರನ್ನು ಅಮಾನತು ಮಾಡಿ ಇಲ್ಲಾ ಇಲ್ಲಿಂದ ವರ್ಗಾವಣೆ ಮಾಡಿ ಬೇರೆ ಶಿಕ್ಷಕರನ್ನು ನೇಮಿಸದಿದ್ದರೆ ಔರಾದ್ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕ ಅಧ್ಯಕ್ಷ ಅನೀಲ್ ದೇವಕತ್ತೆ ಹಾಗೂ ಪಾಲಕರು ಎಚ್ಚರಿಸಿದ್ದಾರೆ.

## ಉತ್ತರ ಮದ್ರಾಸ್ ಕ್ಷೇತ್ರದಲ್ಲಿ ದಳಪತಿ ವಿಜಯ್ ಅಗ್ನಿ ಪರೀಕ್ಷೆ



**ಚೆನ್ನೈ:** ತಮಿಳಗ ವೆಟ್ರಿ ಕಳಗಂ ಪಕ್ಷದ ಮುಖ್ಯಸ್ಥ ಹಾಗೂ ಖ್ಯಾತ ಚಿತ್ರನಟ ದಳಪತಿ ವಿಜಯ್ ಅವರು ಮುಂಬರುವ ತಮಿಳುನಾಡು ವಿಧಾನಸಭೆ ಚುನಾವಣೆಯಲ್ಲಿ ಉತ್ತರ ಮದ್ರಾಸ್ ಕ್ಷೇತ್ರದಲ್ಲಿ ಸ್ಪರ್ಧಿಸುವ ಸಾಧ್ಯತೆ ಇದೆ. ಟಿವಿಕೆ ಪಕ್ಷದ ಪ್ರಧಾನ ಕಾರ್ಯದರ್ಶಿ ಆಧವ್ ಅರ್ಜುನ ಅವರು, ಮುಂಬರುವ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಮುಖ್ಯಸ್ಥ ಮತ್ತು ನಟ ವಿಜಯ್ ಉತ್ತರ ಮದ್ರಾಸ್ ಕ್ಷೇತ್ರದಿಂದ ಸ್ಪರ್ಧಿಸಬಹುದು ಎಂದು ಸುಳಿವು ನೀಡಿದ್ದಾರೆ.ಇದುವರೆಗೂ ಡಿಎಂಕೆ ಪಕ್ಷದ ತೆಕ್ಕೆಯಲ್ಲಿದ್ದ ಉತ್ತರ ಮದ್ರಾಸ್ ಕ್ಷೇತ್ರ ಇದೀಗ ವಿಜಯ್ ಸ್ಪರ್ಧೆಯಿಂದ ಕುತೂಹಲ ಕೆರಳಿಸಿದೆ. ಅಲ್ಲಿನ ಮತದಾರರು ಕೂಡ ವಿಜಯ್ ಸ್ಪರ್ಧೆಗೆ ಒಲವು ವ್ಯಕ್ತಪಡಿಸುತ್ತಿದ್ದಾರೆ.

ಉತ್ತರ ಚೆನ್ನೈನ ಕಾರ್ಮಿಕ ವರ್ಗದ ಕೇಂದ್ರವಾದ ತಿರುವೊಟ್ಟಿಯೂರಿನಲ್ಲಿ, ಹೂವು ಮಾರಾಟಗಾರ ಶಾಂತಿ ಅವರು, ವಿಜಯ್ ತಮ್ಮ ಕ್ಷೇತ್ರದಿಂದ ಚುನಾವಣಾ ಚೊಚ್ಚಲ ಪ್ರವೇಶ ಮಾಡುವ ಬಗ್ಗೆ ಉತ್ಸುಕರಾಗಿದ್ದಾರೆ.ಆಡಳಿತ ಡಿಎಂಕೆಯ ಮಾಸಿಕ ರೂ. 1,000 ಸಹಾಯ ಯೋಜನೆಯ ಫಲಾನುಭವಿಯಾಗಿರುವ ಅವರು, ಕಲ್ಯಾಣ ಪಕ್ಷ ಮಾತ್ರ ತಮ್ಮ ಮತವನ್ನು ನಿರ್ಧರಿಸುವುದಿಲ್ಲ ಎಂದು ಹೇಳುತ್ತಾರೆ.ನಮ್ಮ ಕುಟುಂಬದ ಐದು ಮತಗಳಲ್ಲಿ ಎರಡು ವಿಜಯ್‌ಗೆ ಮತ ಹಾಕುತ್ತವೆ. ಅವರು ನಮಗೆ ಮಾಸಿಕ ಸಾವಿರ ರೂಪಾಯಿಗಳನ್ನು ನೀಡುವುದರಿಂದ ನಾವು ಡಿಎಂಕೆಗೆ ಮೂರು ಮತ ಹಾಕುತ್ತೇವೆ ಎಂದಿದ್ದಾರೆ. ತರಕಾರಿ ಮಾರಾಟಗಾರರಾದ ಮೇರಿ ಅವರಿಗೆ ಉಚಿತ ಬಸ್ ಪ್ರಯಾಣ ಮತ್ತು ಇತ್ತೀಚಿನ 5,000 ರೂ. ನಗದು ವರ್ಗಾವಣೆ ಕೂಡ ಅವರನ್ನು ಪ್ರಭಾವಿಸಿಲ್ಲ. ಅವರು ನೀಡುವ ಹಣದಿಂದ ನಾವು ಶಾಂತಿಯುತವಾಗಿದ್ದೇವೆ ಎಂದಲ್ಲ. ಅವರು ನಮಗಾಗಿ ಏನಾದರೂ ಮಾಡಲು ಬಯಸಿದರೆ, ಅವರು ನಮಗೆ ವಸತಿ ನೀಡಬೇಕು. ಅಷ್ಟೇ ಸಾಕು. ನಮ್ಮ ಕುಟುಂಬದ ಮೂರು ಮತಗಳು ವಿಜಯ್ ಪರವಾಗಿವೆ ಎಂದು ಅವರು ಹೇಳಿದರು. ಎಐಎಡಿಎಂಕೆ ಪಕ್ಷದ ದೀರ್ಘಕಾಲದ ಬೆಂಬಲಿಗ, 75 ವರ್ಷದ ಬಂಡಿ ಎಳೆಯುವ ಪರಶುರಾಮ್, ನಟ-ರಾಜಕಾರಣಿಗೆ ಒಂದು ಸಲಹೆಯನ್ನು ನೀಡುತ್ತಾರೆ. ವಿಜಯ್ ಎಐಎಡಿಎಂಕೆ ಜೊತೆ ಕೈಜೋಡಿಸಬೇಕು. ಅದು ಅವರನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ ಎಂದರು.

### ಆರೋಗ್ಯ ಸೇರಿದಂತೆ ಧಾರ್ಮಿಕ ಚಟುವಟಿಕೆಗಳ ಹಕ್ಕನ್ನು ಹತ್ತಿಕ್ಕಿದ್ದಾರೆ ಎಂದು ಆರೋಪ

## ಯೂನಸ್ ಸರ್ಕಾರ ಕರಾಳಮುಖ ಬಿಚ್ಚಿಟ್ಟ ಬಾಂಗ್ಲಾ ಅಧ್ಯಕ್ಷ

**ಢಾಕಾ:** ಬಾಂಗ್ಲಾದೇಶದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳ ಬೆನ್ನಲ್ಲೇ, ಯೂನಸ್ ನೇತೃತ್ವದ ಮಧ್ಯಂತರ ಸರ್ಕಾರ ಅಧಿಕಾರವನ್ನು ಕಳೆದುಕೊಂಡಿದ್ದು, ಬಿಎನ್‌ಪಿ ಪಕ್ಷದ ನಾಯಕ ತಾರಿಕ್ ರೆಹಮಾನ್ ಬಾಂಗ್ಲಾದೇಶ ನೂತನ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಈ ಬೆನ್ನಲ್ಲೇ, 18 ತಿಂಗಳ ಅವಧಿಯಲ್ಲಿ ಯೂನಸ್ ಸರ್ಕಾರ ಮಾಡಿದ ಎಲ್ಲಾ ಅರಾಚಕ ಕೃತ್ಯಗಳು ಒಂದೊಂದೇ ಬಯಲಿಗೆ ಬರುತ್ತಿದ್ದು, ಬಾಂಗ್ಲಾದೇಶದ ಅಧ್ಯಕ್ಷರನ್ನೇ ಯೂನಸ್ ಗೃಹಬಂಧನ ಇಟ್ಟಿದ್ದರು ಎಂಬ ವಿಚಾರ ಬೆಳಕಿಗೆ ಬಂದಿದೆ.

**ಯೂನಸ್ ಸರ್ಕಾರ ನನ್ನ ಗೃಹಬಂಧನ ಮಾಡಿತ್ತು ಎಂದು ಬಾಂಗ್ಲಾ ಅಧ್ಯಕ್ಷ:** ಈ ಕುರಿತು ಸ್ವತಃ ಬಾಂಗ್ಲದೇಶದ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರೇ ಬಾಂಗ್ಲಾದೇಶದ ಪತ್ರಿಕೆ ಕಲೇರ್ ಕೊಂಥೋಗೆ ನೀಡಿದ ವಿಶೇಷ ಸಂದರ್ಶನ ಬಹಿರಂಗಗೊಳಿಸಿದ್ದು, ಯೂನಸ್ ನೇತೃತ್ವದ ಸರ್ಕಾರ ನನ್ನನ್ನು ಅಧ್ಯಕ್ಷರ ಅಧಿಕೃತ ನಿವಾಸವಾದ ಬಂಗಭಬನ್‌ಗೆ ಮಾತ್ರ ಸೀಮಿತಗೊಳಿಸಿ ಒಂದು ರೀತಿಯಲ್ಲಿ 18 ತಿಂಗಳು ಗೃಹಬಂಧನದಲ್ಲಿರುವಂತೆ ಮಾಡಿದ್ದು,ಆರೋಗ್ಯ ಸೇರಿದಂತೆ ಧಾರ್ಮಿಕ ಚಟುವಟಿಕೆಗಳ ಹಕ್ಕನ್ನು ಹತ್ತಿಕ್ಕಿದ್ದಾರೆ ಎಂದು ಯೂನಸ್ ಸರ್ಕಾರದ ವಿರುದ್ಧ ಹಲವು ಆರೋಪಗಳನ್ನು ಮಾಡಿದ್ದಾರೆ.

ಕಲೇರ್ ಕೊಂಥೋ ಪತ್ರಿಕೆ ನೀಡಿದ ಸಂದರ್ಶನದಲ್ಲಿ ಶಹಾಬುದ್ದೀನ್ ಈ ಆರೋಪಗಳಿಗೆ ವಿವರಣೆಯನ್ನು ನೀಡಿದ್ದು, ಅಧ್ಯಕ್ಷರು ರಾಷ್ಟ್ರೀಯ ಈದ್ಗಾ ಮೈದಾನದಲ್ಲಿ ಪವಿತ್ರ ಈದ್-ಉಲ್-ಫಿತರ್ ಮತ್ತು ಈದ್-ಉಲ್-ಅಝಾ ಪ್ರಾರ್ಥನೆಗಳಲ್ಲಿ ಭಾಗವಹಿಸುತ್ತಾರೆ, ಈ ಸಂಪ್ರದಾಯವು ದೇಶದ ಸ್ವಾತಂತ್ರ್ಯದಿಂದಲೂ ನಡೆದುಕೊಂಡು ಬಂದಿದೆ. ಆದರೆ ಇದಕ್ಕೆ ಯೂನಸ್ ಸರ್ಕಾರ ಅಡ್ಡಿಪಡಿಸಿದ್ದು, ಈದ್ ಪ್ರಾರ್ಥನೆಯಲ್ಲಿ ಭಾಗವಹಿಸಲು ರಾಷ್ಟ್ರೀಯ ಈದ್ಗಾ ಮೈದಾನಕ್ಕೆ ಹೋಗುವಂತಿಲ್ಲ ಎಂದು ಭದ್ರತಾ ಇಲಾಖೆಯ ಮೂಲಕ ನನಗೆ ಸ್ಪಷ್ಟವಾಗಿ ತಿಳಿಸಲಾಗಿತ್ತು ಎಂದು ಆರೋಪಿಸಿದ್ದಾರೆ.

- ದೇಶದ ಅಧ್ಯಕ್ಷರನ್ನೇ 18 ತಿಂಗಳು ಗೃಹಬಂಧನದಲ್ಲಿರಿಸಿದ್ದ ಯೂನಸ್ ಸರ್ಕಾರ
- ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ರೂವಾರಿ ಯೂನಸ್ ಮಾಡಿ ಪಾಪಗಳ ಪಟ್ಟಿ ಬಿಚ್ಚಿಟ್ಟ ಬಾಂಗ್ಲಾದೇಶದ ಅಧ್ಯಕ್ಷರು
- ಧಾರ್ಮಿಕ ಆಚರಣೆ, ಆರೋಗ್ಯ ತಪಾಸಣೆಗಾಗಿ ಟ್ರಾವೆಲ್ ಎಲ್ಲವೂ ನನ್ನಿಂದ ಕಿತ್ತುಕೊಳ್ಳಲಾಗಿತ್ತು ಎಂದು ಆರೋಪ

### ರಾಜೀನಾಮೆ ಹೇಳಿಕೆ ವಿಚಾರಕ್ಕೆ ಸ್ಪಷ್ಟನೆ

**ಶಹಾಬುದ್ದೀನ್ ಅವರು ಈ ಹಿಂದೆಯೂ ಯೂನಸ್ ನೇತೃತ್ವದ ಸರ್ಕಾರದ ಮೇಲೆ ಇಂತಹ ಆರೋಪಗಳನ್ನು ಮಾಡಿದ್ದು, ಈ ಹಿಂದೆ ಡಿಸೆಂಬರ್‌ನಲ್ಲಿ ರಾಯಿಟರ್ಸ್‌ಗೆ ನೀಡಿದ ಸಂದರ್ಶನದಲ್ಲಿ ನನಗೆ ಅಧ್ಯಕ್ಷ ಹುದ್ದೆಯಲ್ಲಿ ಮುಂದುವರೆಯುವ ಯಾವುದೇ ಉದ್ದೇಶವಿಲ್ಲ ಎಂದು ಹೇಳಿದ್ದರು. ಆದರೆ, ಈ ಸಂದರ್ಶನದಲ್ಲಿ ಈ ಕುರಿತು ಮಾತನಾಡಿದ್ದು, ಇದನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದ್ದು, ಯೂನಸ್ ಸರ್ಕಾರ ನೀಡುತ್ತಿರುವ ಒತ್ತಡ ಹಾಗೂ ಅವಮಾನಗಳಿಂದ ಬೇಸತ್ತು ಹೀಗೆ ಹೇಳಿದೇ ಆದರೆ, ವಾಸ್ತವಾಗಿ ನನಗೆ 2028ರಲ್ಲಿ ಅವಧಿ ಮುಗಿಯುವವರೆಗೂ ರಾಜೀನಾಮೆ ನೀಡುವುದಿಲ್ಲ. ಒಂದು ವೇಳೆ ಪಕ್ಷ ಬಯಸಿದರೆ ಸ್ವ ಪ್ರೇರಣೆಯಿಂದ ರಾಜೀನಾಮೆ ನೀಡುತ್ತೇನೆ ಎಂದು ತಿಳಿಸಿದ್ದಾರೆ.**

ಬದಲಿಗೆ, ಅಗತ್ಯವಿದ್ದರೆ ವಿದೇಶದಿಂದ ವೈದ್ಯರನ್ನು ಕರೆತರಲು ವ್ಯವಸ್ಥೆ ಮಾಡುವುದಾಗಿ ಅವರು ಹೇಳಿದರು, ಆದರೆ ನಾನು ವಿದೇಶಕ್ಕೆ ಹೋಗಲು ಸಾಧ್ಯವಿಲ್ಲ ಎಂದು ನಿರಾಕರಿಸಿದ್ದಾರೆ. ಮತ್ತೆ 2ನೇ ಬಾರಿಗೆ ಲಂಡನ್ ನಲ್ಲಿರುವ ಕೇಂಬ್ರಿಡ್ಜ್ ಪಾರ್ಕ್ ವೇ ಆಸ್ಪತ್ರೆಯಲ್ಲಿ ಅಪಾಯಿಂಟ್‌ಮೆಂಟ್ ಪಡೆದಾಗಲೂ ಇದೇ ರೀತಿ ಮಾಡಿದ್ದಾರೆ ಎಂದಿದ್ದಾರೆ.

ಅಷ್ಟೇ ಅಲ್ಲದೆ, ಅಮೆರಿಕಾದೊಂದಿಗೆ ನಡೆದ ವ್ಯಾಪಾರ ಒಪ್ಪಂದದ ಸಮಯದಲ್ಲಿಯೂ ಸಹ ಇದರ ಬಗ್ಗೆ ತಿಳಿಯದಂತೆ ನನ್ನನ್ನು ದೂರವಿಟ್ಟಿದ್ದು, ನನ್ನನ್ನು ಪದಚ್ಯುತಗೊಳಿಸಲು ಷಡ್ಯಂತ್ರವನ್ನು ಹೂಡಿದ್ದರು ಎಂದಿದ್ದಾರೆ. ಅಲ್ಲದೆ, ಈ ಅವಧಿಯಲ್ಲಿ ಯೂನಸ್ ದೇಶವನ್ನು ಅತಂತ್ರ ಸ್ಥಿತಿಗೆ ತಳ್ಳಿ ಹಲವು ಅಸಂವಿಧಾನಿಕ ಕೃತ್ಯಗಳನ್ನು ಎಸಗಿದ್ದಾನೆ ಎಂದು ಆರೋಪಿಸಿದ್ದಾರೆ. ಆದರೆ, ಸದ್ಯ

### ಆರೋಗ್ಯ ತಪಾಸಣೆ ಕಾರಣಕ್ಕೂ ಹೊರಬಿಡದೆ ಹಿಂಸೆ

**ಪ್ರಧಾನ ಮಂತ್ರಿಯಾಗಿ ಮುಖ್ಯ ಸಲಹೆಗಾರ ಯೂನಸ್ 14 ವಿದೇಶ ಪ್ರವಾಸಗಳನ್ನು ಮಾಡಿದ್ದರೂ, ಆರೋಗ್ಯದ ಕಾರಣಗಳಿಗೂ ಸಹ ಅವರಿಗೆ ವಿದೇಶ ಪ್ರವಾಸ ಮಾಡಲು ಅವಕಾಶ ನೀಡಲಾಗಿಲ್ಲ ಎಂದಿದ್ದಾರೆ. ಈ ಕುರಿತು ನನಗೆ ಸಿಂಗಾಪುರದ ರಾಷ್ಟ್ರೀಯ ವಿಶ್ವವಿದ್ಯಾಲಯ ಆಸ್ಪತ್ರೆಯಲ್ಲಿ ಬೈಪಾಸ್ ಶಸ್ತ್ರಚಿಕಿತ್ಸೆಯ ಮಾಡಲಾಗಿತ್ತು, ಇದಾದ 1ವರ್ಷದ ನಂತರ, ನನಗೆ ಅಲ್ಲಿನ ಆಸ್ಪತ್ರೆಯಲ್ಲಿ ಫಾಲೋ-ಅಪ್ ಅಪಾಯಿಂಟ್ಮೆಂಟ್ ಇತ್ತು.ನಾನು ಚಿಕಿತ್ಸೆಗಾಗಿ ಸಿಂಗಾಪುರಕ್ಕೆ ಹೋಗಲು ವಿದೇಶಾಂಗ ಸಚಿವಾಲಯಕ್ಕೆ ಪತ್ರ ಬರೆದೆ. ಆದರೆ, ಅವರು ಅದಕ್ಕೆ ಅನುಮತಿ ಸಿಗಲಿಲ್ಲ ಎಂದಿದ್ದಾರೆ.**

ಚುನಾಯಿತವಾಗಿರುವ ಸರ್ಕಾರ ನೇಮಕವಾಗಿರುವುದರಿಂದ ನಿಟ್ಟುಸಿರು ಬಿಟ್ಟಿದ್ದು, ನೆಮ್ಮದಿಯಿಂದಿದ್ದೇನೆ ಎಂದಿದ್ದಾರೆ. ಇದು ಸದ್ಯ ಬಾಂಗ್ಲಾದೇಶದ ರಾಜಕಾರಣದಲ್ಲಿ ಸಂಚಲನವನ್ನು ಮೂಡಿಸಿದ್ದು, ದೇಶದಲ್ಲಿ ಗೌರವಾನ್ವಿತ ಹುದ್ದೆಯಲ್ಲಿರುವ ಅಧ್ಯಕ್ಷರನ್ನೇ ಗೃಹ ಬಂಧನದಲ್ಲಿರಿಸುವ ಮೂಲಕ ವೈಯಕ್ತಿಕ ಸ್ವಾತಂತ್ರ್ಯವನ್ನು ಹತ್ತಿಕ್ಕಿರುವುದು ಈ ಕುರಿತಂತೆ ತಾರಿಕ್ ರೆಹಮಾನ್ ಅವರ ಸರ್ಕಾರ ಯಾವ ರೀತಿ ಪ್ರತಿಕ್ರಿಯೆ ನೀಡಲಿದೆ ಎಂದು ಕಾದು ನೋಡಬೇಕಿದೆ.




## ಮಿನಿ ನ್ಯೂಸ್

### ಭಾರತಕ್ಕೆ ಬರುತ್ತಿದ್ದಾರೆ ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ

**ಟೊರೊಂಟೊ:** ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಈ ವಾರ ಭಾರತ, ಆಸ್ಟ್ರೇಲಿಯಾ ಮತ್ತು ಜಪಾನ್‌ಗೆ ಪ್ರಯಾಣಿಸುತ್ತಿದ್ದು, ಮುಂದಿನ ವಾರ ಅಮೆರಿಕದಿಂದ ವ್ಯಾಪಾರವನ್ನು ವೈವಿಧ್ಯಗೊಳಿಸುವ ತಮ್ಮ ಇತ್ತೀಚಿನ ಪ್ರಯತ್ನದಲ್ಲಿದ್ದಾರೆ ಎಂದು ಅವರ ಕಚೇರಿ ಪ್ರಕಟಿಸಿದೆ.

ಕಾರ್ನಿ ಗುರುವಾರ ಮೊದಲು ಮುಂಬೈಗೆ ಭೇಟಿ ನೀಡಿ ಭಾರತೀಯ ಪ್ರಧಾನಿ ನರೇಂದ್ರ ಮೋದಿ ಮತ್ತು ವ್ಯಾಪಾರ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ. ಕ್ಯಾನ್‌ಬೆರಾದಲ್ಲಿ ಒಂದು ನಿಲ್ದಾಣದ ಸಮಯದಲ್ಲಿ, ಕಾರ್ನಿ ಆಸ್ಟ್ರೇಲಿಯಾದ ಸಂಸತ್ತಿನ ಎರಡೂ ಸದನಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ, 20 ವರ್ಷಗಳಲ್ಲಿ ಹಾಗೆ ಮಾಡಿದ ಮೊದಲ ಕೆನಡಾದ ಪ್ರಧಾನಿಯಾಗಿದ್ದಾರೆ. ಅವರು ರಕ್ಷಣಾ ಮತ್ತು ಪ್ರಗತಿಗಳ ಕುರಿತು ಚರ್ಚಿಸಲು ಆಸ್ಟ್ರೇಲಿಯಾದ ಪ್ರಧಾನಿ ಆಂಥೋನಿ ಅಲ್ಬನೀಸ್ ಅವರನ್ನು ಸಹ ಭೇಟಿ ಮಾಡಲಿದ್ದಾರೆ. ನಂತರ ಕಾರ್ನಿ ಜಪಾನ್‌ನ ಪ್ರಧಾನಿ ತಕೈಚಿ ಸನೇ ಅವರನ್ನು ಭೇಟಿ ಮಾಡಿ ಶುದ್ಧ ಇಂಧನ, ನಿರ್ಣಾಯಕ ಖನಿಜಗಳು ಮತ್ತು ಆಹಾರ ಭದ್ರತೆಯನ್ನು ಚರ್ಚಿಸಲಿದ್ದಾರೆ. ಹೆಚ್ಚು ಅನಿಶ್ಚಿತ ಜಗತ್ತಿನಲ್ಲಿ, ಕೆನಡಾ ನಾವು ಏನು ನಿಯಂತ್ರಿಸಬಹುದು ಎಂಬುದರ ಮೇಲೆ ಕೇಂದ್ರೀಕರಿಸಿದೆ. ನಾವು ನಮ್ಮ ವ್ಯಾಪಾರವನ್ನು ವೈವಿಧ್ಯಗೊಳಿಸುತ್ತಿದ್ದೇವೆ ಮತ್ತು ಬೃಹತ್ ಹೊಸ ಹೂಡಿಕೆಯನ್ನು ಆಕರ್ಷಿಸುತ್ತಿದ್ದೇವೆ ಎಂದು ಕಾರ್ನಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

### ಅಪ್ಪನನ್ನೇ ಕೊಂದ ಮಗ

**ಲಕ್ನೋ:** ನೀನು ಡಾಕ್ಟರ್ ಆಗಬೇಕು. ಹೀಗಾಗಿ ನೀಟ್ ಪರೀಕ್ಷೆ ಬರೆದು ಪಾಸಾಗಲೇಬೇಕು ಎಂದು ಒತ್ತಡ ಹಾಕುತ್ತಿದ್ದ ತಂದೆಯನ್ನು ಮಗನೇ ಕೊಲೆ ಮಾಡಿರುವ ಪ್ರಕರಣ ಉತ್ತರ ಪ್ರದೇಶದಲ್ಲಿ ನಡೆದಿದೆ. ಲಕ್ನೋದಲ್ಲಿ ತನ್ನ ತಂದೆಯ ಭೀಕರ ಕೊಲೆಗೆ ಸಂಬಂಧಿಸಿದಂತೆ 21 ವರ್ಷದ ಯುವಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ತನ್ನ ಮಗನೊಂದಿಗೆ ತನ್ನ ಭವಿಷ್ಯದ ವೃತ್ತಿಜೀವನದ ಬಗ್ಗೆ ಉಂಟಾದ ವಿವಾದದ ನಂತರ ಆ ವ್ಯಕ್ತಿಯನ್ನು ಗುಂಡಿಕ್ಕಿ ಕೊಂದು, ತುಂಡು ಮಾಡಿ, ದೇಹದ ಭಾಗಗಳನ್ನು ವಿಲೇವಾರಿ ಮಾಡಲಾಗಿದೆ.

ಔಷಧ ಮತ್ತು ಮದ್ಯ ವ್ಯಾಪಾರದಲ್ಲಿ ವ್ಯವಹಾರ ನಡೆಸುತ್ತಿದ್ದ 49 ವರ್ಷದ ಮಾನವೇಂದ್ರ ಸಿಂಗ್ ಶುಕ್ರವಾರದಿಂದ ಕಾಣೆಯಾಗಿದ್ದರು ಎಂದು ವರದಿಯಾಗಿದೆ. ಪೊಲೀಸರು ಅವರ ಮನೆಗೆ ಭೇಟಿ ನೀಡಿ, ಬ್ಯಾರೆಲ್‌ನಲ್ಲಿ ಅವರ ದೇಹದ ಭಾಗಗಳನ್ನು ಕಂಡುಕೊಂಡು, ಅವರ ಮಗ ಅಕ್ಷತ್ ಪ್ರತಾಪ್ ಸಿಂಗ್ ಅವರನ್ನು ವಿಚಾರಣೆಗೆ ಒಳಪಡಿಸಿದಾಗ ನಿಜವಾದ ಕಥೆ ತಿಳಿದುಬಂದಿತು ಎಂದು ಪೊಲೀಸರು ತಿಳಿಸಿದ್ದಾರೆ.

### ಗೂಡ್ಸ್‌ರೈಲಿನ ಮುಂದೆ ಹಾರಿ ತಂದೆ, ಮಗಳು ಆತ್ಮಹತ್ಯೆ

**ಉನ್ನಾವೊ:** ಉತ್ತರ ಪ್ರದೇಶದ ಉನ್ನಾವೊ ಜಿಲ್ಲೆಯ ಕಾನ್ಪುರ-ಲಕ್ನೋ ರೈಲು ಮಾರ್ಗದಲ್ಲಿ ಗೂಡ್ಸ್ ರೈಲಿನ ಮುಂದೆ ಹಾರಿ ತಂದೆ-ಮಗಳು ಆತಹತ್ಯೆ ಮಾಡಿಕೊಂಡಿರುವ ಘಟನೆ ಕಳೆದ ರಾತ್ರಿ ನಡೆದಿದೆ. ಗಂಗಾಘಾಟ್ ರೈಲ್ವೆ ನಿಲ್ದಾಣದ ಮುಂದಿರುವ ಶುಕ್ಲಗಂಜ್ ಪ್ರದೇಶದ ಸಹಜನಿ ಕ್ರಾಸಿಂಗ್ ಬಳಿಯ ಕೆಳ ಹಳಿಯಲ್ಲಿ ಈ ಘಟನೆ ಸಂಭವಿಸಿದೆ ಎಂದು ಗಂಗಾಘಾಟ್ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ. ಪ್ರಾಥಮಿಕ ಮಾಹಿತಿಯ ಪ್ರಕಾರ ಮೃತರನ್ನು ಯಶ್ ಗುಪ್ತಾ (45) ಮತ್ತು ಅವರ 14 ವರ್ಷದ ಮಗಳು ಹಳಿಗೆ ಹಾರಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಅವರು ಹೇಳಿದರು. ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿ ಮತ್ತು ಸ್ಥಳೀಯ ಪೊಲೀಸರು ಸ್ಥಳಕ್ಕೆ ಧಾವಿಸಿ, ಸುರಕ್ಷತಾ ಕಾರಣಗಳಿಗಾಗಿ, ಕೆಳ ಹಳಿಯಲ್ಲಿ ಸಂಚಾರವನ್ನು ಸ್ವಲ್ಪ ಸಮಯದವರೆಗೆ ಸ್ಥಗಿತಗೊಳಿಸಲಾಯಿತು ಇದರಿಂದ ರೈಲು ಸಂಚಾರಕ್ಕೆ ಸ್ವಲ್ಪ ಸಮಯ ಅಡ್ಡಿಯಾಯಿತು. ಈ ಘಟನೆಯಿಂದಾಗಿ ಲಕ್ನೋಗೆ ತೆರಳುತ್ತಿದ್ದ ತೇಜಸ್ ಎಕ್ಸ್‌ಪ್ರೆಸ್ ಮತ್ತು ಗೋಮತಿ ಎಕ್ಸ್‌ಪ್ರೆಸ್ ರೈಲುಗಳು ಸ್ವಲ್ಪ ಸಮಯದ ವರೆಗೆ ಸಂಚಾರಕ್ಕೆ ಅಡ್ಡಿಯಾದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

### ಅಮೆರಿಕದಲ್ಲಿ ಭಾರಿ ಹಿಮಪಾತ; 5,600 ಕ್ಕೂ ಹೆಚ್ಚು ವಿಮಾನಗಳ ಹಾರಾಟ ರದ್ದು

**ನ್ಯೂಯಾರ್ಕ್:** ಅಮೆರಿಕದಲ್ಲಿ ಭಾರಿ ಹಿಮಪಾತವಾಗಿದ್ದು, 5,600 ಕ್ಕೂ ಹೆಚ್ಚು ವಿಮಾನಗಳ ಹಾರಾಟವನ್ನು ರದ್ದುಗೊಳಿಸಲಾಗಿದೆ. ಶಾಲೆಗಳಿಗೆ ರಜೆ ಘೋಷಿಸಲಾಗಿದೆ.ಅಮೆರಿಕದ ಈಶಾನ್ಯ ಭಾಗದಲ್ಲಿ ಮೇರಿಲ್ಯಾಂಡ್ ನಿಂದ ಮೈನೆವರೆಗೆ ಭಾರಿ ಹಿಮಬಿರುಗಾಳಿ ಅಪ್ಪಳಿಸಿದೆ. ತೀವ್ರವಾದ ಗಾಳಿ ಮತ್ತು ಹಿಮಪಾತದ ಪರಿಣಾಮ ಸಾರಿಗೆ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ವ್ಯಾಪಾರ-ವಹಿವಾಟಿಗೆ ಅಡ್ಡಿಯುಂಟಾಗಿದೆ. ಜನಜೀವನ ಅಸ್ತವ್ಯಸ್ತವಾಗಿದೆ. ಕಳೆದ ಒಂದು ದಶಕದಲ್ಲಿ ಅತ್ಯಂತ ಪ್ರಬಲವಾದ ಚಂಡಮಾರುತ ಇದು ಎಂದು ಹವಾಮಾನ ತಜ್ಞರು ವಿಶ್ಲೇಷಿಸಿದ್ದಾರೆ. ಇದು ಮಹಾನಗರದ ಈಶಾನ್ಯದ ಕೆಲವು ಭಾಗಗಳಲ್ಲಿ 2 ಅಡಿ (60 ಸೆಂಟಿಮೀಟರ್) ಗಿಂತ ಹೆಚ್ಚು ಹಿಮವನ್ನು ಸುರಿಸಿದೆ. ಅಧಿಕಾರಿಗಳು ತುರ್ತು ಪರಿಸ್ಥಿತಿಗಳನ್ನು ಘೋಷಿಸಿದ್ದಾರೆ. ಶಾಲೆಗಳನ್ನು ಮುಚ್ಚಲಾಗಿದೆ. ಹಲವೆಡೆ ವಿದ್ಯುತ್ ವ್ಯತ್ಯಯವಾಗಿದ್ದು, ಜನರು ಕತ್ತಲಿಲ್ಲ ದಿನದೂಡುವಂತಾಗಿದೆ. ಅಮೆರಿಕದಲ್ಲಿ 5,600 ಕ್ಕೂ ಹೆಚ್ಚು ವಿಮಾನಗಳ ಸೇವೆಯನ್ನು ರದ್ದುಗೊಳಿಸಲಾಗಿದೆ.

## ಅಮೆರಿಕದ ದಾಳಿಗೆ ಪ್ರತ್ಯುತ್ತರ ಕೊಡುವುದು ನಮಗೆ ಗೊತ್ತು : ಇರಾನ್

**ಟೆಹ್ರಾನ್:** ಅಮೆರಿದ ದಾಳಿ ಮಾಡುವ ಆಶ್ರಯಿಸಿದರೆ ತಾನು ರಕ್ಷಿಸಿಕೊಳ್ಳುವುದು ಹೇಗೆ ಎಂಬುದು ಗೊತ್ತಿದೆ ಎಂದು ಇರಾನ್ ಹೇಳಿದೆ. ಅಮೆರಿಕ ಮತ್ತು ಇರಾನ್ ನಡುವೆ ಜಿನೀವಾದಲ್ಲಿ ಹೊಸ ಸುತ್ತಿನ ಮಾತುಕತೆ ನಡೆಯಲಿದ್ದು, ಇದರ ನಡುವೆ ಈ ಹೇಳಿಕೆ ಬಂದಿದೆ.

ಅಮೆರಿಕದೊಂದಿಗೆ ರಾಜತಾಂತ್ರಿಕ ಪರಿಹಾರವನ್ನು ಕಂಡುಕೊಳ್ಳಲು ಬಯಸುವುದಾಗಿ ಪುನರುಚ್ಚರಿಸಿದೆ ಆದರೆ ವಾಷಿಂಗ್ಟನ್ ಮಿಲಿಟರಿ ಕ್ರಮವನ್ನು ಆಶ್ರಯಿಸಿದರೆ ತನ್ನನ್ನು ತಾನು ರಕ್ಷಿಸಿಕೊಳ್ಳುವುದಾಗಿ ಹೇಳಿದೆ.

ಸೀಮಿತ ದಾಳಿಗಳು ಸೇರಿದಂತೆ ಯಾವುದೇ ಅಮೆರಿಕದ ದಾಳಿಯನ್ನು ಆಕ್ರಮಣಕಾರಿ ಕೃತ್ಯ ಎಂದು ಪರಿಗಣಿಸಲಾಗುತ್ತದೆ ಇರಾನ್‌ನ ವಿದೇಶಾಂಗ ಸಚಿವಾಲಯದ ವಕ್ತಾರ ಎಸಾಯಿಲ್ ಬಘೈ ಹೇಳಿದ್ದಾರೆ. ಇತ್ತೀಚೆಗೆ ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯಾನ್ ಅವರು ಅಮೆರಿಕದೊಂದಿಗೆ ಪರಮಾಣು ಮಾತುಕತೆಗಳು ಪ್ರೋತ್ಸಾಹದಾಯಕ ಸಂಕೇತಗಳನ್ನು ನೀಡಿವೆ ಎಂದು ಹೇಳಿದರು ಆದರೆ ನಂತರ ಮತ್ತೊಂದು ಸುತ್ತಿನ ಮಾತುಕತೆಗೆ ಮುಂಚಿತವಾಗಿ ಟೆಹ್ರಾನ್ ಯಾವುದೇ ಸನ್ನಿವೇಶಕ್ಕೂ ಸಿದ್ಧವಾಗಿದೆ ಎಂದು ಎಚ್ಚರಿಸಿದರು. 2003 ರ ಇರಾಕ್ ಯುದ್ಧದ ನಂತರ ಈ ಪ್ರದೇಶದಲ್ಲಿ ಅಮೆರಿಕದ ಅತಿದೊಡ್ಡ ಮಿಲಿಟರಿ ಜಮಾವಣೆಯ



ಹಿನ್ನೆಲೆಯಲ್ಲಿ ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಉಭಯ ದೇಶಗಳು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಎರಡನೇ ಸುತ್ತಿನ ಮಾತುಕತೆಗಳನ್ನುನಡೆಸಿದ್ದಾರೆ.

ಓಟ್ಟಾರೆ ಇರಾನ್‌ನಲ್ಲಿ ಯುದ್ಧದ ಕಾರ್ಮೋಢ ಉಂಟಾಗಿದ್ದು ಇರಾನ್ ಸೇನೆ ತನ್ನ ಬತ್ತಳಿಕೆಯಲ್ಲುಳ್ವ ಆಯುದ್ಧ ಹೊರತಗೆದಿದೆ ಎಂದು ಹೇಳಲಾಗುತ್ತಿದೆ. ಆಕ್ರಮಣಕಾರಿ ಕೃತ್ಯವನ್ನು ಆಕ್ರಮಣಕಾರಿ ಕೃತ್ಯವೆಂದು ಪರಿಗಣಿಸಲಾಗುತ್ತದೆ. ಅವಧಿ. ಮತ್ತು ಯಾವುದೇ ರಾಜ್ಯವು ತನ್ನ ಆತ್ಮರಕ್ಷಣೆಯ ಅಂತರ್ಗತ ಹಕ್ಕಿನ ಭಾಗವಾಗಿ ಆಕ್ರಮಣಕಾರಿ ಕೃತ್ಯಕ್ಕೆ ಉಗ್ರವಾಗಿ ಪ್ರತಿಕ್ರಿಯಿಸುತ್ತದೆ, ಆದ್ದರಿಂದ ನಾವು ಅದನ್ನೇ ಮಾಡುತ್ತೇವೆ ಎಂದು ಬಘೈ ಮಾಧ್ಯಮಗೋಷ್ಠಿಯಲ್ಲಿ ಹೇಳಿದರು. ವಿಶ್ವ ಸಂಸ್ಥೆಯ ಜನರಲ್ ಡ್ಯಾನ್ ಕೇನ್ ಅವರು ಇರಾನ್

> **ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಇರಾನ್ ಮೇಲೆ ಸೀಮಿತ ದಾಳಿಯನ್ನು ಪರಿಗಣಿಸುತ್ತಿರುವುದಾಗಿ ಹೇಳಿದ ನಂತರ ಪ್ರತಿಕ್ರಿಯೆಯನ್ನು ತ್ವರಿತಗೊಳಿಸುತ್ತದೆ. ಆಕ್ರಮಣಕಾರಿ ಕೃತ್ಯವನ್ನು ಆಕ್ರಮಣಕಾರಿ ಕೃತ್ಯವೆಂದು ಪರಿಗಣಿಸಲಾಗುತ್ತದೆ. ಅವಧಿ.ಮತ್ತು ಯಾವುದೇ ರಾಜ್ಯವು ತನ್ನ ಆತ್ಮರಕ್ಷಣೆಯ ಅಂತರ್ಗತ ಹಕ್ಕಿನ ಭಾಗವಾಗಿ ಆಕ್ರಮಣಕಾರಿ ಕೃತ್ಯಕ್ಕೆ ಉಗ್ರವಾಗಿ ಪ್ರತಿಕ್ರಿಯಿಸುತ್ತದೆ, ಆದ್ದರಿಂದ ನಾವು ಅದನ್ನೇ ಮಾಡುತ್ತೇವೆ.** -ಬಘೈ

ಮೇಲೆ ದಾಳಿ ಮಾಡುವ ಸಂಭಾವ್ಯದ ಅಪಾಯಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.ಇದು ದೀರ್ಘಕಾಲದ ಸಂಘರ್ಷದಲ್ಲಿ ಸಿಲುಕಿಕೊಳ್ಳುವುದು ಮತ್ತು ಅಮೆರಿಕದಲ್ಲಿ ಸಾವುನೋವುಗಳ ಸಾಧ್ಯತೆಯ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಇದರ ಮಾಧ್ಯಮ ವರದಿಗಳನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಟೀಕಿಸಿದ್ದಾರೆ.ಇರಾನ್ ಜೊತೆ ಯುದ್ಧವನ್ನು ಸುಲಭವಾಗಿ ಗೆಲ್ಲಬಹುದು ಎಂದು ಕೇನ್ ನಂಬುತ್ತಾರೆ, ಇರಾನ್ ಹಲವಾರು ಬೇಡಿಕೆಗಳನ್ನು ಸ್ವೀಕರಿಸದಿದ್ದರೆ ದಾಳಿಯ ನಿಸ್ಚಿತ ಎಂದಿದ್ದಾರೆ.

## ಏಕರೂಪ ನಾಗರಿಕ ಸಂಹಿತೆ ಜಾರಿಗೆ ಆರ್‌ಎಸ್‌ಎಸ್ ಒಲವು

**ಡೆಹ್ರಾಡೂನ್:** ಉತ್ತರಾಖಂಡದಲ್ಲಿ ಜಾರಿಗೆ ತಂದಿರುವ ಏಕರೂಪ ನಾಗರಿಕ ಸಂಹಿತೆಯ ಮಾದರಿಯಲ್ಲಿ ದೇಶಾದ್ಯಂತ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಬೇಕೆಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಪ್ರತಿಪಾದಿಸಿದ್ದಾರೆ. ಸಮಾಜವನ್ನು ಒಗ್ಗೂಡಿಸಲು ಇದು ಅತ್ಯಗತ್ಯ ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) 100 ನೇ ವಾರ್ಷಿಕೋತ್ಸವದಲ್ಲಿ ನಡೆದ ಮಾಜಿ ಸೈನಿಕರ ಕಾರ್ಯಕ್ರಮದಲ್ಲಿ, ಭಾಗವತ್, ಯುಸಿಸಿ ಜಾರಿಗೆ ಬಂದರೆ ಅದು ತುಂಬಾ ಒಳ್ಳೆಯದು ಎಂದಿದ್ದಾರೆ.

ಅದು ದೇಶಾದ್ಯಂತ ನಡೆದರೆ ಒಳ್ಳೆಯದು. ಇದನ್ನು ಈ ರೀತಿ (ಉತ್ತರಾಖಂಡದಂತೆ) ಜಾರಿಗೆ ತರಬೇಕು ಎಂದು ನಾನು ನಂಬುತ್ತೇನೆ ಎಂದು ಹೇಳಿದರು. ಕಳೆದ ವರ್ಷ ಜನವರಿ 27 ರಂದು ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೆ ತಂದ ದೇಶದ ಮೊದಲ ರಾಜ್ಯ ಉತ್ತರಾಖಂಡ.

ಸಮಾಜವನ್ನು ಒಗ್ಗೂಡಿಸಲು ಯುಸಿಸಿ ಅತ್ಯಗತ್ಯ ಎಂದು ಹೇಳಿದ ಆರ್‌ಎಸ್‌ಎಸ್ ಮುಖ್ಯಸ್ಥರು, ಉತ್ತರಾಖಂಡದ ಕರಡು ಪ್ರಸ್ತಾವನೆಯನ್ನು ಸಾರ್ವಜನಿಕ ಚರ್ಚೆಗೆ ಒಳಪಡಿಸಿದ ನಂತರ, ಅದು 3 ಲಕ್ಷ ಜನರಿಂದ ಸಲಹೆಗಳನ್ನು ಪಡೆದುಕೊಂಡಿತು, ಅವೆಲ್ಲವನ್ನೂ ಪರಿಶೀಲಿಸಲಾಯಿತು ಎಂದು ಹೇಳಿದರು. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ತಡೆಯುವ ಗುರಿಯನ್ನು ಹೊಂದಿರುವ ಯುಜಿಸಿ ನಿಯಮಗಳ ಬಗ್ಗೆ ಕೇಳಿದಾಗ, ಭಾಗವತ್ ಪ್ರತಿಕ್ರಿಯಿಸಲು ನಿರಾಕರಿಸಿದರು, ಈ ವಿಷಯವು ಪ್ರಸ್ತುತ ಸುಪ್ರೀಂ ಕೋರ್ಟ್ ಮುಂದೆ ಇದೆ ಎಂದು ಹೇಳಿದರು. ಸೇನಾ ಮತ್ತು ಅರೆಸೈನಿಕ ಪಡೆಗಳ ಅನುಭವಿಗಳು ಮತ್ತು ಸೇವೆ ಸಲ್ಲಿಸುತ್ತಿರುವ ಅಧಿಕಾರಿಗಳು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಆರ್‌ಎಸ್‌ಎಸ್ ಮುಖ್ಯಸ್ಥರು, ದೇಶವು ಸ್ವತಂತ್ರವಾಗಿದ್ದರೂ, ಸ್ವಾತಂತ್ರ್ಯವನ್ನು ಕಾಪಾಡಲು ರಕ್ಷಣಾ ಪಡೆಗಳು ಯಾವಾಗಲೂ ಅಗತ್ಯವಾಗಿರುತ್ತದೆ ಎಂದು ಹೇಳಿದರು.




## ಪುರಾತನ ದೇವಾಲಯ ಕೆಡವಿ ಕಮಲ್ ಮೌಲಾ ಮಸೀದಿ ನಿರ್ಮಿಸಲಾಗಿದೆ : ಭಾರತೀಯ ಪುರಾತತ್ವ ಸಮೀಕ್ಷೆಯ ವರದಿ

**ಧಾರ್:** ಮಧ್ಯಪ್ರದೇಶದ ಧಾರ್ ಜಿಲ್ಲೆಯ ಭೋಜ್‌ಶಾಲಾ ಸಂಕೀರ್ಣದೊಳಗೆ ಇರುವ ಕಮಲ್ ಮೌಲಾ ಮಸೀದಿಯನ್ನು ಪ್ರಾಚೀನ ದೇವಾಲಯದ ಅವಶೇಷಗಳನ್ನು ಬಳಸಿಕೊಂಡು ನಿರ್ಮಿಸಲಾಗಿದೆ ಎಂದು ಭಾರತೀಯ ಪುರಾತತ್ವ ಸಮೀಕ್ಷೆಯ ವರದಿ ಹೇಳಿದೆ. ತನ್ನ ತನಿಖಾ ವರದಿಯಲ್ಲಿ ಪ್ರಾಚೀನ ದೇವಾಲಯಗಳ ಅವಶೇಷಗಳನ್ನು ಬಳಸಿ ಮಸೀದಿಯನ್ನು ನಿರ್ಮಿಸಲಾಗಿದೆ ಎನ್ನುವುದು ವೈಜ್ಞಾನಿಕ ತನಿಖೆ, ಸಮೀಕ್ಷೆಗಳು, ಉತ್ಖನನಗಳು, ಉತ್ಖನನ ಅವಶೇಷಗಳ ಅಧ್ಯಯನ ಮತ್ತು ವಾಸ್ತುಶಿಲ್ಪದ ರಚನೆಗಳು, ಶಾಸನಗಳು, ಕಲೆ ಮತ್ತು ಶಿಲ್ಪಗಳ ವಿಶ್ಲೇಷಣೆಯನ್ನು ಆಧರಿಸಿದೆ.

ಈ ಎಎಸ್‌ಐ ವರದಿಯನ್ನು ಮಧ್ಯಪ್ರದೇಶ ಹೈಕೋರ್ಟ್‌ನ ಇಂದೋರ್ ಪೀಠಕ್ಕೆ ಸಲ್ಲಿಸಲಾಗಿತ್ತು, 10 ಸಂಪುಟಗಳಲ್ಲಿ ಬಿಡುಗಡೆ ಮಾಡಲಾದ ಸುಮಾರು 2,000 ಪುಟಗಳ ವರದಿಯನ್ನು ಹೆಚ್ಚುವರಿ ಮಹಾನಿರ್ದೇಶಕ ಅಲೋಕ್ ತ್ರಿಪಾಠಿ ನೇತೃತ್ವ ವಹಿಸಿದ್ದರು.


ಉತ್ಖನನದ ಸಮಯದಲ್ಲಿ ಒಟ್ಟು 94 ಶಿಲ್ಪಗಳು ಮತ್ತು ಅವುಗಳ ಅವಶೇಷಗಳು ಕಂಡುಬಂದವು, ಅವುಗಳಲ್ಲಿ ಹಲವು ಹಾನಿಗೊಳಗಾಗಿದ್ದವು. ಇವುಗಳಲ್ಲಿ ಗಣೇಶ, ಬ್ರಹ್ಮ, ನರಸಿಂಹ ಮತ್ತು ಭೈರವ ಸೇರಿದಂತೆ ಹಲವಾರು ದೇವತೆಗಳ ಕೆತ್ತನೆಗಳು ಹಾಗೂ ಮಾನವ ಮತ್ತು ಪ್ರಾಣಿಗಳ ಆಕೃತಿಗಳು ಸೇರಿವೆ. ಈ ಸ್ಥಳವು ಸರಸ್ವತಿ ದೇವಿಗೆ ಅರ್ಪಿತವಾದ ಪ್ರಾಚೀನ ದೇವಾಲಯವಾಗಿರಬಹುದು



ಎಂದು ಎಎಸ್‌ಐ ಸೂಚಿಸಿದೆ. ಅರ್ಜಿದಾರರು ಮತ್ತು ಹಿಂದೂ ಫ್ರಂಟ್ ಫಾರ್ ಜಸ್ಟೀಸ್‌ನ ರಾಜ್ಯ ಉಪಾಧ್ಯಕ್ಷ ಆಶಿಶ್ ಗೋಯಲ್, ಎಎಸ್‌ಐ ಸಮೀಕ್ಷೆಯು ಸಂಪೂರ್ಣ ರಚನೆಯು ಪರ್ಮಾರ್ ರಾಜವಂಶದ ಹಿಂದಿನದು ಮತ್ತು ರಾಜ ಭೋಜ್ ಮತ್ತು ಅವರ ಪೂರ್ವಜರಿಂದ ನಿರ್ಮಿಸಲ್ಪಟ್ಟಿದೆ ಎಂದು ಸ್ಪಷ್ಟವಾಗಿ ತೋರಿಸುತ್ತದೆ ಎಂದು ಹೇಳಿದ್ದಾರೆ. ಭೋಜ್ ಉತ್ಸವ ಸಮಿತಿ ಸಂಚಾಲಕ ಅಶೋಕ್ ಜೈನ್ ಮಾತನಾಡಿ, ನಮ್ಮ ಬೇಡಿಕೆ ಮೊದಲಿನಿಂದಲೂ ಸ್ಪಷ್ಟವಾಗಿದೆ, ಸ್ಥಳವು ಮಸೀದಿಯಾಗಿದ್ದರೆ, ಅದನ್ನು ಮುಸ್ಲಿಂ ಕಡೆಯವರಿಗೆ ನೀಡಬೇಕು ಮತ್ತು ಅದು ದೇವಾಲಯವಾಗಿದ್ದರೆ, ಅದನ್ನು ಹಿಂದೂ ಕಡೆಯವರಿಗೆ ನೀಡಬೇಕು ಎಂದು ಹೇಳಿದರು.

## ಟ್ರಂಪ್ ಸುಂಕ ಬೆದರಿಕೆ ಷೇರು ಪೇಟೆ ತಲ್ಲಣ

**ಮುಂಬೈ:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತೊಂದು ಸುಂಕ ಬೆದರಿಕೆ ಹಾಕಿದ ಹಿನ್ನೆಲೆಯಲ್ಲಿ ಷೇರುಪೇಟೆ ತಲ್ಲಣವಾಗಿದೆ. ಇದರಿಂದ ಷೇರುದಾರರಲ್ಲಿ ಆತಂಕ ಮನೆ ಮಾಡಿದೆ. ದಿನದ ಆರಂಭಿಕ ವಹಿವಾಟಿನಲ್ಲಿ ಭಾರತೀಯ ಷೇರು ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 1 ರಷ್ಟು ಕುಸಿತ ಕಂಡವು. ಎಐ ಬೆಳವಣಿಗೆ ಆತಂಕಗಳ ನಡುವೆ ಐಟಿ ಷೇರುಗಳಲ್ಲಿ ತೀವ್ರ ಮಾರಾಟ ಕುಸಿತಕ್ಕೆ ಕಾರಣವಾಗಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇತ್ತೀಚಿನ ಸುಂಕದ ಹೇಳಿಕೆಗಳ ನಂತರ ಕಚ್ಚಾ ತೈಲ ಬೆಲೆ ಏರಿಕೆ ಮತ್ತು ಜಾಗತಿಕ ವ್ಯಾಪಾರದ ಬಗ್ಗೆ ಮತ್ತೆ ಹೂಡಿಕೆದಾರರ ಭಾವನೆಯ ಮೇಲೆ ಪರಿಣಾಮ ಬೀರಿವೆ ಎಂದು ವ್ಯಾಪಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ. 30 ಷೇರುಗಳ ಬಿಎಸ್‌ಇ ಸೆನ್ಸೆಕ್ಸ್ 813.13 ಅಂಶಗಳಷ್ಟು, ಅಂದರೆ ಶೇ 0.97 ರಷ್ಟು ಕುಸಿದು 82,481.53ರಲ್ಲಿ ವಹಿವಾಟು ಆರಂಭಿಸಿತ್ತು. 50-ಷೇರುಗಳ ಎನ್‌ಎಸ್‌ಇ ನಿಫ್ಟಿ 230.15 ಅಂಶ ಅಥವಾ ಶೇ 0.89 ರಷ್ಟು ಕುಸಿದು 25,482.85ರಲ್ಲಿ ವಹಿವಾಟು ಆರಂಭಿಸಿತ್ತು. ಸೆನ್ಸೆಕ್ಸ್ ಸಂಸ್ಥೆಗಳ ಪೈಕಿ ಎಟರ್ನಲ್ ಶೇ 3.82ರಷ್ಟು ಕುಸಿದಿದ್ದು, ನಂತರದ ಸ್ಥಾನದಲ್ಲಿ ಎಚ್‌ಸಿಎಲ್ ಟೆಕ್ನಾಲಜೀಸ್, ಇನ್ಫೋಸಿಸ್, ಟೆಕ್ ಮಹೀಂದ್ರಾ, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಭಾರ್ತಿ ಏರ್ಟೆಲ್, ಬಜಾಜ್ ಫೈನಾನ್ಸ್, ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಟ್ರೆಂಟ್, ಅದಾನಿ ಪೋರ್ಟ್ಸ್, ಐಟಿಸಿ ಮತ್ತು ಟೈಟಾನ್ ಷೇರುಗಳು ಇವೆ. ಬ್ಯಾಂಕ್, ಪವರ್‌ಗ್ರಿಡ್, ಏಷ್ಯನ್ ಪೇಂಟ್ಸ್, ಕೋಟಕ್ ಮಹೀಂದ್ರ ಬ್ಯಾಂಕ್ ಮತ್ತು ಟಾಟಾ ಸ್ಟೀಲ್ ಷೇರುಗಳು ಲಾಭ ಗಳಿಸಿವೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಾಡಲಿರುವ ಭಾಷಣದ ಬಗ್ಗೆ ಜಾಗತಿಕವಾಗಿ ಹೂಡಿಕೆದಾರರು ಕುತೂಹಲದಿಂದ ವೀಕ್ಷಿಸುತ್ತಿದ್ದಾರೆ ಎಂದು ವರದಿ ತಿಳಿಸಿದೆ. ಅಮೆರಿಕ ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಐರೋಪ್ಯ ಒಕ್ಕೂಟ, ಬ್ರಿಟನ್‌ನಂತಹ ಜಾಗತಿಕ ಮಿತ್ರರಾಷ್ಟ್ರಗಳು ಅಮೆರಿಕ ಜೊತೆಗಿನ ವ್ಯಾಪಾರ ಒಪ್ಪಂದಗಳ ಮರುಪರಾಮರ್ಶೆಗೆ ಮುಂದಾಗಿವೆ ಎಂಬ ವರದಿಗಳ ಬೆನ್ನಲ್ಲೇ ಟ್ರಂಪ್ ಭಾರಿ ಸುಂಕ ಏರಿಕೆಯ ಬೆದರಿಕೆ ಹಾಕಿದ್ದಾರೆ. ಇದೂ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ ಎನ್ನುತ್ತಾರೆ ತಜ್ಞರು. ಭಾರತವೂ ಸಹ ಮಧ್ಯಂತರ ವ್ಯಾಪಾರ ಒಪ್ಪಂದದ ಕುರಿತಾದ ಮಾತುಕತೆಗೆ ನಿಗದಿಯಾಗಿದ್ದ ಸಭೆಯನ್ನು ಮುಂದೂಡಿತ್ತು. ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕಾಸ್ಪಿ, ಶಾಂಘೈನ ಎಸ್‌ಎಸ್‌ಇ ಕಾಂಪೊಸಿಟ್ ಇಂಡೆಕ್ಸ್ ಮತ್ತು ಜಪಾನ್‌ನ ನಿಕ್ಕಿ 225 ಬೆಂಚ್‌ಮಾರ್ಕ್‌ಗಳು ಏರಿಕೆಯೊಂದಿಗೆ ವಹಿವಾಟು ನಡೆಸುತ್ತಿದ್ದರೆ, ಹಾಂಗ್ ಕಾಂಗ್‌ನ ಹ್ಯಾಂಗ್ ಇಳಿಕೆ ಕಂಡಿದೆ. ವಹಿವಾಟಿನಲ್ಲಿ ಅಮೆರಿಕ ಷೇರು ಮಾರುಕಟ್ಟೆಯಲ್ಲಿ ಸುಮಾರು ಶೇ 2ರಷ್ಟು ಕುಸಿತದೊಂದಿಗೆ ಕೊನೆಗೊಂಡಿತ್ತು.




# ಆಸ್ಟ್ರೇಲಿಯಾದಲ್ಲಿ ಹೆಚ್ಚಾಗುತ್ತಿರುವ ಭಾರತೀಯ ವಿರೋಧಿ ಭಾವನೆ

### ಆಸ್ಟ್ರೇಲಿಯಾ 3ನೇ ಜಗತ್ತಿನ ರಾಷ್ಟ್ರವಾದ ಭಾರತ ಆಗೋದು ಬೇಡ: ನವ-ನಾಜಿ ಕಾರ್ಯಕರ್ತನ ಅತಿರೇಕದ ಹೇಳಿಕೆ

**ಸಿಡ್ನಿ:** ತಮ್ಮ ತಾಯ್ನಾಡಿನ ನೆಲ,ಜಲ ಹಾಗೂ ಸಂಸ್ಕೃತಿಯ ಬಗ್ಗೆ ನಮಗೆ ಗೌರವವಿರಬೇಕು ನಿಜ. ಆದರೆ, ಅದು ಅತಿರೇಕವಾಗಿ ಮತ್ತೊಂದು ದೇಶವನ್ನು ಕೀಳಾಗಿ ನೋಡುವುದು ಅದೆಷ್ಟು ಸರಿ. ಮೊದಲು ಮಾನವನಾಗು ಎಂಬ ಪರಿಕಲ್ಪನೆ ಭಾರತದ್ದೇ ಇರಬಹುದು, ಆದರೆ, ಇದು ಎಲ್ಲಾ ಮಾನವರಿಗೂ ಅರ್ಥವಾಗಬೇಕಾದ ಸಾಮಾನ್ಯ ಜ್ಞಾನದ ವಿಚಾರ. ಆದರೆ, ಇತ್ತೀಚಿನ ದಿನಗಳಲ್ಲಿ ತಮ್ಮ ದೇಶಕ್ಕೆ ವಲಸೆ ಬರುವವರ ಕುರಿತಂತೆ ಹಲವು ದೇಶಗಳಲ್ಲಿ ವಿರೋಧ ವ್ಯಕ್ತವಾಗುತ್ತಿದ್ದು, ಮಾನವ ಎಂಬುದನ್ನು ಮರೆತು ತಮ್ಮ ಮೂಲ ಪ್ರದೇಶ ಆಧಾರದ ಮೇಲೆ ಜನಾಂಗೀಯ ದ್ವೇಷವನ್ನು ಬಿತ್ತುವ ಕೆಲಸ ಮಾಡುತ್ತಿದ್ದಾರೆ.

ಅದರಲ್ಲೂ ಪ್ರಮುಖವಾಗಿ ಇತ್ತೀಚಿನ ಕೆಲ ವರ್ಷಗಳಲ್ಲಿ ಭಾರತ ವಿರೋಧಿ ಮನೋಭಾವನೆ ಬೆಳೆಯುತ್ತಿದ್ದು,ಆಸ್ಟ್ರೇಲಿಯಾದ ನವ-ನಾಜಿ ಕಾರ್ಯಕರ್ತನೊಬ್ಬ ಕೋರ್ಟ್ ಮುಂಭಾಗದಲ್ಲಿ ನಡೆದ ಸಂದರ್ಶನದಲ್ಲಿ ಆಸ್ಟ್ರೇಲಿಯಾವನ್ನು ನಾವು ಭಾರತವಾಗಲು ಬಿಡುವುದಿಲ್ಲ ಎಂದಿದ್ದು ಅತಿರೇಕದ ಹೇಳಿಕೆಗಳನ್ನು ನೀಡಿದ್ದಾರೆ. ಸದ್ಯ ಈ ವಿಡಿಯೋ ಸದ್ಯ ಭಾರಿ ವೈರಲ್ ಆಗುತ್ತಿದೆ.

ಆಸ್ಟ್ರೇಲಿಯಾದಲ್ಲಿ ನವ-ನಾಜಿ ಬೆಂಬಲಿತ ಸಂಘಟನೆಯಲ್ಲಿ ಗುರುತಿಸಿಕೊಂಡಿರುವ ಥಾಮಸ್ ಸೆವೆಲ್ ಎಂಬಾತ 2024ರಲ್ಲಿ



ಆಸ್ಟ್ರೇಲಿಯಾದಲ್ಲಿ ಶಾಶ್ವತ ನಿವಾಸವನ್ನು ಪಡೆಯಲು ಬಯಸುವ ವಲಸಿಗರ ವಿರುದ್ಧ ನಡೆದ ಪ್ರತಿಭಟನಾ ರ್‍ಯಾಲಿಗಳ ಪ್ರಮುಖ ರೂವಾರಿ ಎಂಬ ಆರೋಪದ ಮೇಲೆ ನ್ಯಾಯಾಂಗ ವಿಚಾರಣೆಯನ್ನು ಎದುರಿಸುತ್ತಿದ್ದಾನೆ. ಹೀಗೆ ನ್ಯಾಯಾಲಯದಲ್ಲಿ ವಿಚಾರಣೆ ಬಳಿಕ ಅದರ ಮುಂಭಾಗದಲ್ಲಿ ಮಾಧ್ಯಮದೊಂದಿಗೆ ಮಾತನಾಡುವ ವೇಳೆ ಅತಿರೇಕದ ಹೇಳಿಕೆಗಳನ್ನು ನೀಡಿದ್ದಲ್ಲದೆ, ಇದಕ್ಕೆ ವಿರೋಧ

- ಆಸ್ಟ್ರೇಲಿಯಾವನ್ನು ಭಾರತದಂತೆ 3ನೇ ಜಗತ್ತಾಗುವುದನ್ನು ನೋಡಲು ಬಯಸುವುದಿಲ್ಲ ಎಂದು ಅತಿರೇಕದ ಹೇಳಿಕೆ ಕೊಟ್ಟ ನವ-ನಾಜಿ ಕಾರ್ಯಕರ್ತ
- ವಲಸಿಗರು ಶ್ವೇತವರ್ಣೀಯರನ್ನು ಬದಲಿ ಮಾಡಿ ನಮ್ಮ ಹಕ್ಕುಗಳನ್ನು ಕಸಿದುಕೊಳ್ಳುತ್ತಿದ್ದಾರೆಂದು ಆರೋಪ

ವ್ಯಕ್ತಪಡಿಸಿದ ಮಾಧ್ಯಮದವರನ್ನೇ ಅಸಭ್ಯ ಪದಗಳಿಂದ ನಿಂದಿಸಿದ್ದಾನೆ.

**ಆಸ್ಟ್ರೇಲಿಯಾದಲ್ಲಿ ಹೆಚ್ಚಿನ ಸಂಖ್ಯೆ ಭಾರತೀಯರನ್ನು ನೋಡಲು ಬಯಸುವುದಿಲ್ಲ:** ಮಾಧ್ಯಮಗಳೊಂದಿಗೆ ಮಾತನಾಡಿದ ಸಮಯದಲ್ಲಿ ಈ ಸೆವೆಲ್ ಸಾಮಾನ್ಯ ಆಸ್ಟ್ರೇಲಿಯನ್ನರು ಯಾರೂ ಸಹ ನಮ್ಮ ದೇಶದಲ್ಲಿ ಮಿಲಿಯನ್ ಗಟ್ಟಲೆಯಾಗಿ ಭಾರತೀಯ ವಲಸಿಗರು ಬಂದು ತುಂಬುವುದನ್ನು ನೋಡಲು ಬಯಸುವುದಿಲ್ಲ. ಇವರು ನಮ್ಮ ದೇಶದಲ್ಲಿ ಇವರು ತಮ್ಮ ಹಕ್ಕನ್ನು ಸಾಧಿಸಲು ಪ್ರತಿಪಾದಿಸುವುದರ ವಿರುದ್ಧ ನಾನು ಪ್ರತಿಭಟಿಸಿದ್ದೇವೆ. ಇದಕ್ಕಾಗಿ ಇವರು ನನ್ನ ಮೇಲೆ ಕೇಸ್ ಹಾಕಿದ್ದಾರೆ ಎಂದಿದ್ದಾನೆ. ಈ ವೇಳೆ, ಅಲ್ಲಿರುವ ಒಬ್ಬರು ಆತನಿಗೆ ಅಡ್ಡಿಪಡಿಸಲು ಪ್ರಯತ್ನಿಸಿದಾಗ ಆತನನ್ನು ಅಸಭ್ಯ ಪದಗಳಿಂದ ಬೈದಿದ್ದಾನೆ.

ಇದಾದ ಬಳಿಕ ನಿಮ್ಮ ಈ ರ್‍ಯಾಲಿಯಿಂದ ದೇಶದ ತೆರಿಗೆದಾರರು ಅತೃಪ್ತರಾಗಿದ್ದಾರೆ ಎಂದು ಮಾಧ್ಯಮದವರು ಹೇಳಿದಾಗ ಇದಕ್ಕೆ ಉತ್ತರಿಸಿ ನೀವು ಮೀಡಿಯಾದವರು ತೆರಿಗೆದಾದರ ಪರವಾಗಿ ಮಾತನಾಡುತ್ತಿಲ್ಲ, ಬದಲಾಗಿ ನೀವು ಆಸ್ಟ್ರೇಲಿಯಾ ವಿರೋಧಿ ಕಾರ್ಪೊರೇಟ್ ಸಂಸ್ಥೆಯ ಭಾಗವಾಗಿದ್ದು, ಅವರ ಪರವಾಗಿ ಮಾತನಾಡುತ್ತೀರಿ. ಇದು ಕೇವಲ ಆಸ್ಟ್ರೇಲಿಯಾದಲ್ಲಿ ಮಾತ್ರವಲ್ಲ ಯುರೋಪ್‌ನಲ್ಲಿಯೂ ಸಹ ಈ ವಲಸಿಗರು ನಮ್ಮ ಬಿಳಿಯರ ಜನಸಂಖ್ಯೆಯನ್ನು ಕಡಿಮೆ ಮಾಡುತ್ತಾ ಶ್ವೇತವರ್ಣೀಯರನ್ನು ಬದಲಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದಿದ್ದಾನೆ.

**ಆಸ್ಟ್ರೇಲಿಯಾ ಭಾರತವಾಗಲು ಬಯಸುವುದಿಲ್ಲ ಎಂಬ ಹೇಳಿಕೆ** ಮುಂದುವರೆದು, ಆದರೆ ನಾವು ಆಸ್ಟ್ರೇಲಿಯಾ ಮೂರನೇ ಜಗತ್ತಿನ ರಾಷ್ಟ್ರವಾಗುವುದನ್ನು ಬಯಸುವುದಿಲ್ಲ. ಇದು ಭಾರತವಾಗುವುದನ್ನು ನಾವು ಬಯಸುವುದಿಲ್ಲ ಅಥವಾ ಇದು ಸುಡಾನ್ ಆಗಿ ಬದಲಾಗುವುದನ್ನು ನಾವು ಬಯಸುವುದಿಲ್ಲ. ಇದು ಆಸ್ಟ್ರೇಲಿಯಾವಾಗಿ ಉಳಿಯಬೇಕೆಂದು ನಾವು ಬಯಸುತ್ತೇವೆ. ಅದು ಪ್ರಾಥಮಿಕ ವಿಷಯವಾಗಿದೆ. ಮಾಧ್ಯಮಗಳು ಈ ಬಗ್ಗೆ ಮಾತನಾಡಲು ಇಚ್ಛಿಸುವುದಿಲ್ಲ ಎಂದು ತಿಳಿಸಿದ್ದಾನೆ. ಹೀಗೆ ತನ್ನ ದೇಶದ ಮೇಲಿನ ಅತಿಯಾದ ಪ್ರೀತಿಯಿಂದ ವಲಸಿಗರ ಮೇಲೆ ದ್ವೇಷದ ಮನೋಭಾವನೆಯನ್ನು ಹೊಂದಿರುವುದಲ್ಲದೇ ಜನಾಂಗೀಯ ದ್ವೇಷದ ಹೇಳಿಕೆಗಳನ್ನು ನೀಡಿದ್ದು, ಅದಕ್ಕೆ ವಿರೋಧಿಸಿದ ಮಾಧ್ಯಮದವರು ಹಾಗೂ ಅಲ್ಲಿ ನೆರೆದಿದ್ದ ತಮ್ಮವರನ್ನೇ ನಿಂದಿಸಿದ್ದಾನೆ.

### ಮಾಧ್ಯಮದವರ ವಿರುದ್ಧವೇ ಕಿಡಿ

**ಇನ್ನು, 2024ರಲ್ಲಿ ವಲಸಿಗರ ವಿರುದ್ಧ ವಲಸೆ ಸಚಿವ ಟೋನಿ ಬರ್ಕ್ ಕಚೇರಿ ಎದುರು ನಡೆಸಿದ ರ್‍ಯಾಲಿ ಪ್ರತಿಭಟನೆಯಲ್ಲಿ ಅತಿರೇಕ ವರ್ತನೆಯೊಂದಿಗೆ ಈ ಪ್ರತಿಭಟನೆಯ ನೇತೃತ್ವ ವಹಿಸಿದ್ದಾಕ್ಕಾಗಿ ಈ ಥಾಮಸ್ ಸೆವೆಲ್ ಎಂಬಾತನ ವಿರುದ್ಧ ಕೇಸ್ ದಾಖಲಿಸಲಾಗಿದ್ದು, ಇದಕ್ಕೆ ವಿರೋಧ ವ್ಯಕ್ತ ಪಡಿಸಿರುವ ಈತ ಪ್ರತಿಭಟನಾಕಾರರು ಸ್ವಯಂ-ಹಕ್ಕು ಹೊಂದಿದ್ದು, ಅಧಿಕಾರಿಗಳು ತಮ್ಮನ್ನು ಅನ್ಯಾಯವಾಗಿ ಗುರಿಯಾಗಿಸಿಕೊಂಡು ಹೆಚ್ಚು ಅಸಂಬದ್ಧ ಆಕ್ರಮಣಕಾರಿ ನಡವಳಿಕೆಯ ಆರೋಪಗಳು ಹೊರಿಸಿದ್ದಾರೆ ಎಂದು ಆರೋಪಿಸಿದ್ದಾನೆ. ಈ ವೇಳೆ, ಇದಕ್ಕೆ ವಿರೋಧ ವ್ಯಕ್ತಪಡಿಸಿ ನೀವು ಈ ವಿಚಾರದಲ್ಲಿ ತಪ್ಪಿತಸ್ಥನೆಂದು ಒಪ್ಪಿಕೊಳ್ಳುತ್ತಿರಿಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಕೆರಳಿದ ಸೆವೆಲ್ ಮಾಧ್ಯಮದವರನ್ನೇ ಅಸಭ್ಯ ಪದಗಳನ್ನು ಬಳಸಿ ನಿಂದಿಸಲು ಮುಂದಾಗಿದ್ದಾನೆ.**



# ವಿಜಯ್ ಪಾಲಕರಿಂದ ರಶ್ಮಿಕಾಗೆ ಷರತ್ತು

ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಅವರ ವಿವಾಹ ಸಮೀಪಿಸುತ್ತಿದ್ದು, ಈ ಕುರಿತು ವರದಿಯಾಗಿದೆ. ವಿಜಯ್ ಪೋಷಕರು ರಶ್ಮಿಕಾಗೆ ಷರತ್ತು ಹಾಕಿದ್ದಾರೆಂಬ ಸುದ್ದಿ ಹರಡಿದೆ. ಆದರೆ, ಅವರ ನಿಜವಾದ ನಿರೀಕ್ಷೆಯೆಂದರೆ ಸೊಸೆ ವಿಜಯ್‌ನನ್ನು ಪ್ರೀತಿಸಬೇಕು, ಅವನ ವೃತ್ತಿಯನ್ನು ಅರ್ಥಮಾಡಿಕೊಳ್ಳಬೇಕು. ಜಾತಿ, ಧರ್ಮದ ಬಗ್ಗೆ ಯಾವ ಆಕ್ಷೇಪಣೆಯೂ ಇಲ್ಲ, ಭಾರತೀಯ ಹುಡುಗಿಯಾದರೆ ಸಂತೋಷ ಎಂದು ಪೋಷಕರು ಸ್ಪಷ್ಟಪಡಿಸಿದ್ದರು.

ವಿಜಯ್ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ಅವರ ವಿವಾಹ ಸಮೀಪಿಸುತ್ತಿದೆ. ಅವರ ವಿವಾಹವು ಫೆಬ್ರವರಿ 26ರಂದು ರಾಜಸ್ಥಾನದ ಉದಯಪುರದಲ್ಲಿ ನಡೆಯಲಿದೆ. ಈ ಅದ್ದೂರಿ ವಿವಾಹದಲ್ಲಿ ಕುಟುಂಬ ಸದಸ್ಯರು, ಆಪ್ತರು ಮತ್ತು ಸಂಬಂಧಿಕರು ಮಾತ್ರ ಭಾಗವಹಿಸಲಿದ್ದಾರೆ ಎಂದು ತೋರುತ್ತದೆ.

ಆದಾಗ್ಯೂ, ಮಾರ್ಚ್ 04 ರಂದು ಹೈದರಾಬಾದ್‌ನಲ್ಲಿ ಆರತಕ್ಷತೆ ಆಯೋಜಿಸಲಾಗಿದೆ ಎಂದು ವರದಿಯಾಗಿದೆ. ಈಗ ವಿಜಯ್ ಪಾಲಕರು ರಶ್ಮಿಕಾಗೆ ಹಾಕಿದ ಷರತ್ತಿನ ಬಗ್ಗೆ ಚರ್ಚೆ ನಡೆದಿದೆ. ಇಲ್ಲಿಯವರೆಗೆ ತಮ್ಮ ಪ್ರೀತಿ ಮತ್ತು ಮದುವೆಯ ಬಗ್ಗೆ ಮೌನವಾಗಿದ್ದ ವಿಜಯ್ ಮತ್ತು ರಶ್ಮಿಕಾ, ತಮ್ಮ ಅದ್ದೂರಿ ವಿವಾಹದ ಬಗ್ಗೆ ಅಧಿಕೃತ ಘೋಷಣೆಯನ್ನು ಮಾಡಿದರು.

ತಮ್ಮ ಅಭಿಮಾನಿಗಳ ಕೋರಿಕೆಯ ಮೇರೆಗೆ ತಮ್ಮ ವಿವಾಹ ಸಮಾರಂಭಕ್ಕೆ 'ವಿರೋಷ್' ಎಂದು ಹೆಸರಿಟ್ಟಿದ್ದಾರೆ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಬಹಿರಂಗಪಡಿಸಿದ್ದಾರೆ. ಈ ಸಂದರ್ಭದಲ್ಲಿ, ವಿಜಯ್ ದೇವರಕೊಂಡ ಅವರ ಪೋಷಕರು ತಮ್ಮ ಭಾವಿ ಸೊಸೆ ಹೊಂದಿರಬೇಕಾದ ಗುಣಗಳ ಬಗ್ಗೆ ಮಾತನಾಡುತ್ತಿರುವ ವಿಡಿಯೋ ಈಗ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ.

ವಿಜಯ್ ನಟಿಸಿದ ಚಿತ್ರ, ಒಂದರ ಸಕ್ಸಸ್ ಮೀಟ್ ಅಲ್ಲಿ ನಿರೂಪಕಿ ಸುಮಾ ವಿಜಯ್ ಅವರ ಪೋಷಕರೊಂದಿಗೆ ಮಾತನಾಡುವಾಗ ಅವರ ಮದುವೆಯ ವಿಷಯವನ್ನು ಪ್ರಸ್ತಾಪಿಸಿದರು. ಸುಮಾ ವಿಜಯ್ ಅವರ ತಾಯಿ ಮಾಧವಿ ಅವರನ್ನು ಯಾವ ರೀತಿಯ ಸೊಸೆ ಬೇಕು ಎಂದು ಕೇಳಿದಾಗ, ಅವರು ಒಂದೇ ಒಂದು ಷರತ್ತು ಹೊಂದಿದ್ದಾರೆಂದು ಹೇಳಿದರು.

# ಯೂರೋಪಿನ ಸುಂದರ ದೇಶದಲ್ಲಿ ಚಿತ್ರೀಕರಣ



ರಾಜಮೌಳಿ ರಾಮಾಯಣದ ಕತೆಯನ್ನು ಫ್ಯಾಂಟಸಿ, ಆಕ್ಷನ್ ಥ್ರಿಲ್ಲರ್ ಕತೆಯೊಟ್ಟಿಗೆ ಬೆಸೆದು ಅದ್ದೂರಿಯಾಗಿ 'ವಾರಣಾಸಿ' ಸಿನಿಮಾವನ್ನು ಚಿತ್ರೀಕರಣ ಮಾಡುತ್ತಿದ್ದು, ಸಿನಿಮಾವನ್ನು ಭಾರತ ಮಾತ್ರವೇ ಅಲ್ಲದೆ ಬೇರೆ ಬೇರೆ ದೇಶಗಳಲ್ಲಿಯೂ ಚಿತ್ರೀಕರಣ ಮಾಡುತ್ತಿದ್ದಾರೆ.

ಈಗಾಗಲೇ ಸಿನಿಮಾವನ್ನು ಮಸ್ಸೈಮಾರಾ ಸೇರಿದಂತೆ ಇನ್ನೂ ಕೆಲವು ಪ್ರಮುಖ ತಾಣಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಇದೀಗ ರಾಜಮೌಳಿ ಅವರು ತಮ್ಮ ತಂಡವನ್ನು ಕಡೆದುಕೊಂಡು ಯೂರೋಪಿನ ಸುಂದರ ದೇಶಕ್ಕೆ ಹೋಗಿದ್ದಾರೆ.

ರಾಜಮೌಳಿ ನಿರ್ದೇಶಿಸಿ ಮಹೇಶ್ ಬಾಬು, ಪ್ರಿಯಾಂಕಾ ಚೋಪ್ರಾ, ಮತ್ತು ಪೃಥ್ವಿರಾಜ್ ಸುಕುಮಾರ್ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿರುವ 'ವಾರಣಾಸಿ' ಸಿನಿಮಾ ವಿಶ್ವದ ಬಹುನಿರೀಕ್ಷಿತ ಸಿನಿಮಾಗಳಲ್ಲಿ ಒಂದೆನಿಸಿಕೊಂಡಿದೆ. ರಾಜಮೌಳಿ ರಾಮಾಯಣದ ಕತೆಯನ್ನು ಫ್ಯಾಂಟಸಿ, ಆಕ್ಷನ್ ಥ್ರಿಲ್ಲರ್ ಕತೆಯೊಟ್ಟಿಗೆ ಬೆಸೆದು ಅದ್ದೂರಿಯಾಗಿ ಸಿನಿಮಾವನ್ನು ಚಿತ್ರೀಕರಣ ಮಾಡುತ್ತಿದ್ದು, ಸಿನಿಮಾವನ್ನು ಭಾರತ ಮಾತ್ರವೇ ಅಲ್ಲದೆ ವಿವಿಧ ದೇಶಗಳಲ್ಲಿಯೂ ಚಿತ್ರೀಕರಣ ಮಾಡುತ್ತಿದ್ದಾರೆ. ಈಗಾಗಲೇ ಸಿನಿಮಾವನ್ನು ಮಸ್ಸೈಮಾರಾ ಸೇರಿದಂತೆ ಇನ್ನೂ ಕೆಲವು ಪ್ರಮುಖ ತಾಣಗಳಲ್ಲಿ ಚಿತ್ರೀಕರಣ ಮಾಡಲಾಗಿದೆ. ಇದೀಗ ರಾಜಮೌಳಿ ಅವರು ತಮ್ಮ ತಂಡವನ್ನು ಕಡೆದುಕೊಂಡು ಯೂರೋಪಿನ ಸುಂದರ ದೇಶಕ್ಕೆ ಹೋಗಿದ್ದಾರೆ.

ಮಹೇಶ್ ಬಾಬು ಮತ್ತು ಪೃಥ್ವಿರಾಜ್ ಸುಕುಮಾರ್ ಅವರ ನಡುವಿನ ಭರ್ಜರಿ ಆಕ್ಷನ್ ಸೀಕ್ವೆನ್ಸ್ ಚಿತ್ರೀಕರಣಕ್ಕಾಗಿ ರಾಜಮೌಳಿ ಅವರು ಇದೀಗ ಜಾರ್ಜಿಯಾ ದೇಶಕ್ಕೆ ಪ್ರಯಾಣ ಬೆಳೆಸಿದ್ದಾರೆ. ಪ್ರಿಯಾಂಕಾ ಚೋಪ್ರಾ ಅವರನ್ನು ಬಿಟ್ಟು ಮಹೇಶ್ ಬಾಬು ಮತ್ತು ಪೃಥ್ವಿರಾಜ್ ಸುಕುಮಾರ್ ಅವರುಗಳು ಮಾತ್ರವೇ ಜಾರ್ಜಿಯಾಕ್ಕೆ ಹೋಗಿದ್ದಾರೆ ಎನ್ನಲಾಗುತ್ತಿದೆ. ಜಾರ್ಜಿಯಾ ದೇಶದಲ್ಲಿ ನಾಯಕ ಹಾಗೂ ವಿಲನ್ ನಡುವ ಭರ್ಜರಿ ಆಕ್ಷನ್ ಸೀಕ್ವೆನ್ಸ್ ಅನ್ನು ಚಿತ್ರೀಕರಣ ಮಾಡಲಾಗುವುದಂತೆ. ಇದಕ್ಕಾಗಿ ನಟರುಗಳ ಜೊತೆಗೆ ದೊಡ್ಡ ತಾಂತ್ರಿಕ ವರ್ಗವನ್ನು ರಾಜಮೌಳಿ ಕರೆದುಕೊಂಡು ಹೋಗುತ್ತಿದ್ದಾರೆ. ಈಗಾಗಲೇ ವಾರಣಾಸಿಯಲ್ಲಿ ಕೆಲವೊಂದು ಪ್ರಮುಖ ದೃಶ್ಯಗಳ ಚಿತ್ರೀಕರಣ ಮುಗಿಸಿರುವ ರಾಜಮೌಳಿ, ಮುಂದಿನ ಹಂತದ ಚಿತ್ರೀಕರಣಕ್ಕಾಗಿ ಜಾರ್ಜಿಯಾವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅಲ್ಲಿನ ಕಡಿದಾದ ಬೆಟ್ಟಗಳು ಮತ್ತು ಸುಂದರ ಪರಿಸರದಲ್ಲಿ ಭರ್ಜರಿ ಆಕ್ಷನ್ ಸೀಕ್ವೆನ್ಸ್‌ಗಳನ್ನು ಚಿತ್ರೀಕರಿಸಲು ಪ್ಲಾನ್ ಮಾಡಲಾಗಿದೆ. ವಿಶೇಷವೆಂದರೆ, ಮಲಯಾಳಂ ಸೂಪರ್ ಸ್ಟಾರ್ ಪೃಥ್ವಿರಾಜ್ ಸುಕುಮಾರನ್ ಈ ಚಿತ್ರದಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದು, ಅವರ ಮತ್ತು ಮಹೇಶ್ ಬಾಬು ನಡುವಿನ ಜಿದ್ದಾಜಿದ್ದಿನ ದೃಶ್ಯಗಳು ಜಾರ್ಜಿಯಾದಲ್ಲಿ ಸೆರೆಯಾಗಲಿವೆ.

# ಪ್ರತಿಷ್ಠಿತ ಪ್ರಶಸ್ತಿ ಗೆದ್ದ ಭಾರತೀಯ ಸಿನಿಮಾ



ಸದ್ದೇ ಇಲ್ಲದೆ ಭಾರತೀಯ ಸಿನಿಮಾ ಒಂದು ಆಸ್ಕರ್‌ನಷ್ಟೆ ಪ್ರಮುಖವಾದ ಅಂತರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಗೆದ್ದಿದೆ. ಸಂಘರ್ಷಗಳೇ ತುಂಬಿದ್ದ ರಾಜ್ಯವೊಂದರಿಂದ ಬಂದಿರುವ ಸಿನಿಮಾ ಒಂದು ಅಂತರಾಷ್ಟ್ರೀಯ ವೇದಿಕೆಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಿನಿಮಾಕ್ಕೆ ಸಿನಿಮಾದ ತಾಂತ್ರಿಕ ವರ್ಗಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ. ಆಸ್ಕರ್ ಪ್ರಶಸ್ತಿಯಲ್ಲಿ ಭಾರತೀಯ ಸಿನಿಮಾ 'ಹೋಮ್‌ಬೌಂಡ್' ಅಂತಿಮ ಹದಿನೈದು ಸಿನಿಮಾಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು ದೊಡ್ಡ ಸುದ್ದಿಯಾಗಿತ್ತು. ಆದರೆ ಆ ಸಿನಿಮಾ ನಾಮಿನೇಷನ್ ಹಂತ ತಲುಪಲು ವಿಫಲವಾಗಿತ್ತು. ಆದರೆ ಇದೀಗ ಸದ್ದೇ ಇಲ್ಲದೆ ಭಾರತೀಯ ಸಿನಿಮಾ ಒಂದು ಆಸ್ಕರ್‌ನಷ್ಟೆ ಪ್ರಮುಖ ಅಂತರಾಷ್ಟ್ರೀಯ ಸಿನಿಮಾ ಪ್ರಶಸ್ತಿ ಗೆದ್ದಿದೆ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಿನಿಮಾಕ್ಕೆ ಸಿನಿಮಾದ ತಾಂತ್ರಿಕ ವರ್ಗಕ್ಕೆ ಅಭಿನಂದನೆ ಸಲ್ಲಿಸಿದ್ದಾರೆ.

ಮಣಿಪುರಿ ಸಿನಿಮಾ 'ಬೂಂಗ್' ಸಿನಿಮಾ ಪ್ರತಿಷ್ಠಿತ ಭಾಫ್ತಾ ಪ್ರಶಸ್ತಿ ಗೆದ್ದುಕೊಂಡಿದೆ. ಇತ್ತೀಚೆಗೆ ಆಂತರಿಕ ಸಂಘರ್ಷ, ಮಾನವ ಹಕ್ಕುಗಳ ಉಲ್ಲಂಘನೆ, ಹಿಂಸೆ ಇತ್ಯಾದಿಗಳ ಕಾರಣಕ್ಕೆ ಅಂತರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದ ಮಣಿಪುರದಿಂದ ಬಂದ ಸಿನಿಮಾ ಒಂದು ಅಂತರಾಷ್ಟ್ರೀಯ ಪ್ರಶಸ್ತಿ ಗೆದ್ದಿರುವುದನ್ನು ಹಲವಾರು ಮಂದಿ ಗಣ್ಯರು ಅಭಿನಂದಿಸಿದ್ದಾರೆ.

# ಕೊನೆಗೂ ಆರಂಭ ಆಯ್ತು 'ಕಲ್ಕಿ' ಸೀಕ್ವೆಲ್

ಪ್ರಭಾಸ್ ನಟನೆಯ 'ಕಲ್ಕಿ 2898 ಎಡಿ' ಸಿನಿಮಾದ ಸೀಕ್ವೆಲ್ ಅಧಿಕೃತವಾಗಿ ಆರಂಭವಾಗಿದೆ. ದೀಪಿಕಾ ಪಡುಕೋಣೆ ನಿರ್ಗಮನದಂತಹ ಅಡೆತಡೆಗಳ ನಂತರ, ಅಮಿತಾಭ್ ಬಚ್ಚನ್ ಅವರು ಕಮಲ್ ಹಾಸನ್ ಜೊತೆಗಿನ ಫೋಟೋ ಹಂಚಿಕೊಳ್ಳುವ ಮೂಲಕ ಚಿತ್ರೀಕರಣ ಶುರುವಾಗಿದೆ ಎಂದು ಖಚಿತಪಡಿಸಿದ್ದಾರೆ.

ದೀಪಿಕಾ ಜಾಗಕ್ಕೆ ಸಾಯಿ ಪಲ್ಲವಿ ಬರುವ ಸಾಧ್ಯತೆಯಿದೆ. ಪ್ರಭಾಸ್ ನಟನೆಯ 'ಕಲ್ಕಿ 2898 ಎಡಿ' ಸಿನಿಮಾ ರಿಲೀಸ್ ಆದ ಬಳಿಕ ಸೀಕ್ವೆಲ್ ಬರಬೇಕಿದೆ. ಆದರೆ, ಚಿತ್ರಕ್ಕೆ ಸಾಕಷ್ಟು ಅಡೆತಡೆಗಳು ಎದುರಾದವು. ಈ ಸಿನಿಮಾದಿಂದ ದೀಪಿಕಾ ಪಡುಕೋಣೆ ಹೊರ ಹೋಗಿದ್ದು, ಚಿತ್ರಕ್ಕೆ ದೊಡ್ಡ ಹಿನ್ನಡೆ ಆಯಿತು. ಸಿನಿಮಾ ನಿಲ್ಲುತ್ತೆ ಎಂದು ಕೂಡ ಹೇಳಲಾಗಿತ್ತು. ಹೀಗಿರುವಾಗಲೇ ಚಿತ್ರದ ಸೀಕ್ವೆಲ್ ಬಗ್ಗೆ ಅಪ್‌ಡೇಟ್ ಸಿಕ್ಕಿದೆ. ಈ ಸಿನಿಮಾ ಅಧಿಕೃತವಾಗಿ ಆರಂಭ ಆಗಿದೆ. ಇದು ಅಭಿಮಾನಿಗಳ ಖುಷಿ ಕೊಟ್ಟಿದೆ. 'ಕಲ್ಕಿ 2898 ಎಡಿ' ಸಿನಿಮಾಗೆ ನಾಗ್ ಅಶ್ವಿನ್ ನಿರ್ದೇಶನ ಇದೆ. ಈ ಸಿನಿಮಾ ದೊಡ್ಡ ಬಜೆಟ್‌ನಲ್ಲಿ ರೆಡಿ ಆಯಿತು. ಈ ಸಿನಿಮಾ ಸಾವಿರ ಕೋಟಿ ರೂಪಾಯಿ ಬಿಸ್ನೆಸ್ ಮಾಡಿತು. ಈ ಚಿತ್ರದ ಕಥೆ ಅರ್ಧಕ್ಕೆ ನಿಂತಿದ್ದು, ಸೀಕ್ವೆಲ್ ಬರಬೇಕಿದೆ. ಮೊದಲ ಭಾಗದಲ್ಲಿ ಪ್ರಭಾಸ್, ಅಮಿತಾಭ್ ಬಚ್ಚನ್, ಕಮಲ್ ಹಾಸನ್



ಸೀಕ್ವೆಲ್‌ನಲ್ಲಿ ದೀಪಿಕಾ ಜಾಗವನ್ನು ಸಾಯಿ ಪಲ್ಲವಿ ತುಂಬಿದ್ದಾರೆ ಎನ್ನಲಾಗಿದೆ. ಈ ಚಿತ್ರದ ಶೂಟ್ ಯಾವಾಗ ಆರಂಭ ಆಗುತ್ತದೆ ಎಂಬ ಕುತೂಹಲ ಮೂಡಿತ್ತು. ಅದಕ್ಕೆ ಅಮಿತಾಭ್ ಬಚ್ಚನ್ ಕಡೆಯಿಂದ ಉತ್ತರ ಸಿಕ್ಕಿದೆ. ಕಮಲ್ ಹಾಸನ್ ಅವರನ್ನು ಭೇಟಿ ಮಾಡಿರುವ ಫೋಟೋನ ಅಮಿತಾಭ್ ಬಚ್ಚನ್ ತಮ್ಮ ಬ್ಲಾಗ್ ಅಲ್ಲಿ ಹಂಚಿಕೊಂಡಿದ್ದಾರೆ. ಈ ಮೂಲಕ 'ಕಲ್ಕಿ 2898 ಎಡಿ' ಚಿತ್ರದ ಸೀಕ್ವೆಲ್‌ಗೆ ಶೂಟಿಂಗ್ ಶುರುವಾಗಿದೆ ಎಂಬುದನ್ನು ಖಚಿತಪಡಿಸಿದ್ದಾರೆ. ಪ್ರತಿ ಭಾನುವಾರ ಅಮಿತಾಭ್ ಬಚ್ಚನ್ ಅವರು ಮನೆಯ ಬಳಿ ಅಭಿಮಾನಿಗಳನ್ನು ಭೇಟಿ ಮಾಡುತ್ತಾರೆ. ಆದರೆ, ಈ ಬಾರಿ ಅದು ಸಾಧ್ಯವಾಗಿಲ್ಲ. ಇದಕ್ಕೆ ಕಾರಣವನ್ನು ವಿವರಿಸಿದ್ದಾರೆ. ಶೂಟ್ ಕಾರಣಕ್ಕೆ ಅವರು ಹೈದರಾಬಾದ್ ಅಲ್ಲಿ ಇದ್ದಾರೆ. ಹೀಗಾಗಿ, ಅಭಿಮಾನಿಗಳ ಭೇಟಿ ಸಾಧ್ಯವಾಗಿಲ್ಲ ಎಂದು ಅವರು ಹೇಳಿದ್ದಾರೆ. ಅಮಿತಾಭ್ ಬಚ್ಚನ್ ಅವರಿಗೆ ಈ ವಯಸ್ಸಾಗಿದೆ. ಆದಾಗ್ಯೂ ಅಪರೂಪಕ್ಕೊಂದು ಸಿನಿಮಾ ಒಪ್ಪಿಕೊಂಡು ನಟಿಸುತ್ತಿದ್ದಾರೆ. 'ಕಲ್ಕಿ 2898 ಎಡಿ' ಚಿತ್ರದಲ್ಲಿ ಅವರು ಅಶ್ವತ್ಥಾಮ ಆಗಿ ನಟಿಸುತ್ತಿದ್ದಾರೆ.

# ಆಲಿಯಾ ಮೇಲೆ ನಂಬಿಕೆ



215 ಕೋಟಿ ಆಫರ್ ತಿರಸ್ಕಾರ

ಭಾರಿ ಬಜೆಟ್‌ನ ಆಕ್ಷನ್ ಸಿನಿಮಾಗಳು, ಸ್ಪೈ ಸಿನಿಮಾಗಳ ಮೇಲೆ ಬಂಡವಾಳ ಹೂಡುತ್ತಾ ಬಂದಿರುವ ಯಶ್ ರಾಜ್ ಫಿಲಮ್ಸ್, ಇದೀಗ ಮಹಿಳಾ ಪ್ರಧಾನ ಸ್ಪೈ ಥ್ರಿಲ್ಲರ್ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದು, ಸಿನಿಮಾಕ್ಕೆ ಆಲಿಯಾ ಭಟ್ ನಾಯಕಿ. ಸಿನಿಮಾಕ್ಕೆ 'ಆಲ್ಫಾ' ಎಂದು ಹೆಸರಿಡಲಾಗಿದೆ. ಈ ಸಿನಿಮಾಕ್ಕೆ ಬರೋಬ್ಬರಿ 215 ಕೋಟಿ ಆಫರ್ ಬಂದಿದ್ದರೂ ಸಹ ಅದನ್ನು ತಿರಸ್ಕಾರ ಮಾಡಿದೆ ಯಶ್ ರಾಜ್ ಫಿಲಮ್ಸ್. ಬಾಲಿವುಡ್‌ನ ಪ್ರತಿಷ್ಠಿತ ನಿರ್ಮಾಣ ಸಂಸ್ಥೆ ಯಶ್ ರಾಜ್ ಫಿಲ್ಮ್ಸ್, ಒಂದರ ಹಿಂದೊಂದು ಭಾರಿ ಬಜೆಟ್ ಸಿನಿಮಾಗಳನ್ನು ಮಾಡುತ್ತಿದೆ. ಸಲ್ಮಾನ್ ಖಾನ್, ಶಾರುಖ್ ಖಾನ್, ರಣ್‌ಬೀರ್ ಕಪೂರ್, ಹೃತಿಕ್ ರೋಷನ್, ಜೂ ಎನ್‌ಟಿಆರ್ ಹೀಗೆ ಒಬ್ಬರಾದ ಮೇಲೆ ಒಬ್ಬ ಸೂಪರ್ ಸ್ಟಾರ್ ನಟರ ಭಾರಿ ಬಜೆಟ್ ಸಿನಿಮಾಗಳ ಮೇಲೆ ಸಾವಿರಾರು ಕೋಟಿ ಹಣ ಸುರಿಯುತ್ತಿದೆ. ಭಾರಿ ಬಜೆಟ್‌ನ ಆಕ್ಷನ್ ಸಿನಿಮಾಗಳು, ಸ್ಪೈ ಸಿನಿಮಾಗಳ ಮೇಲೆ ಬಂಡವಾಳ ಹೂಡುತ್ತಾ ಬಂದಿರುವ ಯಶ್ ರಾಜ್ ಫಿಲಮ್ಸ್, ಇದೀಗ ಮಹಿಳಾ ಪ್ರಧಾನ ಸ್ಪೈ ಥ್ರಿಲ್ಲರ್ ಸಿನಿಮಾಗಳನ್ನು ನಿರ್ಮಾಣ ಮಾಡುತ್ತಿದ್ದು, ಸಿನಿಮಾಕ್ಕೆ ಆಲಿಯಾ ಭಟ್ ನಾಯಕಿ. ಸಿನಿಮಾಕ್ಕೆ 'ಆಲ್ಫಾ' ಎಂದು ಹೆಸರಿಡಲಾಗಿದೆ. ಈ ಸಿನಿಮಾಕ್ಕೆ ಬರೋಬ್ಬರಿ 215 ಕೋಟಿ ಆಫರ್ ಬಂದಿದ್ದರೂ ಸಹ ಅದನ್ನು ತಿರಸ್ಕಾರ ಮಾಡಿದೆ ಯಶ್ ರಾಜ್ ಫಿಲಮ್ಸ್. ಆಲಿಯಾ ಭಟ್ ಮತ್ತು ಶಾರ್ವರಿ ವಾಗ್ ಪ್ರಮುಖ ಪಾತ್ರದಲ್ಲಿ ನಟಿಸುತ್ತಿರುವ 'ಆಲ್ಫಾ' ಚಿತ್ರದ ಡಿಜಿಟಲ್ ಹಕ್ಕುಗಳನ್ನು ಖರೀದಿಸಲು ನೆಟ್‌ಫ್ಲಿಕ್ಸ್ ಮುಂದಾಗಿತ್ತು. ಇದಕ್ಕಾಗಿ ಭಾರಿ ಮೊತ್ತದ ಪ್ರಸ್ತಾಪವನ್ನು ಮುಂದಿಟ್ಟಿತ್ತು. ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡದೆ ನೇರವಾಗಿ ಒಟಿಟಿಯಲ್ಲಿ ಸ್ಟ್ರೀಮ್ ಮಾಡಲು ಈ ಆಫರ್ ನೀಡಲಾಗಿತ್ತು ಎನ್ನಲಾಗಿತ್ತು. ಇದಕ್ಕಾಗಿ 215 ಕೋಟಿ ರೂಪಾಯಿ ಹಣ ಆಫರ್ ನೀಡಲಾಗಿತ್ತು.

# ಪಾಕಿಸ್ತಾನ್ ಗೆದ್ದರೆ ಸೆಮಿಫೈನಲ್ ಪಂದ್ಯ ಶಿಫ್ಟ್!

ಟಿ20 ವಿಶ್ವಕಪ್‌ನ ಸೆಮಿಫೈನಲ್ ಪಂದ್ಯಗಳಿಗೆ ಮೂರು ಕ್ರೀಡಾಂಗಣಗಳನ್ನು ಫೈನಲ್ ಮಾಡಲಾಗಿದೆ. ಇಲ್ಲಿ ಟೀಮ್ ಇಂಡಿಯಾ ಫೈನಲ್‌ಗೆ ಪ್ರವೇಶಿಸಿದರೆ ಮೊದಲ ಸೆಮಿಫೈನಲ್ ಮ್ಯಾಚ್ ಭಾರತದಲ್ಲೇ ನಡೆಯಲಿದೆ. ಇನ್ನು ಪಾಕಿಸ್ತಾನ್ ತಂಡ ಮೊದಲ ಸೆಮಿಫೈನಲ್‌ಗೆ ಅರ್ಹತೆ ಪಡೆದರೆ ಆ ಪಂದ್ಯವು ಶ್ರೀಲಂಕಾದಲ್ಲಿ ನಡೆಯಲಿದೆ.

ಟಿ20 ವಿಶ್ವಕಪ್‌ನ ಮೊದಲ ಸುತ್ತಿನ ಪಂದ್ಯಗಳು ಮುಗಿದು ಸೂಪರ್-8 ಸುತ್ತು ಶುರುವಾಗಿದೆ. ಈ ಸುತ್ತಿನಲ್ಲಿ ಪಾಕಿಸ್ತಾನ್ ತಂಡ 2 ಪಂದ್ಯಗಳಲ್ಲಿ ಜಯ ಸಾಧಿಸಿದರೆ ಟಿ20 ವಿಶ್ವಕಪ್‌ನ ಮೊದಲ ಸೆಮಿಫೈನಲ್ ಪಂದ್ಯವು ಶಿಫ್ಟ್ ಆಗಲಿದೆ. ಅಂದರೆ ಟಿ20 ವಿಶ್ವಕಪ್‌ನ ಮೊದಲ ಪಂದ್ಯಕ್ಕೆ ಕೊಲ್ಕತ್ತಾದ ಈಡನ್ ಗಾರ್ಡನ್ಸ್ ಮೈದಾನವನ್ನು ನಿಗದಿ ಮಾಡಲಾಗಿದೆ. ಇದಾಗ್ಯೂ, ಪಾಕಿಸ್ತಾನ್ ತಂಡ ಮುಂದಿನ 2 ಪಂದ್ಯಗಳಲ್ಲಿ ಜಯ ಸಾಧಿಸಿದರೆ ಮೊದಲ ಸೆಮಿಫೈನಲ್ ಪಂದ್ಯವನ್ನು ಕೊಲಂಬೊದ ಆರ್. ಪ್ರೇಮದಾಸ ಸ್ಟೇಡಿಯಂನಲ್ಲಿ ಆಯೋಜಿಸಲಾಗುತ್ತದೆ.



ಪ್ರಸ್ತುತ ಟಿ20 ವಿಶ್ವಕಪ್ ಅನ್ನು ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಆಯೋಜಿಸುತ್ತಿದೆ. ಇದಾಗ್ಯೂ ಪಾಕಿಸ್ತಾನ್ ತಂಡವು ತನ್ನ ಎಲ್ಲಾ ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡುತ್ತಿದೆ. ಇದಕ್ಕೆ ಮುಖ್ಯ ಕಾರಣ ಪಾಕ್ ತಂಡವು ಭಾರತದಲ್ಲಿ ಪಂದ್ಯಾವಳಿ ಆಡಲು ಹಿಂದೇಟು ಹಾಕಿರುವುದು.

**ಕೊಲಂಬೊದಲ್ಲಿ ಸೆಮಿಫೈನಲ್:** ಪಾಕಿಸ್ತಾನ್ ತಂಡವು ಸೆಮಿಫೈನಲ್‌ಗೆ ಪ್ರವೇಶಿಸಿದರೆ ಆ ಪಂದ್ಯವನ್ನು ಕೊಲಂಬೊದಲ್ಲಿ ಆಯೋಜಿಸುವುದು ಪೂರ್ವ ನಿರ್ಧರಿತ. ಹೀಗಾಗಿ ಪಾಕ್ ತಂಡ ಸೆಮಿಫೈನಲ್‌ಗೆ ಪ್ರವೇಶಿಸಿದರೆ ಆರ್. ಪ್ರೇಮದಾಸ ಮೈದಾನದಲ್ಲಿ ಕಣಕ್ಕಿಳಿಯಲಿದೆ. ಶ್ರೀಲಂಕಾ ತಂಡವು ಸೆಮಿಫೈನಲ್‌ಗೇರಿದರೂ ಸೆಮಿಫೈನಲ್ ಪಂದ್ಯವನ್ನು ಕೊಲಂಬೊದಲ್ಲಿ ಆಯೋಜಿಸಲಿದ್ದಾರೆ. ಇದಕ್ಕೆ ಮುಖ್ಯ ಕಾರಣ ಆತಿಥೇಯ ದೇಶವಾಗಿರುವುದು. ಆದರೆ ಮೊದಲ ಸೆಮಿಫೈನಲ್‌ಗೆ ಭಾರತ ಮತ್ತು ಶ್ರೀಲಂಕಾ ಅರ್ಹತೆ ಪಡೆದರೆ ಆ ಪಂದ್ಯವನ್ನು ಕೊಲ್ಕತ್ತಾದಲ್ಲಿ ಆಯೋಜಿಸಲಾಗುತ್ತದೆ. ಅಂದರೆ ಇಲ್ಲಿ ಭಾರತ ಮೊದಲ ಸೆಮಿಫೈನಲ್‌ಗೆ ಅರ್ಹತೆ ಪಡೆಯದೇ ಶ್ರೀಲಂಕಾ ಅರ್ಹತೆ ಪಡೆದಿದ್ದರೆ ಮಾತ್ರ ಮೊದಲ ಸೆಮಿಫೈನಲ್ ಪಂದ್ಯವನ್ನು ಆರ್. ಪ್ರೇಮದಾಸ ಮೈದಾನದಲ್ಲಿ ಆಯೋಜಿಸಲು ನಿರ್ಧರಿಸಲಾಗಿದೆ.

# ಹುಬ್ಬಳ್ಳಿ ಸ್ಟೇಡಿಯಂ ಪೆವಿಲಿಯನ್‌ಗೆ ಜೋಶಿ ಹೆಸರು



ಹುಬ್ಬಳ್ಳಿಯ ಕೆಎಸ್‌ಸಿಎ ಕ್ರೀಡಾಂಗಣದ ಪೆವಿಲಿಯನ್‌ಗೆ ಕರ್ನಾಟಕದ ಮಾಜಿ ಆಟಗಾರ ಸುನಿಲ್ ಜೋಶಿ ಅವರ ಹೆಸರಿಡಲಾಗಿದೆ. ರಣಜಿ ಟ್ರೋಫಿ ಫೈನಲ್ ಪಂದ್ಯಕ್ಕೂ ಮುನ್ನ ನಡೆದ 'ಸುನಿಲ್ ಜೋಶಿ ಪೆವಿಲಿಯನ್' ಉದ್ಘಾಟನಾ ಕಾರ್ಯಕ್ರಮದಲ್ಲಿ ಬಿಸಿಸಿಐ ಗೌರವಾನ್ವಿತ ಅಧ್ಯಕ್ಷರಾದ ಮಿಥುನ್ ಮನ್ಹಾಸ್, ಕೆಎಸ್‌ಸಿಎ ಅಧ್ಯಕ್ಷರಾದ ಶ್ರೀ ವೆಂಕಟೇಶ್ ಪ್ರಸಾದ್, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ್ ಲಾಡ್ ಹಾಗೂ ಮಾಜಿ ಕ್ರಿಕೆಟಿಗ ಸುನಿಲ್ ಜೋಶಿ ಸೇರಿದಂತೆ ಪ್ರಮುಖರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಸುವರ್ಣ ಮಹೋತ್ಸವದ (50 ವರ್ಷಗಳು) ಸಂಭ್ರಮದ ಭಾಗವಾಗಿ ಮೂರು ಸ್ಟ್ಯಾಂಡ್‌ಗಳಿಗೆ ಮಾಜಿ ಕ್ರಿಕೆಟರುಗಳಾದ ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್ ಹಾಗೂ ಭಾರತ ಮಹಿಳಾ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಅವರ ಹೆಸರಿಡಲಾಗಿತ್ತು.

ಇದೀಗ ಗದಗ ಮೂಲದವರಾದ ಭಾರತದ ಮಾಜಿ ಸ್ಪಿನ್ನರ್ ಸುನಿಲ್ ಜೋಶಿ ಅವರ ಗೌರವಾರ್ಥವಾಗಿ ಹುಬ್ಬಳ್ಳಿ ಕ್ರೀಡಾಂಗಣದ ಪೆವಿಲಿಯನ್ ಬ್ಲಾಕ್‌ಗೆ ಅವರ ಹೆಸರನ್ನು ಇಡಲಾಗಿದೆ.


ಸುನಿಲ್ ಜೋಶಿ ಟೀಮ್ ಇಂಡಿಯಾ ಪರ 15 ಟೆಸ್ಟ್ ಹಾಗೂ 69 ಏಕದಿನ ಪಂದ್ಯಗಳನ್ನಾಡಿದ್ದಾರೆ.

# ಭರ್ಜರಿ ದಾಖಲೆ ಬರೆದ ಸ್ಮೃತಿ

ಆಸ್ಟ್ರೇಲಿಯಾ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಟೀಮ್ ಇಂಡಿಯಾ ಪರ ಸ್ಮೃತಿ ಮಂಧಾನ ಅರ್ಧಶತಕ ಬಾರಿಸಿ ಮಿಂಚಿದ್ದಾರೆ. ಈ ಹಾಫ್ ಸೆಂಚುರಿಯೊಂದಿಗೆ ಸ್ಮೃತಿ ಭರ್ಜರಿ ದಾಖಲೆಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಟೀಮ್ ಇಂಡಿಯಾದ ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ ಆಸ್ಟ್ರೇಲಿಯಾ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಭರ್ಜರಿ ಅರ್ಧಶತಕ ಬಾರಿಸಿದ್ದಾರೆ. ಈ ಅರ್ಧಶತಕದೊಂದಿಗೆ ಸ್ಮೃತಿ ಆಸ್ಟ್ರೇಲಿಯಾ ವಿರುದ್ಧ ವಿಶೇಷ ದಾಖಲೆ ನಿರ್ಮಿಸಿದ್ದಾರೆ. ಬ್ರಿಸ್ಬೇನ್‌ನಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತ ತಂಡಕ್ಕೆ ಸ್ಮೃತಿ ಮಂಧಾನ ಉತ್ತಮ ಆರಂಭ ಒದಗಿಸಿದ್ದರು. ಅಲ್ಲದೆ ಕೇವಲ 57 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ್ದರು. ಈ ಹಾಫ್ ಸೆಂಚುರಿಯೊಂದಿಗೆ ಆಸ್ಟ್ರೇಲಿಯಾ ವಿರುದ್ಧ ಅತ್ಯಧಿಕ ಬಾರಿ 50+ ಸ್ಕೋರ್‌ಗಳಿಸಿದ ಏಷ್ಯನ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಸ್ಮೃತಿ ಮಂಧಾನ ಆಸ್ಟ್ರೇಲಿಯಾ ವಿರುದ್ಧ ಈವರೆಗೆ 22 ಏಕದಿನ ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 4 ಶತಕ ಹಾಗೂ 7 ಅರ್ಧಶತಕಗಳನ್ನು ಬಾರಿಸಿದ್ದಾರೆ. ಈ ಮೂಲಕ ಆಸೀಸ್ ಪಡೆ ವಿರುದ್ಧ ಅತ್ಯಧಿಕ ಬಾರಿ 50+ ಸ್ಕೋರ್‌ಗಳಿಸಿದ ಏಷ್ಯನ್ ಬ್ಯಾಟರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಮಿಥಾಲಿ ರಾಜ್ ಬಳಿಕ ಆಸ್ಟ್ರೇಲಿಯಾ ವಿರುದ್ಧ ಏಕದಿನ ಕ್ರಿಕೆಟ್‌ನಲ್ಲಿ 1000 ರನ್ ಕಲೆಹಾಕಿದ 2ನೇ ಭಾರತೀಯ ಮಹಿಳಾ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನು ಕೂಡ ಸ್ಮೃತಿ ಮಂಧಾನ ತಮ್ಮದಾಗಿಸಿಕೊಂಡಿದ್ದಾರೆ. ಸ್ಮೃತಿ ಈವರೆಗೆ ಆಸೀಸ್ ವಿರುದ್ಧ 1,078 ರನ್ ಕಲೆಹಾಕಿದ್ದಾರೆ.



# ಐಪಿಎಲ್ ಆರಂಭಕ್ಕೂ ಮುನ್ನ ಲಕ್ನೋ ತಂಡದ ಹೊಸ ಲೋಗೋ ಅನಾವರಣ





2026 ರ ಟಿ20 ವಿಶ್ವಕಪ್ ಮುಗಿದ ಬಳಿಕ ಕೆಲವೇ ಕೆಲವು ದಿನಗಳಲ್ಲಿ ಐಪಿಎಲ್ ಸೀಸನ್ ಆರಂಭವಾಗಲಿದೆ. ವೇಳಾಪಟ್ಟಿ ಕೂಡ ಇಷ್ಟರಲ್ಲೇ ಪ್ರಕಟವಾಗಲಿದೆ. ಸದ್ಯದ ಮಾಹಿತಿ ಪ್ರಕಾರ ಮಾರ್ಚ್ ಕೊನೆಯ ವಾರದಿಂದ ಐಪಿಎಲ್ ಆರಂಭವಾಗಬಹುದು. ಆದರೆ ಅದಕ್ಕೂ ಮುನ್ನ, ಲಕ್ನೋ ಸೂಪರ್ ಜೈಂಟ್ಸ್ ಫ್ರಾಂಚೈಸಿ ತನ್ನ ಲೋಗೋವನ್ನು ಬದಲಾಯಿಸಿದೆ. ಅದಕ್ಕೆ ಸಂಬಂಧಿಸಿದ ಫೋಟೋಗಳು ಮತ್ತು ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿವೆ.

ಲಕ್ನೋ ತಂಡದ ಹಿಂದಿನ ಲೋಗೋದಲ್ಲಿ ರೆಕ್ಕೆಗಳ ನಡುವೆ ಬ್ಯಾಟ್ ಮತ್ತು ಚೆಂಡನ್ನು ಒಳಗೊಂಡಿತ್ತು. ಇದೀಗ ಹೊಸ ಲೋಗೋ ಲಕ್ನೋ ಮತ್ತು ಉತ್ತರ ಪ್ರದೇಶದ ಸಂಸ್ಕೃತಿಯನ್ನು ಸಾಕಾರಗೊಳಿಸುವ ಮೂರು ಚಿಹ್ನೆಗಳನ್ನು ಒಳಗೊಂಡಿದೆ. ಎಡ ಮತ್ತು ಬಲಭಾಗದಲ್ಲಿರುವ ರೆಕ್ಕೆಗಳು ಗರುಡನನ್ನು ಪ್ರತಿನಿಧಿಸುತ್ತವೆ, ಮಧ್ಯದಲ್ಲಿ ರಾಜತ್ವ ಮತ್ತು ಶಕ್ತಿಯನ್ನು ಸಂಕೇತಿಸುವ ಕಿರೀಟ ಮತ್ತು ಮಧ್ಯದಲ್ಲಿ ಆನೆ, ಎಲ್‌ಎಸ್‌ಜಿ ತಂಡದೊಂದಿಗೆ ಗಣೇಶನ ಉಪಸ್ಥಿತಿಯನ್ನು ಸಂಕೇತಿಸುತ್ತದೆ.

ಆರ್‌ಪಿಎಸ್‌ಜಿ ಗ್ರೂಪ್‌ನ ಉಪಾಧ್ಯಕ್ಷ ಶಾಶ್ವತ್ ಗೋಯೆಂಕಾ, ಹೊಸ ಲೋಗೋ ಇಡೀ ಎಲ್‌ಎಸ್‌ಜಿ ತಂಡದ ಚೈತನ್ಯವನ್ನು ಸಾಕಾರಗೊಳಿಸುತ್ತದೆ ಎಂದಿದ್ದಾರೆ. 'ಲೋಗೋದಲ್ಲಿರುವ ಹದ್ದು, ತಂಡವು ಹೊಸ ಎತ್ತರವನ್ನು ತಲುಪಲು ಸ್ಫೂರ್ತಿ ನೀಡುತ್ತದೆ, ಮಧ್ಯದಲ್ಲಿರುವ ಕಿರೀಟವು ತಂಡದ ದೃಢನಿಶ್ಚಯ ಮತ್ತು ಹೆಮ್ಮೆಯನ್ನು ಸಂಕೇತಿಸುತ್ತದೆ ಮತ್ತು ಆನೆ ಈ ಪ್ರದೇಶದ ಶಕ್ತಿಯನ್ನು ಪ್ರತಿನಿಧಿಸುತ್ತದೆ ಎಂದು ಅವರು ವಿವರಿಸಿದ್ದಾರೆ.

2022 ರಲ್ಲಿ ಐಪಿಎಲ್‌ಗೆ ಪಾದಾರ್ಪಣೆ ಮಾಡಿದ ಲಕ್ನೋ ತಂಡವು ಇನ್ನೂ ಒಂದೇ ಒಂದು ಸೀಸನ್ ಗೆದ್ದಿಲ್ಲ. 2022 ಮತ್ತು 2023 ರಲ್ಲಿ ಪ್ಲೇಆಫ್ ತಲುಪಿತ್ತಾದರೂ ಪ್ರಶಸ್ತಿಯನ್ನು ಗೆಲ್ಲುವಲ್ಲಿ ವಿಫಲವಾಗಿತ್ತು. ಆ ನಂತರ 2024 ಮತ್ತು 2025 ರ ಐಪಿಎಲ್ ಸೀಸನ್‌ಗಳಲ್ಲಿ, ಲಕ್ನೋ ಸೂಪರ್ ಜೈಂಟ್ಸ್ 7 ನೇ ಸ್ಥಾನದಲ್ಲಿ ಮುಗಿಸಿತ್ತು. ಪ್ರಸ್ತುತ, 10 ಐಪಿಎಲ್ ತಂಡಗಳಲ್ಲಿ, ಫೈನಲ್ ತಲುಪದ ಏಕೈಕ ತಂಡ ಲಕ್ನೋ. ಹೊಸ ಲೋಗೋ ಅವರ ಅದೃಷ್ಟವನ್ನು ಬದಲಾಯಿಸುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ.

# ಚೊಚ್ಚಲ ಶತಕ ಸಿಡಿಸಿದ ಶುಭಂ



ಕರ್ನಾಟಕದ ಹುಬ್ಬಳ್ಳಿ ಜಿಲ್ಲೆಯಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಫೈನಲ್‌ನಲ್ಲಿ ಕರ್ನಾಟಕ ಹಾಗೂ ಜಮ್ಮು ಮತ್ತು ಕಾಶ್ಮೀರ ತಂಡಗಳು ಮುಖಾಮುಖಿಯಾಗಿವೆ. ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಜಮ್ಮು ಮತ್ತು ಕಾಶ್ಮೀರ ಪರ 27 ವರ್ಷದ ಶುಭಂ ಪುಂಡೀರ್ ಅಜೇಯ ಶತಕ ಬಾರಿಸಿ ತಂಡವನ್ನು ಸುಭದ್ರ ಸ್ಥಿತಿಗೆ ಕೊಂಡೊಯ್ದಿದ್ದಾರೆ. ಶುಭಂ ಪುಂಡೀರ್ 186 ನೇ ಎಸೆತದಲ್ಲಿ ಬೃಹತ್ ಸಿಕ್ಸರ್ ಬಾರಿಸುವ ಮೂಲಕ ತಮ್ಮ ಶತಕವನ್ನು ಪೂರ್ಣಗೊಳಿಸಿ ಇತಿಹಾಸ ನಿರ್ಮಿಸಿದರು. ಇದೀಗ ಶುಭಂ ರಣಜಿ ಟ್ರೋಫಿ ಫೈನಲ್‌ನಲ್ಲಿ ಶತಕ ಗಳಿಸಿದ ಜಮ್ಮು ಮತ್ತು ಕಾಶ್ಮೀರದ ಮೊದಲ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಶುಭಂ ಪುಂಡಿರ್ 186 ಎಸೆತಗಳಲ್ಲಿ 10 ಬೌಂಡರಿ ಮತ್ತು ಎರಡು ಸಿಕ್ಸರ್‌ಗಳನ್ನು ಬಾರಿಸಿ ಶತಕ ಪೂರೈಸಿದರು. ಇದು ರಣಜಿ ಟ್ರೋಫಿ ನಾಕೌಟ್ ಪಂದ್ಯದಲ್ಲಿ ಅವರ ಮೊದಲ ಶತಕ ಮತ್ತು ಅವರ ಪ್ರಥಮ ದರ್ಜೆ ವೃತ್ತಿಜೀವನದಲ್ಲಿ ಅವರ ನಾಲ್ಕನೇ ಶತಕವಾಗಿದೆ. ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್ ಮತ್ತು ಸೆಮಿಫೈನಲ್‌ನಲ್ಲಿ ಶುಭಂ ಪುಂಡಿರ್ ಅವರ ಬ್ಯಾಟ್ ಈ ಹಿಂದೆ ಮೌನವಾಗಿತ್ತು ಎಂಬುದನ್ನು ಗಮನಿಸಬೇಕಾದ ಸಂಗತಿ. ಆ ಎರಡು ಪಂದ್ಯಗಳ ನಾಲ್ಕು ಇನ್ನಿಂಗ್ಸ್‌ಗಳಲ್ಲಿ ಅವರು ಕೇವಲ 40 ರನ್ ಬಾರಿಸಿದ್ದರು. ಆದಾಗ್ಯೂ, ಫೈನಲ್‌ನಂತಹ ಭವ್ಯ ವೇದಿಕೆಯಲ್ಲಿ ಶತಕ ಗಳಿಸುವ ಮೂಲಕ, ಶುಭಂ ಪುಂಡಿರ್ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದರು. ಪ್ರಸ್ತುತ ರಣಜಿ ಟ್ರೋಫಿ ಆವೃತ್ತಿಯಲ್ಲಿ ಇದು ಅವರ ಎರಡನೇ ಶತಕವಾಗಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966